ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

Karnataka Scout & Guide
Monthly Magazine

| | | | | |
|---|---|---|---|---|
| Vol -66 | Issue -02 | February 2025 | Pages: 36 | Annual Subscription: ₹ 100/- |
| ಸಂಪುಟ: 66 | ಸಂಚಿಕೆ: 02 | ಫೆಬ್ರವರಿ 2025 | ಪುಟಗಳು: 36 | ವಾರ್ಷಿಕ ಚಂದ ರೂ. 100/- |

# INAUGURATION OF DIAMOND JUBILEE JAMBOREE OF BHARAT SCOUTS AND GUIDES, INDIA



**Sri Udayanidhi Stalin, Hon'ble Deputy Chief Minister, Govt. of Tamil Nadu INAUGURATED THE DIAMOND JUBILEE JAMBOREE of the Bharat Scouts and Guides, India on 28th January 2025 at Tirichi, Tamil Nadu. Sri D.K. Shivakumar, Hon'ble Deputy Chief Minister, Govt. of Karnataka, Sri U.T. Khadar, Hon'ble Speaker, Karnataka Legislative Assembly, Sri Anilkumar Jain, President and Sri K.K. Khandelwal, Chief National Commissioner Bharat Scouts & Guides, India and other Guests are seen.**



ಫೆಬ್ರವರಿ 05 ರಂದು ದಕ್ಷಿಣ ಕನ್ನಡ ಜಿಲ್ಲಾ ತರಬೇತಿ ಕೇಂದ್ರದಲ್ಲಿ 'ಯುವ ಶಕ್ತಿ ಕೇಂದ್ರ ಸಭಾಭವನ'ವನ್ನು ಶ್ರೀ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಸ್ಕೌಟಿಂಗ್ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪಾವೆಲ್‌ರವರ ಮರಿಮೊಮ್ಮಗ ಶ್ರೀ ಡೇವಿಡ್ ರಾಬರ್ಟ್ ಬೇಡನ್ ಪಾವೆಲ್ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಡೇವಿಡ್ ರಾಬರ್ಟ್ ಬೇಡನ್ ಪಾವೆಲ್‌ರವರನ್ನು ಡಾ|| ಎಂ. ಮೋಹನ್ ಆಳ್ವಾ, ಜಿಲ್ಲಾ ಮುಖ್ಯ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ ಇವರು ಸನ್ಮಾನಿಸಿದರು. ಶಾಸಕರಾದ ಶ್ರೀ ಉಮಾನಾಥ್ ಕೋಟ್ಯಾನ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ, ಮಾಜಿ ಸಚಿವ ಶ್ರೀ ಅಭಯಚಂದ್ರ ಜೈನ್, ಮಾಜಿ ಶಾಸಕರಾದ ಶ್ರೀ ಮಂಜುನಾಥ್ ಭಂಡಾರಿ, ಜಿಲ್ಲಾಧಿಕಾರಿ ಶ್ರೀ ಮುಲ್ಲೈ ಮುಗಿಲನ್, ಮೂಡಾ ಅಧ್ಯಕ್ಷ ಶ್ರೀ ಸದಾಶಿವ ಉಳ್ಳಾಲ, ಪರಿಸರ ಮತ್ತು ಮೌಲ್ಯಮಾಪನ ಸಮಿತಿ ಅಧ್ಯಕ್ಷ ಹಾಗೂ ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ಶ್ರೀ ಎಂ. ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ ಅಂತರರಾಷ್ಟ್ರೀಯ ಅಪರ ಆಯುಕ್ತರಾದ ಶ್ರೀ ಎ.ಎಸ್. ಮಧುಸೂದನ್, ಎಂ.ಆರ್‌ಪಿ.ಎಲ್‌ನ ಶ್ರೀ ಸಂಪತ್ ರೈ, ಜಿಲ್ಲಾ ಮುಖ್ಯ ಆಯುಕ್ತರುಗಳಾದ ಶ್ರೀ ಎಂ.ಎನ್. ಷಡಾಕ್ಷರಿ, ಶ್ರೀ ಜಯಾಕರ್ ಶೆಟ್ಟಿ ಇಂದ್ರಾಳಿ, ಜಿಲ್ಲಾ ಆಯುಕ್ತರುಗಳಾದ ಶ್ರೀ ಬಿ.ಎಂ. ತುಂಬೆ, ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಶ್ರೀಮತಿ ವಿಮಲಾ ರಂಗಯ್ಯ, ಜಿಲ್ಲಾ ಉಪನಿರ್ದೇಶಕರಾದ ಶ್ರೀ ಗೋವಿಂದ ಮಡಿವಾಳ, ಶ್ರೀಮತಿ ರಾಜಲಕ್ಷ್ಮಿ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶ್ರೀ ಶ್ರೀಧರ್, ಶ್ರೀ ಕಿಶೋರ್ ಆಳ್ವಾ, ಶ್ರೀ ಲಕ್ಷ್ಮೀಶ್ ಭಂಡಾರಿ, ಶ್ರೀ ಪುಷ್ಪರಾಜ್ ಜೈನ್, ಶ್ರೀ ಪ್ರದೀಪ್ ದುರ್ಗ, ಶ್ರೀ ರವೀಂದ್ರ ಆಳ್ವಾ ಮತ್ತಿತರರು ಉಪಸ್ಥಿತರಿದ್ದರು.



ಫೆಬ್ರವರಿ 20ರಂದು ಬೆಂಗಳೂರು ಪೂರ್ವಜಿಲ್ಲೆಯ ಆನೇಕಲ್‌ನಲ್ಲಿ ನಡೆದ ಜಿಲ್ಲಾ ಮಟ್ಟದ 'ಸ್ಕೌಟ್ಸ್–ಗೈಡ್ಸ್ ಮೇಳ'ದಲ್ಲಿ ಉದ್ಘಾಟನೆಯನ್ನು ಮಾನ್ಯ ಸಾರಿಗೆ ಹಾಗೂ ಮುಜರಾಯಿ ಇಲಾಖೆಗಳ ಸಚಿವರಾದ ಶ್ರೀ ರಾಮಲಿಂಗರೆಡ್ಡಿ ಅವರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ನೆರವೇರಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಸ್. ವೆಂಕಟೇಶ್, ಶ್ರೀ ಚಿನ್ನಸ್ವಾಮಿ ರೆಡ್ಡಿ, ರಾಜ್ಯ ಆಯುಕ್ತರು (ವ.ಸಂ.), ಶ್ರೀ ಎ.ಎನ್. ನರೇಂದ್ರಕುಮಾರ್, ಜಿಲ್ಲಾ ಕಾರ್ಯದರ್ಶಿ ಇತರ ಜಿಲ್ಲಾ ಹಾಗೂ ಸ್ಥಳೀಯ ಪದಾಧಿಕಾರಿಗಳು, ಸ್ಕೌಟ್ಸ್–ಗೈಡ್ಸ್‌ಗಳು, ದಳನಾಯಕರುಗಳು ಭಾಗವಹಿಸಿದ್ದರು.

**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸಂಚಾಲಕರು**

ಬಿ.ಎಸ್. ರವೀಂದ್ರ

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಚಳ್ಳಕೆರೆ ಯರ್ರಿಸ್ವಾಮಿ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಡಾ. ವಸುಂಧರ ಭೂಪತಿ

ಡಾ. ಶಕುಂತಲ

ಪ್ರಭಾವತಿ ಪಾಟೀಲ್

ಸಂಚಿಕೆಯ ವಾರ್ಷಿಕ ಚಂದಾ ರೂ. 100/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.


# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸ ಪತ್ರಿಕೆ

# KARNATAKA Scout & Guide

MONTHLY NEWS MAGAZINE


Vol: 66 Issue: 02 February 2025


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಮಾರ್ಚ್ 2025ರ ಮಾಹೆಯ ಕಾರ್ಯಕ್ರಮಗಳ ವಿವರಗಳು ...05

ಸಂಪಾದಕೀಯ ...06

THE DIAMOND JUBILEE JAMBOREE Report ...07

Felicitation Programme to Mr. David Robert Baden Powell ...10

ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ, ಯುವ ದಿನಾಚರಣೆ ಅಂಗವಾಗಿ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರ ವಿವರಗಳು ...11

ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಸಂದರ್ಭದಲ್ಲಿ ಸ್ಕೌಟ್ಸ್–ಗೈಡ್ಸ್‌ಗಳು ಬರೆದಿರುವ ಪ್ರಬಂಧಗಳು ...12

ರಾಜ್ಯ ಮಟ್ಟದ ರೇಂಜರ್ ಲೀಡರ್ಸ್‌ಗಳ ಹಿಮಾಲಯ ವೃಕ್ಷಮಣೆ (ಹೆಚ್‌ಡಬ್ಲ್ಯೂಬಿ) ತರಬೇತಿ ಶಿಬಿರ ಹಾಗೂ ಮ್ಯಾಪಿಂಗ್/ ಸ್ಟಾರ್ ಗೇಜಿಂಗ್ ಮತ್ತು ಪ್ರಥಮ ಚಿಕಿತ್ಸೆ ತರಬೇತಿ ಶಿಬಿರಗಳ ಸಂಕ್ಷಿಪ್ತ ವರದಿ ...14

ಜಿಲ್ಲಾ ವಾರ್ತೆಗಳು ...15

ಹೊರಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು–5
ಶುದ್ಧ ನೀರು: ಶಿಬಿರದ ಆದ್ಯತೆ ...31

ಭಾರತ ಮತ್ತು ಅಮೇರಿಕಾದಲ್ಲಿ ಸ್ಕೌಟಿಂಗ್ ಚಟುವಟಿಕೆ – ಒಂದು ತುಲನೆ ...31

ಶ್ರದ್ಧಾಂಜಲಿ ...33


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್‌ನ ಪುಸ್ತಕಗಳನ್ನು ಓದಲು ಕೆಳಗಿನ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಕಲ ಸ್ಕೌಟ್ಸ್ ಗೈಡ್ಸ್ ಬಂಧುಗಳಿಗೆ ಮಹಾಶಿವರಾತ್ರಿಯ ಹಾರ್ದಿಕ ಶುಭಾಶಯಗಳು. ಸರ್ವಶಕ್ತನಾದ ಮಹಾಶಿವನು ಎಲ್ಲರಿಗೂ ಸುಖ, ಶಾಂತಿ ಮತ್ತು ಸಮೃದ್ದಿಯನ್ನು ಕರುಣಿಸಲೆಂದು ಸ್ಕೌಟ್ಸ್-ಗೈಡ್ಸ್ ಚಳುವಳಿಯ ಮತ್ತಷ್ಟು ಬಲವರ್ಧನೆಗೆ ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇನೆ.

ಫೆಬ್ರವರಿ ತಿಂಗಳು ರಾಜ್ಯದಲ್ಲಿ ನಮ್ಮ ಚಳುವಳಿಗೆ ಅತ್ಯಂತ ಸಂತೃಪ್ತಿಯನ್ನು ತಂದಿದೆ. ವಿಶ್ವ ನಾಯಕ ಲಾರ್ಡ್ ಬೇಡೆನ್ ಪೋವೆಲ್ ಮರಿಮೊಮ್ಮಗ ಹಾಗೂ ವಿಶ್ವ ಸ್ಕೌಟ್ ಗೈಡ್ ಚಳುವಳಿಯ ರಾಯಭಾರಿ, ಶ್ರೀ ಡೇವಿಡ್ ರಾಬರ್ಟ್ ಬೇಡೆನ್ ಪೋವೆಲ್ ಅವರು ಒಂದು ವಾರಗಳ ಕಾಲ ರಾಜ್ಯದಲ್ಲಿದ್ದು, ನಮ್ಮ ಸಂಸ್ಥೆಯ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಅವುಗಳನ್ನು ಸ್ಮರಣೀಯವಾಗಿಸಿದ್ದಾರೆ. ರಾಜ್ಯಾದ್ಯಂತ ಹಲವಾರು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ರ್‍ಯಾಲಿಗಳು ಯಶಸ್ವಿಯಾಗಿ ಆಯೋಜಿಸಲ್ಪಟ್ಟಿವೆ. ಪ್ರಥಮ, ದ್ವಿತೀಯ ಮತ್ತು ತೃತೀಯ ಚರಣ / ಸೋಪಾನ ಪರೀಕ್ಷಾ ಶಿಬಿರಗಳು, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪೂರಕ ಮಾಹಿತಿ ಕಾರ್ಯಾಗಾರಗಳು ಮತ್ತು ರಸ್ತೆ ಸುರಕ್ಷತಾ ಜಾಥಾಗಳು ಯಶಸ್ವಿಯಾಗಿ ನಡೆದಿವೆ. ಹಲವಾರು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭಗಳಲ್ಲಿ ಸ್ಕೌಟ್ಸ್ ಗೈಡ್ಸ್ ಚಳುವಳಿಗೆ ಮಹತ್ವವನ್ನು ನೀಡಲಾಗಿದೆ. ನಾನು ಕುಂದಾಪುರದ ಮದರ್ ಥೆರೆಸಾ ಶಾಲೆ, ಕೊಪ್ಪಳ ಜಿಲ್ಲೆಯ ಕನಕಗಿರಿಯ ಎಕ್ಸೆಲ್ ಶಾಲೆ ಮತ್ತು ಕೊಪ್ಪಳದ ನ್ಯೂ ಎಕ್ಸೆಲೆಂಟ್ ಶಾಲೆ, ಹೀಗೆ ಕೆಲವು ಶಾಲೆಗಳ ವಾರ್ಷಿಕೋತ್ಸವ ಕಾರ್ಯಕ್ರಮಗಳಿಗೆ ಆಹ್ವಾನಿತನಾಗಿ ಭಾಗವಹಿಸಿದ್ದೇನೆ. ಅಲ್ಲೆಲ್ಲ ಸ್ಕೌಟ್ಸ್ ಗೈಡ್ಸ್ ಚಳುವಳಿಯ ಬೆಳವಣಿಗೆಯನ್ನು ಕಂಡು ಅತ್ಯಂತ ಸಂತೋಷವಾಗಿದೆ.

ಫೆಬ್ರವರಿ 22 ರಂದು ನಾವು ಸ್ಕೌಟ್ ಮತ್ತು ಗೈಡ್ಸ್ ಚಿಂತನಾ ದಿನವನ್ನು ಸಮರ್ಪಕವಾಗಿ ಹಾಗೂ ವಿನೂತನ ರೀತಿಯಲ್ಲಿ ಆಚರಿಸಿದ್ದೇವೆ. ರಾಜ್ಯಾದ್ಯಂತ ನಮ್ಮ ಮುಖಂಡರು, ದಳನಾಯಕರು, ಶಿಕ್ಷಕರು ಮತ್ತು ಮಕ್ಕಳು ಆ ದಿನದಂದು ವೈವಿಧ್ಯಮಯ ಹಾಗೂ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಆಯೋಜಿಸಿ, ಶ್ಲಾಘನೀಯ ಮತ್ತು ಮೆಚ್ಚುಗೆ ಗಳಿಸಿದ್ದಾರೆ. ಪ್ರತಿಯೊಬ್ಬರಿಗೂ ಅಭಿನಂದನೆಗಳು.

ಇನ್ನು ಬೆಂಗಳೂರಿನ ಪ್ರತಿಷ್ಠಿತ ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಯವರ ವಿಶಾಲ ಮತ್ತು ಸುಸಜ್ಜಿತ ಆಡಿಟೋರಿಯಂನಲ್ಲಿ ರಾಜ್ಯ ಮಟ್ಟದ 'ಚಿಂತನಾ ದಿನಾಚರಣೆ'ಯನ್ನು ಅದ್ಭುತವಾಗಿ ಆಚರಿಸಿದ್ದೇವೆ. ಈ ಸಂದರ್ಭದಲ್ಲಿ ಆಯೋಜನೆಗೊಂಡಿದ್ದ ಸ್ಕೌಟರ್-ಗೈಡರ್ ಸಮಾವೇಶ, ರಾಜ್ಯಮಟ್ಟದ ಮೆಡಲ್ ಆಫ್ ಮೆರಿಟ್ ಪ್ರಶಸ್ತಿಗಳ ವಿತರಣೆ, ಹಾಗೂ ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ / ಶಿಕ್ಷಕಿ ಪ್ರಶಸ್ತಿಗಳಿಗೆ ಭಾಜರಾಗಿರುವ ನಮ್ಮ ಶಿಕ್ಷಕರನ್ನು ಅಭಿನಂದಿಸುವ ಕಾರ್ಯಕ್ರಮಗಳು ಸಂದರ್ಭೋಚಿತವಾಗಿದ್ದವು. ವಿಶೇಷವಾಗಿ ಅಂದು ಆಯೋಜಿಸಲಾಗಿದ್ದ ಹಿಮಾಲಯ ವುಡ್ ಬ್ಯಾಡ್ಜ್, ವೃಕ್ಷಮಣಿಧಾರಕರಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದ ಕಾರ್ಯಕ್ರಮ ಆ ದಿನವನ್ನು ವಿಶೇಷಗೊಳಿಸಿತು ಮಾತ್ರವಲ್ಲ ರಾಜ್ಯಸಂಸ್ಥೆಯ ಪ್ರತಿಷ್ಠೆಯನ್ನು ಹೆಚ್ಚಿಸಿತು. ಈ ಎಲ್ಲಾ ಕಾರ್ಯಕ್ರಮಗಳು ಅರ್ಥಪೂರ್ಣ ಮತ್ತು ಭಾವನಾತ್ಮಕವಾಗಿದ್ದವು. ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಮತ್ತು ಭಾಗವಹಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳು.

ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆ, ಶ್ರೀ ಎ.ಎನ್. ನರೇಂದ್ರ ಕುಮಾರ್ ಅವರ ಪ್ರಯತ್ನ ಮತ್ತು ಶ್ರೀ ಚಿನ್ನಸ್ವಾಮಿ ರೆಡ್ಡಿ ಅವರ ಮಾರ್ಗದರ್ಶನದಲ್ಲಿ ಫೆಬ್ರವರಿ 21 ರಂದು ಆನೇಕಲ್ ನಲ್ಲಿ ಜಿಲ್ಲಾ ಮಟ್ಟದ ಸ್ಕೌಟರ್ ಮತ್ತು ಗೈಡರ್ ಸಮಾವೇಶವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಮಹತ್ವದ ಸಮಾವೇಶದಲ್ಲಿ ಭಾಗವಹಿಸಿದ್ದ ಕರ್ನಾಟಕ ಸರ್ಕಾರದ ಮಾನ್ಯ ಸಾರಿಗೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಅವರು, ದೊಡ್ಡಬಳ್ಳಾಪುರದ ನಮ್ಮ ಶಿಬಿರ ಕೇಂದ್ರದಲ್ಲಿ ಸುಮಾರು 100 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಭವನ ನಿರ್ಮಿಸುವ ಒತ್ತಾಸೆಯನ್ನು ವ್ಯಕ್ತಪಡಿಸಿದರಲ್ಲದೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕಾರ್ಯರೂಪಕ್ಕೆ ತರುವ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದ್ದಾರೆ. ಇದರಿಂದ ನಮ್ಮ ಸಂಸ್ಥೆಗೆ ಹೆಚ್ಚಿನ ಶಕ್ತಿ ಬಂದಂತಾಗಿದೆ. ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶಿವಮೊಗ್ಗ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾಗಿ ಅತ್ಯಂತ ಸಮರ್ಪಣಾ ಭಾವದಿಂದ ಸೇವೆ ಸಲ್ಲಿಸುತ್ತಿದ್ದ ಶ್ರೀ ಕೆ.ಪಿ. ಬಿಂದುಕುಮಾರ್ ಅವರು ಇತ್ತೀಚೆಗೆ ನಮ್ಮನ್ನಗಲಿರುವುದು ಚಳುವಳಿಗೆ ಅಪಾರ ನಷ್ಟವಾಗಿದೆ. ಶ್ರೀಯುತರು ಅವರ ತಂದೆಯವರ ಕಾಲದಿಂದಲೂ ಸ್ಕೌಟ್ಸ್ ಗೈಡ್ಸ್ ಚಳುವಳಿಗೆ ನೀಡಿದ ಸೇವೆ ಅಪಾರವಾಗಿದ್ದು, ರಾಜ್ಯ ಸಂಸ್ಥೆಯ ಪರವಾಗಿ ಮತ್ತು ವೈಯಕ್ತಿಕವಾಗಿ ನಾನು ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತೇನೆ ಹಾಗು ನಮ್ಮ ರಾಜ್ಯ ಸಂಸ್ಥೆಯ ಸಂಘಟನಾ ಆಯುಕ್ತರಾದ ಶ್ರೀಮತಿ ಸಿ. ಮಂಜುಳಾ ಅವರ ತಾಯಿ ಯವರಾದ ಶ್ರೀಮತಿ ಚಂದ್ರಮ್ಮ ರವರು ಇತ್ತೀಚೆಗೆ ನಿಧನ ಹೊಂದಿದ್ದಾರೆ. ಶ್ರೀಮತಿ ಮಂಜುಳಾ ಮತ್ತು ಅವರ ಕುಟುಂಬದವರಿಗೆ ನನ್ನ ಸಾಂತ್ವನವನ್ನು ಹಾಗೂ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇನೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಮಾರ್ಚ್ 2025ರ ಮಾಹೆಯ ಕಾರ್ಯಕ್ರಮಗಳ ವಿವರಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಆಯುಕ್ತರುಗಳ ಪ್ರಾಥಮಿಕ ತರಬೇತಿ ಶಿಬಿರ | 01.03.2025 ರಿಂದ 05.03.2025 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 2 | ರಾಜ್ಯ ಮಟ್ಟದ ಮಹಿಳಾ ದಿನಾಚರಣೆ | 08.03.2025 | ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಮೈಸೂರು ಜಿಲ್ಲೆ |
| 3 | ರಾಜ್ಯ ಮಟ್ಟದ ರೋವರ್ಸ್-ರೇಂಜರ್ಸ್ ಚಾರಣ ಶಿಬಿರ | 10.03.2025 ರಿಂದ 12.03.2025 | ಕೊಲ್ಲೂರು, ಉಡುಪಿ ಜಿಲ್ಲೆ |
| 4 | ರಾಜ್ಯ ಮಟ್ಟದ ರೋವರ್ಸ್- ರೇಂಜರ್ಸ್ ಕರಾವಳಿ ಚಾರಣ ಶಿಬಿರ | 19.03.2025 ರಿಂದ 22.03.2025 | ಶ್ರೀ ಸಿದ್ಧಿವಿನಾಯಕ ದೇವಸ್ಥಾನ, ಆನೆಗುಡ್ಡೆ, ಕುಂದಾಪುರ, ಉಡುಪಿ ಜಿಲ್ಲೆ |
| 5 | National Level SDG Workshop for Rovers Rangers & Young Unit Leaders | 24.03.2025 ರಿಂದ 28.03.2025 | ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ, ಮೂಡುಬಿದಿರೆ, ದಕ್ಷಿಣ ಕನ್ನಡ ಜಿಲ್ಲೆ |
| 6 | ಎಸ್.ಎಸ್.ಎಲ್.ಸಿ. ರಾಜ್ಯ ಮಟ್ಟ ದ ಪರೀಕ್ಷಾ ಕೇಂದ್ರಗಳಲ್ಲಿ ರೋವರ್ಸ್-ರೇಂಜರ್ಸ್ ದಳನಾಯಕರಿಂದ ಸೇವೆ | 21.03.2025 ರಿಂದ 04.04.2025 | ರಾಜ್ಯದಾದ್ಯಂತ |
| 7 | 2024-25ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಭಾಗವಹಿಸುವ ಸ್ಕೌಟ್ಸ್-ಗೈಡ್ಸ್ ಹಾಗು ಎಲ್ಲಾ ವಿದ್ಯಾರ್ಥಿಗಳಿಗೆ ಹೆಚ್ಚು ಅಂಕಗಳನ್ನು ಗಳಿಸಲು ಏಕಾಗ್ರತೆ ಹೆಚ್ಚಿಸಿಕೊಳ್ಳಲು ಮಾಹಿತಿ ಕಾರ್ಯಾಗಾರಗಳನ್ನು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ಮತ್ತು ಪ್ರೇರಣಾ ಕಾರ್ಯಾಗಾರಗಳ ಸಂಘಟನೆ. | ಮಾರ್ಚ್ | ಆನ್‌ಲೈನ್‌ನಲ್ಲಿ |
| 7 | ಆಯುಕ್ತರುಗಳ ಮುಂದುವರೆದ ತರಬೇತಿ ಶಿಬಿರ | 24.03.2025 ರಿಂದ 28.03.2025 | ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 8 | ವಿಶ್ವ ಜಲ ದಿನಾಚರಣೆ | 22.03.2025 | ದಳ, ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಹಂತದಲ್ಲಿ |
| 9 | ಅರ್ಥ್ ಅವರ್ (Earth Hour) | 22.03.2025 ರಾತ್ರಿ 8.30 ರಿಂದ 9.30 ರವರೆಗೆ | ರಾಜ್ಯದಾದ್ಯಂತ |
| 10 | ICSE & CBSE ಶಾಲಾ ಶಿಕ್ಷಕ-ಶಿಕ್ಷಕಿಯರುಗಳಿಗೆ ಮೂಲ ತರಬೇತಿ ಶಿಬಿರ | ಮಾರ್ಚ್ 2025 ಮಾಹೆಯಲ್ಲಿ | |

# ಸಂಪಾದಕೀಯ



ಮಾನ್ಯರೆ,

"ಮಾನವ ಜನುಮ ಬಹುದೊಡ್ಡದಣ್ಣ, ಅದನು ಹಾಳು ಮಾಡದಿರಿ ಹುಚ್ಚಪ್ಪಗಳಿರಾ"; "ಉಸಿರು ನಿಲ್ಲುವುದರ ಒಳಗೇ ಹೆಸರು ನಿಲ್ಲುವ ಕೆಲಸ ಮಾಡು", "ದೇಶ ನನ್ನದು, ನನ್ನದು ನಾಡು, ಎನ್ನದ ಮಾನವನ ಎದೆ ಸುಡುಗಾಡು", "ಏನಾದರೂ ಆಗು ಮೊದಲು ಮಾನವನಾಗು" ಎಂಬಿತ್ಯಾದಿ ಉಕ್ತಿಗಳು, ಹುಟ್ಟಿದ ಮಗು ಸಮಾಜದ ಶಕ್ತಿ ಆಗಿ ರೂಪುಗೊಳ್ಳುವಲ್ಲಿ ಪ್ರೇರಣಾತ್ಮಕವಾದವುಗಳಲ್ಲಿ ಕೆಲವು ಆಗಿರುವುದು ಸ್ಪಷ್ಟ. ಹಾಗೆ ಬದುಕಿನ ಸಾರ್ಥಕತೆ ಹೊಂದಿ, ಆದರ್ಶ ಪ್ರಾಯರಾಗಿ ಮುಂದಿನ ಜನಾಂಗದ ಶ್ರೇಯಸ್ಕರ ಬದುಕಿಗೆ ಪ್ರೇರಕರಾದವರು ಹಲವರು. ಅದರಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಹರಿಕಾರರಾಗಿ, ಶ್ರೇಷ್ಠರಲ್ಲಿ ಶ್ರೇಷ್ಠರಾಗಿ ಈ ಚಳುವಳಿಯ ಸಂಸ್ಥಾಪಕರಾಗಿರುವ ಲಾರ್ಡ್ ಬೇಡನ್ ಪೊವೆಲ್ ಮತ್ತು ಲೇಡಿ ಬೇಡನ್ ಪೊವೆಲ್‌ರವರು ಯುವ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಧ್ಯೆಯೋದ್ದೇಶಗಳು, ತತ್ವಗಳು ಮತ್ತು ವಿಧಾನಗಳ ಮೂಲಕ ಸರ್ವರ ಆದಾರಾಭಿಮಾನಕ್ಕೆ ಪಾತ್ರರಾಗಿರುವುದು ಸರಿಯಷ್ಟೆ.

ಇವರುಗಳ ಹುಟ್ಟು ಹಬ್ಬವನ್ನು ಪ್ರತಿ ವರ್ಷದ ಫೆಬ್ರವರಿ 22ರ ದಿನಾಂಕದಂದು ಸಡಗರ ಸಂಭ್ರಮಗಳಿಂದ, ಸಂಸ್ಥಾಪಕರ ಹುಟ್ಟು ಹಬ್ಬ ಮತ್ತು ಚಿಂತನಾ ದಿನಾಚರಣೆಯನ್ನಾಗಿ ಆಚರಿಸಲಾಗುವುದು.

ಈ ದಿನವನ್ನು ಅವರುಗಳು ಭಾರತ್ ಸ್ಕೌಟ್ಸ್–ಗೈಡ್ಸ್ ಚಳುವಳಿಯನ್ನು ಪ್ರಾರಂಭಿಸಿ, ಅದಕ್ಕೆ ನೀಡಿರುವ ಮಹತ್ತರ ಕೊಡುಗೆಯನ್ನು ಸ್ಮರಿಸಿ, ಗೌರವಿಸುವುದರೊಂದಿಗೆ ಅದನ್ನು ಇನ್ನೂ ಸಮರ್ಪಕ ಮತ್ತು ಸಕಾಲಿಕವಾಗಿ ಅನುಷ್ಠಾನಗೊಳಿಸುವಲ್ಲಿ ಕೈಗೊಳ್ಳಬಹುದಾದ ಅನ್ವೇಷಣಾ ಕಾರ್ಯಕ್ರಮಗಳು, ಚಟುವಟಿಕೆಗಳು ಮತ್ತು ತರಬೇತಿಗಳ ಬಗ್ಗೆ ನಿರ್ಧರಿಸಿ ಮುನ್ನಡೆಯುವುವಲ್ಲಿ ಚಿಂತಿಸಿ, ನಿರ್ಧರಿಸುವುದು ಆಗಿರುವುದು. ಜೊತೆಗೆ ದಳ, ಸ್ಥಳೀಯ ಸಂಸ್ಥೆ, ಜಿಲ್ಲಾ ಸಂಸ್ಥೆ, ರಾಜ್ಯ ಸಂಸ್ಥೆಗಳ ಹಂತದಲ್ಲಿ ಸದರಿ ದಿನಾಚರಣೆಯು ಅರ್ಥಗರ್ಭಿತವಾಗಿ ನಿರ್ವಹಣೆ ಮಾಡುವಲ್ಲಿ ಸಕ್ರಿಯ ಕ್ರಮ ಜರುಗಿಸುವುದು ಆಗಿರುವುದು. ಅದರಂತೆ ಮೇಲ್ಕಂಡ ಎಲ್ಲಾ ಹಂತಗಳಲ್ಲಿ ಈ ದಿನಾಚರಣೆಯು ಯಶಸ್ವಿ ಆಗಿ ನಿರ್ವಹಣೆ ಆಗಿರುವುದು ಹರ್ಷದಾಯಕ.

ಇದಕ್ಕೆ ಕಳಸ ಪ್ರಾಯವಾಗಿ, ಸದರಿ ದಿನಾಚರಣೆಯು ರಾಜ್ಯ ಸಂಸ್ಥೆಯ ಮಟ್ಟದಲ್ಲಿ ಫೆಬ್ರವರಿ 22 ರಂದು ದಯಾನಂದ ಸಾಗರ್ ಸಭಾಂಗಣ, ಕುಮಾರಸ್ವಾಮಿ ಲೇಔಟ್, ಬೆಂಗಳೂರು ಇಲ್ಲಿ ಸದರಿ ಪ್ರತಿಷ್ಠಿತ ಸಂಸ್ಥೆಯ ನೆರವಿನೊಂದಿಗೆ ಅವರ ವಿಶಿಷ್ಠ ಸಭಾಂಗಣದಲ್ಲಿ ರಾಜ್ಯ ಮುಖ್ಯ ಆಯುಕ್ತರವರ ಸಲಹೆ, ಸಹಕಾರ, ಮಾರ್ಗದರ್ಶನದಲ್ಲಿ ಏರ್ಪಟ್ಟ ಸಂಸ್ಥಾಪಕರ ಹುಟ್ಟು ಹಬ್ಬ ಮತ್ತು ಚಿಂತನಾ ದಿನಾಚರಣೆ, ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶ, ರಾಜ್ಯ ಮಟ್ಟದ ಮೆಡಲ್ ಆಫ್ ಮೆರಿಟ್ ಪ್ರಶಸ್ತಿ ಪ್ರಧಾನ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ/ ಶಿಕ್ಷಕಿಯರಿಗೆ ಪ್ರಶಸ್ತಿ ಪಡೆದ ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳಿಗೆ ಅಭಿನಂದನೆ ಮತ್ತು ಪ್ರತಿಷ್ಠಿತ ವ್ಯಕ್ತಿಗಳಿಂದ, ಸದರಿ ದಿನಾಚರಣೆಯ ಮಹತ್ವದ ಬಗ್ಗೆಯ ಕಾರ್ಯ ಚಟುವಟಿಕೆಗಳು ಯಶಸ್ವಿಯಾಗಿ ನಿರ್ವಹಣೆಯಾಗಿರುವುದು ಸ್ಮರಣೀಯ.

ಈ ಎಲ್ಲಾ ಕಾರ್ಯ ಚಟುವಟಿಕೆಗಳು ಸ್ಕೌಟ್ಸ್–ಗೈಡ್ಸ್‌ನವರುಗಳೆಲ್ಲರೂ ಸ್ಕೌಟ್ಸ್–ಗೈಡ್ಸ್‌ನ ನಿಯಮ ಮತ್ತು ಪ್ರತಿಜ್ಞೆಗೆ ತಕ್ಕ ಜೀವನ ಶೈಲಿ ಹೊಂದಿ ಮುಂದುವರಿಸಲು (to continue to live up to the ideals of Scouting/Guiding as laid in the Scout-Guide Law and Promise) ಮತ್ತು ಇವರು ದಳ ನಾಯಕರಿಗೆ ಅವಶ್ಯಕ ಸಲಹೆ ಸಹಕಾರ ನೀಡುವುದು ಮತ್ತು ಅವರಿಗೆ ಉತ್ಸಾಹ ತುಂಬುವ ಮೂಲಕ ರಾಷ್ಟ್ರದ ಯುವ ಜನಾಂಗದಲ್ಲಿ ಸ್ಕೌಟ್–ಗೈಡ್ ಚಳುವಳಿಯನ್ನು ಅನುಷ್ಠಾನಗೊಳಿಸುವಲ್ಲಿ ಶ್ರಮಿಸಲು (Sacred duty to help and inspire the unit Leaders to carry on Scouting/ Guiding for the Youth of our Country) ರಾಜ್ಯ ಮುಖ್ಯ ಆಯುಕ್ತರು ಆದರಾಭಿಮಾನದಿಂದ ವಿನಂತಿಸಿಕೊಂಡಿರುವುದು, ಈ ಚಲುವಳಿಯ ಸಮರ್ಪಕ ಅನುಷ್ಠಾನದ ಬಗ್ಗೆ ಅವರು ಹೊಂದಿರುವ ದೃಢ ನಿಲುವಿಗೆ ಸಾಕ್ಷಿ ಆಗಿರುವುದು.

ಜೊತೆಗೆ ಜನವರಿ 28 ರಿಂದ ಫೆಬ್ರವರಿ 03ರ ವರೆಗೆ ತಿರುಚಿರಾಪಳ್ಳಿ, ತಮಿಳುನಾಡಿನಲ್ಲಿ ಏರ್ಪಟ್ಟ 75ನೇ ವಜ್ರ ಮಹೋತ್ಸವ ಜಾಂಬೂರಿಯಲ್ಲಿ 839ಕ್ಕೂ ಹೆಚ್ಚು ಸ್ಕೌಟ್ಸ್–ಗೈಡ್ಸ್‌ಗಳು, ಶ್ರೀ ಸತೀಶ್, ರಾಜ್ಯ ಜಂಟಿ ಕಾರ್ಯದರ್ಶಿಗಳು, ಶ್ರೀ ಮಧುಸೂದನ್ ಅವಾಲಾ, ಅಡಿಷನಲ್ ಇಂಟರ್‌ನ್ಯಾಷನಲ್ ಕಮಿಷನರ್ ಇವರುಗಳ ನೇತೃತ್ವದಲ್ಲಿ ಮತ್ತು ರಾಜ್ಯ ಮುಖ್ಯ ಆಯುಕ್ತರವರ, ಮಾನ್ಯ ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳ ಮತ್ತು ರಾಜ್ಯ ವಿಧಾನ ಸಭೆ ಸಭಾಧ್ಯಕ್ಷರ (ಸ್ಪೀಕರ್) ಅಮೋಘ ಸನ್ನಿದಿಯಲ್ಲಿ ಯಶಸ್ವಿ ಆಗಿ ನಿರ್ವಹಣೆ ಆಗಿರುವುದು ಶ್ಲಾಘನೀಯ.

ಜೊತೆಗೆ ಫೆಬ್ರವರಿ 2025ರ ತಿಂಗಳಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಏರ್ಪಡಿಸಿದ್ದ ಮಾರ್ಗದರ್ಶಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಿರ್ವಹಣೆ ಆಗಿರುವುದು ಅಭಿನಂದನಾರ್ಹ.

ಒಟ್ಟಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಎಲ್ಲಾ ಚಟುವಟಿಕೆಗಳು ಕಾರ್ಯಕ್ರಮಗಳು ತರಬೇತಿಗಳು ಅರ್ಹ ರೀತಿಯಲ್ಲಿ ನಿರ್ವಹಣೆ ಆಗಿ ಯಶಸ್ಸು ಹೊಂದುವಲ್ಲಿ ಶ್ರಮಿಸಿರುವ ಸರ್ವರಿಗೂ ಅಭಿನಂದನೆಗಳು.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## REPORT ON KARNATAKA CONTINGENT PARTICIPATION IN

# THE DIAMOND JUBILEE JAMBOREE, MANAPARAI, TIRUCHIRAPPALLI, TAMIL NADU

The Bharat Scouts and Guides, Karnataka, actively participated in the Diamond Jubilee Jamboree held at Manaparai, Tiruchirappalli, Tamil Nadu. The event was a grand celebration of Scouting and Guiding, bringing together contingents from all across India. Karnataka's participation was significant, with a well-prepared and enthusiastic contingent that left a lasting impression on the jamboree.

The contingent comprised a total of 839 participants, including 439 Scouts, 279 Guides, 99 Unit Leaders, 18 CMT Members, and 4 Service Team Members. The contingent was under the able leadership of Shri M. S. Satheesh, Joint State Secretary, supported by Shri M. K. Khan, DCC Bangalore South, Shri T. K. Narayanaswamy, DTC, and other dedicated CMT members. Their efforts ensured smooth coordination and efficient management of Karnataka's representation at the event.

### KARNATAKA STATE DAY CELEBRATIONS:

One of the most remarkable highlights of the Jamboree was the Karnataka State Day, celebrated on 29th January 2025. The event showcased the rich cultural heritage and dynamic Scouting spirit of Karnataka.

Sri P. G. R. Sindhia presided over the celebrations and the event was graced by several esteemed guests, including: Shri Mohan Kondajji, Ex-MLC, Smt. Arpitha Kondajji, HQC, Sri Shymal Kumar Biswas, National Commissioner, Sri Harish Mehta, National Commissioner, Smt. Darshana Pawaskar, Director, BSG, Ms. Prarthana Liyanage, Vice Chair, APR, Mr. Nagaraj, State Commissioner, Tamil Nadu & Contingent leaders from 49 states and NHQ staff

The guests were honored with traditional Mysore Petas, shawls, and mementos. The event commenced with a grand Band Display, followed by a series of vibrant cultural performances that highlighted Karnataka's rich traditions. The attendees were also treated to a variety of Karnataka's authentic snacks, further adding to the state's warm hospitality.

Karnataka's Performance at the Jamboree:

The Karnataka contingent actively participated in a range of competitions and programs, excelling in various categories. The performances were well-received, earning accolades and recognition from the Jamboree authorities.

Grade A

- State Gate - Scout Wing
- State Gate - Guide Wing
- Band Display - Scout Wing
- Pageant Show

Grade B Performances:

- Folk Dance
- Camp Craft - Scout Wing
- Camp Craft - Guide Wing
- Campfire - Scout Wing











- Colour Party
- Food Plaza
- Physical Display - Scout Wing
- Physical Display - Guide Wing
- Ethnic Show
- Youth Forum
- Campfire - Guide Wing
- March Past - Scout Wing
- March Past - Guide Wing

Grade C Performances:

- Guide Skills
- Exhibition

Karnataka's contingent demonstrated exceptional teamwork, discipline, and creativity, standing out as one of the most vibrant and energetic groups in the Jamboree.

### SPECIAL HIGHLIGHTS OF KARNATAKA'S PRESENCE

Karnataka made a significant mark at the Jamboree with its enthusiastic participation and innovative representations. Some of the most notable contributions include:

- Pageant Show: A grand display featuring a tableau of Karnataka's iconic landmarks, including Vidhana Soudha, Mysore Palace, Gol Gumbaz, and Bahubali. The show also included bullock carts, horses, and other traditional elements that added to its authenticity and appeal.
- Grand Opening Ceremony: The presence of key dignitaries from Karnataka, including Shri D. K. Shivakumar, Hon'ble Deputy Chief Minister of Karnataka and Shri U. T. Khader, Hon'ble Speaker of Karnataka Legislative Assembly added prestige and significance to the event.
- Food Plaza: Karnataka's food stall was one of the most visited at the Jamboree, serving authentic delicacies that received widespread appreciation.
- Ethnic Show: Karnataka's traditional costumes and folk performances captivated the audience, showcasing the state's cultural diversity.

Recommendations for Future Jamborees:

To further enhance Karnataka's participation in future Jamborees, the following recommendations have been made:

1. Compulsory Pre-Jamboree Training – A three-day pre-jamboree camp should be organized at least one month before the main event. This will help participants understand expectations, practice for performances, and enhance their preparedness.
2. Selection of Active CMT Members – Only committed and active CMT members should be selected. Their involvement is crucial for ensuring discipline, coordination, and efficient management.
3. Screening of Leaders – Non-cooperative Scout and Guide leaders should be identified and excluded from the contingent. The presence of dedicated and proactive leaders will contribute to the overall success of the team.
4. More Cultural Representations – Karnataka should expand its cultural representation by introducing more folk performances, traditional displays, and engaging storytelling sessions.
















5. Improved Logistics and Communication – Strengthening logistical support and ensuring smooth communication among all members will lead to better coordination and efficiency.
6. Increased Participation in Competitive Events – Encouraging more Scouts and Guides to take part in competitive events will help in showcasing the Scout and Guide skills on a larger scale.

The participation of the Karnataka contingent in the Diamond Jubilee Jamboree was a resounding success. The well-organized efforts, high level of engagement, and outstanding performances across multiple categories reflected the strong spirit of Karnataka's Scouts and Guides.



The cultural showcase, competitive achievements, and strong presence of Karnataka's contingent reinforced its commitment to excellence in Scouting and Guiding. The recommendations made will further improve future participation, ensuring that Karnataka continues to shine in national and international Scouting events.

**The 10th Sharjah International Scout Gathering was organized by the Emirates Scout Association, represented by the Sharjah Scout Mission and in collaboration with the Arab Scout Region. The event was conducted at Sharjah, United Arab Emirates from 08 February 2025 to 17 February 2025. The event aligned with the vision of His Highness Sheikh Dr. Sultan bin Muhammad Al Qasimi, Member of the Supreme Council and Ruler of Sharjah to host rover scouts from across the globe with the objective of enhancing the capabilities and competencies of young people in general and specifically through scouting.**





**LET US SACRIFICE OUR TODAY SO THAT OUR CHILDREN CAN HAVE A BETTER TOMORROW**

**- BADEN POWELL**




# Felicitation Programme to Mr. David Robert Baden Powell

The Bharat Scouts and Guides, Karnataka State Organized a Felicitation Programme to Mr. DAVID ROBERT BADEN POWELL, Ambassador of Scout and Guide Movement on 6th February 2025 at Kondajji Basappa Auditorium, State Headquarters, Bangalore. Sri P.G.R. Sindhia, State Chief Commissioner presided over the Programme.

Mr. DAVID ROBERT BADEN POWELL in his speech has appreciated the Programs, Activities and Training of the Karnataka State Scout Guide Movement and expressed his gratitude for the same.

On this Occasion, Sri U.T. Khadar, Hon'ble Speaker, Karnataka Legislative Assmbly, Sri K.B. Shanmukhappa, Vice-President, Sri Gajanana B. Mannikeri, Vice-president, Smt. Bharathi Chandrashekhar, Vice-President, Smt. Asha Prasannakumar, Vice-President, Sri M.A. Khalid, State Commissioner(S), Smt. Geetha Nataraj, State Commissioner(G), Sri C.S. Reddy, State Commissioner(S) Adult Resource, Smt. B.V. Ramalatha, State Commissioner(G), Adult Resource, Sri A.S. Madhusudan, Additional International Commissioner, BS&G, Inida, Sri K. Gangappagowda, State Secretary, Sri M.S. Sathish, Joint State Secretary(S), Smt. Krupa Vijay, Joint State Secretary(G) and other State Officials, Office Bearers of different District, Scouts, Guides, Rovers, Rangers & Unit Leaders were present.

This was a Very Auspicious, Special and Most Memorable Moment in the History of BSG Karnataka. Whereby our State got a great opportunity of reinforcing our great respect to the Founders of Scout Movement by Honoring their Great Grand Son Mr. David Robert Baden Powell.







**ಜನವರಿ 12, 2025 ರಂದು ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆ, ಯುವ ದಿನಾಚರಣೆ ಅಂಗವಾಗಿ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.**

## ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳ ವಿವರಗಳು

| ವಿಭಾಗ | ವಿಜೇತರಾದ ಸ್ಥಾನ | ಹೆಸರು ಕು॥ | ವಿಳಾಸ | ಜಿಲ್ಲೆ | ನಗದು ಬಹುಮಾನ ರೂ. |
|---|---|---|---|---|---|
| ಸ್ಕೌಟ್ಸ್ | ಪ್ರಥಮ | ಶ್ರೀನಿಧಿ | ದರ್ಶನಾಪುರ ಪಬ್ಲಿಕ್ ಶಾಲೆ ಶಹಾಪುರ, ಯಾದಗಿರಿ | ಯಾದಗಿರಿ | 1,000 |
| ಸ್ಕೌಟ್ | ದ್ವಿತೀಯ | ಸನತಶೆಟ್ಟಿ | ವಿದ್ಯಾವರ್ಧಕ ಇಂಗ್ಲೀಷ್ ಮಾಧ್ಯಮ ಶಾಲೆ, ಶಿರ್ವ, ಉಡುಪಿ | ಉಡುಪಿ | 800 |
| ಸ್ಕೌಟ್ಸ್ | ತೃತೀಯ | ಚಾರುದತ್ತ ಎಂ.ಎ. | ಬಿ.ಜಿ.ಎಸ್. ಆಂಗ್ಲ ಶಾಲೆ ಅಗಲಗುರ್ತಿ, ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ | 500 |
| ಗೈಡ್ | ಪ್ರಥಮ | ಕ್ಷಮಾ ಡಿ.ಹೆಚ್. | ಎಸ್.ಡಿ.ಎಂ. ಶಾಲೆ ಧರ್ಮಸ್ಥಳ, ದಕ್ಷಿಣ ಕನ್ನಡ | ದಕ್ಷಿಣ ಕನ್ನಡ | 1,000 |
| ಗೈಡ್ | ದ್ವಿತೀಯ | ಸೌಜನ್ಯ ಆರ್. ಕಣವಿ | ಶ್ರೀವಿದ್ಯಾ ಮಂದಿರ ಎಜುಕೇಷನ್ ಸೊಸೈಟಿ ಮಲ್ಲೇಶ್ವರಂ, ಬೆಂಗಳೂರು ಉತ್ತರ | ಬೆಂಗಳೂರು ಉತ್ತರ | 800 |
| ಗೈಡ್ | ತೃತೀಯ | ಪ್ರಜ್ಞಾ ಹೆಗಡೆ | ಸುನಾದ ನಿಲಯ ಆರ್ಚೋಡಿ, ಉಪನದ, ಉಡುಪಿ | ಉಡುಪಿ | 500 |
| ರೋವರ್ | ಪ್ರಥಮ | ಸುನಿಲ್ ಎಸ್. ಮುಟ್ಟೂರು | ಬಿ.ವಿ.ವಿ.ಎಸ್. ಶ್ರೀ ಎಸ್.ಆರ್. ಕಂಠಿ, ಆರ್ಟ್ಸ್ & ಕಾಮರ್ಸ್ ಮತ್ತು ಸೈನ್ಸ್ ಕಾಲೇಜು, ಮುದೋಳ, ಬಾಗಲಕೋಟೆ | ಬಾಗಲಕೋಟೆ | 1,000 |
| ರೋವರ್ | ದ್ವಿತೀಯ | ಮುಖೇಸ್ ಸಿ. | ಜಿ.ಎಫ್.ಜಿ.ಸಿ. ಪೀಣ್ಯ ಬೆಂಗಳೂರು ಉತ್ತರ | ಬೆಂಗಳೂರು ಉತ್ತರ | 800 |
| ರೋವರ್ | ತೃತೀಯ | ಮಧುವರ್ಧನ ಟಿ.ಎಸ್. | ಚಿನ್ಮೂಲಾದ್ರಿ ರೋವರ್ ಯುನಿಟ್, ಚಿತ್ರದುರ್ಗ | ಚಿತ್ರದುರ್ಗ | 500 |
| ರೇಂಜರ್ | ಪ್ರಥಮ | ಪರಿಣೀತ | ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರ್ಕಾರಿ, ಪ್ರಥಮ ದರ್ಜೆ ಕಾಲೇಜು, ಕುಂದಾಪುರ, ಉಡುಪಿ | ಉಡುಪಿ | 1,000 |
| ರೇಂಜರ್ | ದ್ವಿತೀಯ | ಪೀಣ ಪಿ.ಪಿ. | ಎಸ್.ಎಫ್.ಎಸ್.ಕಾಲೇಜು ಹೆಬ್ಬಗೋಡಿ, ಬೆಂಗಳೂರು ಪೂರ್ವ | ಬೆಂಗಳೂರು ಪೂರ್ವ | 800 |
| ರೇಂಜರ್ | ತೃತೀಯ | ರಕ್ಷಿತಾ ಕೆ.ಎಲ್. | ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಚನ್ನರಾಯಪಟ್ಟಣ, ಹಾಸನ | ಹಾಸನ | 500 |



# ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಸಂದರ್ಭದಲ್ಲಿ ಸ್ಕೌಟ್ಸ್-ಗೈಡ್ಸ್‌ಗಳು ಬರೆದಿರುವ ಪ್ರಬಂಧಗಳು

## ಯುವ ಶಕ್ತಿ, ದೇಶದ ಶಕ್ತಿ

ರತ್ನಾಕರ ಧೌತಪದಾಂ ಹಿಮಾಲಯ ಕಿರೀಟನೀಂ।
ಬ್ರಹ್ಮರಾಜರ್ಷಿ ರತ್ನಾಢ್ಯಂ ವಂದೇ ಭಾರತ ಮಾತರಂ॥

"ಇಡೀ ವಿಶ್ವದಲ್ಲಿ ಅತೀ ಪುನೀತ ಪುಣ್ಯಭೂಮಿ ಎನಿಸಬಲ್ಲ, ಜಗದೆಲ್ಲ ಜೀವಿಗಳು ಕರ್ಮ ಸವೆಸಲು ಬರಲೇಬೇಕಾದ ಒಂದೇ ಒಂದು ಭೂಮಿ ಎಂದರೆ ಅದು ಭಾರತ. ಸುಜನತೆ, ಉದಾರತೆಗಳಲ್ಲಿ ಶಾಂತಿ-ಶುಚಿತೆಗಳಲ್ಲಿ ಮಾನವತೆಯು ತುತ್ತ ತುದಿಯನ್ನು ಮುಟ್ಟಿರುವ ನಾಡು ನಮ್ಮದೇ. ಎಲ್ಲಕ್ಕಿಂತ ಮಿಗಿಲಾಗಿ ಅಂತರ್ಮುಖ ಮತ್ತು ಆಧ್ಯಾತ್ಮಿಕತೆಗಳ ತವರೂರು ನಮ್ಮ ಭವ್ಯ ಭಾರತ.

ಹೀಗೆ ನಮ್ಮ ಶ್ರೇಷ್ಠ ಭೂಮಿಯನ್ನು ಮಹಾನ್ ವ್ಯಕ್ತಿ ಸ್ವಾಮಿ ವಿವೇಕಾನಂದರು ಕೊಂಡಾಡಿರುವುದು ಸಾರ್ವಕಾಲಿಕ ಸತ್ಯ.

**ಯುವ ಸಮುದಾಯಕೆ ಮಹಾನ್ ಚೇತನ- ಸ್ವಾಮಿ ವಿವೇಕಾನಂದ:** ನಮ್ಮ ದೇಶದ ಇತಿಹಾಸ ಆಗಸದಲ್ಲಿ ಸ್ವಾಮಿ ವಿವೇಕಾನಂದರು ತೇಜೋರಾಶಿಯಿಂದ ಪ್ರಜ್ವಲಿಸುತ್ತಿರುವ ಛಾಯೆ. ಒಮ್ಮೊಮ್ಮೆ ಒಂದೊಂದು ವರ್ಣದಲ್ಲಿ ಒಂದೊಂದು ರೀತಿಯಲ್ಲಿ ತಾರೆ ಬೆಳಗುವಂತೆ, ಸ್ವಾಮಿ ವಿವೇಕಾನಂದರ ದಿವ್ಯ ವ್ಯಕ್ತಿತ್ವವು ಬಗೆಬಗೆಯಾಗಿ ನಮಗೆ ತೋರುವುದು. ಎಲೆ ಮರೆಗಳಲ್ಲಿ ಮೂಡಿದ ಅಮೂಲ್ಯ ಜ್ಞಾನವನ್ನು ಬೊಗಸೆ ಬೊಗಸೆಯಾಗಿ ಭಾರತವರ್ಷೇ ಅಲ್ಲದೇ, ವಿಶ್ವದ ಮೂಲೆ ಮೂಲೆಗೂ ಹಂಚಲು ಹವಣಿಸಿದ ದಿವ್ಯ ಪ್ರತಿಭೆ ಸ್ವಾಮಿ ವಿವೇಕಾನಂದರು. "ಯುವಶಕ್ತಿಯನ್ನು ಬಡಿದೆಬ್ಬಿಸಿ, ಅದಮ್ಯ ಚೇತನವನ್ನು ತುಂಬಿದ ಶ್ರೀಯುತರ ಜನ್ಮದಿನ. ಜನವರಿ 12 ರಂದು ವಿಶ್ವ ದಿನವಾಗಿ ಆಚರಿಸುವುದು ಅವರ ವ್ಯಕ್ತಿತ್ವಕ್ಕೆ ನಾವು ನೀಡುತ್ತಿರುವ ಕೊಡುಗೆ.

**ಯುವ ಜನತೆ- ದೇಶದ ಸಂಪತ್ತು:** ದೇಶದ ಸುವ್ಯವಸ್ಥೆಯು ಸದೃಢವಾಗಿರಬೇಕಾದರೆ, ಯುವ ಜನತೆಯು ಬಲಶಾಲಿಯಾಗಿರಬೇಕು. ದೇಶದ ಒಳಿತಿಗಾಗಿ ಕಾಯಾ, ವಾಚಾ, ಮನಸಾ ಸಾಧನೆಯನ್ನು ಮಾಡುವ ನಿಷ್ಠಾವಂತ ಯುವಕ ಮಾತ್ರ ರಾಷ್ಟ್ರವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ಯ ಬಲ್ಲ ಎಂದು ವಿವೇಕಾನಂದರು ಹೇಳುವುದು ಸ್ವಾಗತಾರ್ಹ.

"ಕರ್ಮಣ್ಯೇ ವಾದಿಕಾರಸ್ತೆ ಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥದಿಂದ ದೇಶದ ಸಮಸ್ತ ಕಲ್ಯಾಣಕ್ಕಾಗಿ ಹೋರಾಡಿದ ಮತ್ತು ಹೋರಾಡುತ್ತಿರುವ ಯುವ ಸಮುದಾಯದ ನಿದರ್ಶನಗಳು ಸಾವಿರಾರು. ಅಖಂಡ ಭಾರತದ ಸ್ವಾತಂತ್ರ್ಯ ಸಂಗ್ರಾಮದಿಂದ ಹಿಡಿದು, ಗಡಿಯಾಚೆ ದೇಶ ರಕ್ಷಣೆಗಾಗಿ ಸರ್ವವನ್ನು ಸಮರ್ಪಿಸುತ್ತಿರುವ ವೀರಯೋಧರ ಚರಿತ್ರೆಯ ತ್ಯಾಗ ದೇಶದ ಸಂಪತ್ತಲ್ಲವೆ? ಶಿಕ್ಷಣಾ, ಸಾಹಿತ್ಯ, ಕಲೆ, ಸಾಂಸ್ಕೃತಿಕ, ರಾಜಕೀಯ, ಸಮಾಜಸೇವೆ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಸಾಧನೆಗೈದ ಯುವಕರು ಕೂಡ ದೇಶದ ಆಸ್ತಿಯಲ್ಲವೆ?

**ಆಧುನಿಕ ಅವ್ಯವಸ್ಥೆ- ಹಾದಿ ತಪ್ಪುತ್ತಿರುವ ಯುವ ಸಮುದಾಯ:** ವಿಜ್ಞಾನ ತಂತ್ರಜ್ಞಾನ ಬಹಳಷ್ಟು ವೇಗವಾಗಿ ಮುಂದುವರೆಯುತ್ತಿರುವ ಇಂದಿನ ಕಾಲದಲ್ಲಿ ಯುವಜನತೆ ಕೂಡಾ ಅಷ್ಟೇ ವೇಗವಾಗಿ ಹಾದಿತಪ್ಪುತ್ತಿರುವುದು ಸತ್ಯಾಂಶ. ಆಧುನಿಕ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳು, ಸಕಾರಾತ್ಮಕಕ್ಕಿಂತ ನಕಾರಾತ್ಮಕವಾಗಿ ಬಳಕೆಯಾಗುತ್ತಿರುವುದು ವಿಪರ್ಯಾಸ. ಇಂದಿನ ಕಾಲಘಟ್ಟದಲ್ಲಿ ನಡೆಯುತ್ತಿರುವ "ಪ್ರತಿಭಾ ಪಲಾಯನ"ದಂತಹ ಜ್ವಲಂತ ಸಮಸ್ಯೆ ನಮ್ಮಲ್ಲಿ ಕಡಿಮೆಯಾಗುತ್ತಿರುವ ರಾಷ್ಟ್ರೀಯತೆ ಮತ್ತು ದೇಶಪ್ರೇಮವೇ ಮೂಲಕಾರಣ. ನಮ್ಮ ಮಣ್ಣಿನಲ್ಲಿ ವಿದ್ಯೆಯನ್ನು ಕಲಿತು, ಸಂಸ್ಕೃತಿಯನ್ನು ಅರಿತು, ದೇಶದ ಸಹಕಾರದಿಂದ ಉನ್ನತ ಶಿಕ್ಷಣವನ್ನು ಪಡೆದು ಅದರ ಪ್ರತಿಫಲವನ್ನು ಇನ್ನಾವುದೋ ದೇಶಕ್ಕೆ ಸುರಿಯುತ್ತಿರುವುದು ನಿಜವಾಗಿಯೂ ವಿಷಾದನೀಯ. ಇಂದಿನ ದಿನಗಳಲ್ಲಿ ಯುವಜನತೆಯ ಪ್ರತಿಭೆ, ಪರಂಪರೆ, ತತ್ವಜ್ಞಾನ, ಜೀವನಾದರ್ಶ ಇವೆಲ್ಲಕ್ಕೂ ಗ್ರಹಣ ಹಿಡಿದಂತಿದೆ. ಇಂದು ಕೋಟಿ ಕೋಟಿ ಯುವಕ-ಯುವತಿಯರ ಹೃದಯಕ್ಕೆ ನಮ್ಮ ಸ್ವತಂತ್ರ್ಯ ರಾಷ್ಟ್ರಜೀವನದ ಅಮೃತ ಸ್ಪರ್ಶ, ಅನುಭವಕ್ಕೆ ಬರುತ್ತಿಲ್ಲ. ಯುವಜನತೆಯ ಅಂತಃಕರಣವನ್ನು ತಟ್ಟಿ ಎಬ್ಬಿಸುವ ರಾಷ್ಟ್ರದ ಆದರ್ಶಗಳು ಇಲ್ಲದೇ ಹೋದಲ್ಲಿ ದೇಶದ ಪುನರುತ್ಥಾನಕ್ಕಾಗಿ ಅವರಲ್ಲಿ ಸ್ವಯಂ ಪ್ರೇರಣೆ, ಕಾರ್ಯೋತ್ಸಾಹ, ತ್ಯಾಗ, ಪೌರುಷಗಳು ಬೆಳೆದು ನಿಲ್ಲುವುದಾದರೂ ಹೇಗೆ? ಆದ್ದರಿಂದಲೇ ಇಂದು ರಾಷ್ಟ್ರದ ಆಗುಹೋಗುಗಳ ಬಗೆಗೆ ಸರ್ವತ್ರ ಉದಾಸೀನತೆ, ಕ್ರಿಯಾ ಶೂನ್ಯತೆ, ವಿಫಲತೆಗಳೇ ತಾಂಡವವಾಡುತ್ತಿವೆ! ಎಂದ ಮೇಲೆ ಯುವಕರೆಡೆಗೆ ಸ್ಪೂರ್ತಿ, ಉತ್ಸಾಹಗಳನ್ನೆರೆಯಬಲ್ಲ ಭಾರತೀಯತೆಯ ಆದರ್ಶವನ್ನು ಎತ್ತಿ ಹಿಡಿಯುವುದು ತೀರಾ ಅನಿವಾರ್ಯ ಮತ್ತು ತುರ್ತು ಕರ್ತವ್ಯವಾಗಿದೆ.

**ಉಪಸಂಹಾರ:** ಭಾವೀ ರಾಷ್ಟ್ರದ ಭರವಸೆ ಇರುವುದೇ ಈ ಯುವಜನಾಂಗದ ಮೇಲೆ. ಆದುದರಿಂದ ಯುವ ಜನತೆಯ ಸನ್ಮಾರ್ಗದಲ್ಲಿ ಹೆಜ್ಜೆಯನ್ನಿಟ್ಟಾಗ ಮಾತ್ರ ಸುಂದರ ಭಾರತ ನಿರ್ಮಾಣ ಸಾಧ್ಯ.

"ಹೊಸನೆತ್ತರುಕುಕ್ಕಿ ಆರಿಹೋಗುವ ಮುನ್ನ; ಹರಿಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ! ಉತ್ಸಾಹ ಸಾಹಸದ ಉತ್ತುಂಗ ವೀಚಿಗಳ ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ! ಕಟ್ಟುವೆವು ನಾವು ಹೊಸ ನಾಡೊಂದನ್ನು; ರಸದ ಬೀಡೊಂದನ್ನು! ಸಮೃದ್ಧ ಭಾರತವನ್ನು, ಬಲಿಷ್ಠ ರಾಷ್ಟ್ರವನ್ನು ಕಟ್ಟಲು ನಾವೆಲ್ಲಾ ಪಣತೊಡುವ. "ವಿಶ್ವಯುವ ದಿನದ" ಈ ಶುಭ ಸಂದರ್ಭದಲ್ಲಿ, ಸ್ವಾಮಿ ವಿವೇಕಾನಂದರ ಆದರ್ಶಗಳ ಪುನರ್ ಚೇತನಕ್ಕೆ ಮತ್ತೊಮ್ಮೆ ನಾಂದಿ ಹಾಡೋಣ!

"ಏಳಿ, ಎದ್ದೇಳಿ, ಗುರಿ ಮುಟ್ಟುವತನದ ನಿಲ್ಲದಿರಿ"

**ಕ್ಷಮಾ ಡಿ.ಹೆಚ್,** ಗೈಡ್ ವಿದ್ಯಾರ್ಥಿನಿ
ಪ್ರಥಮ ಬಹುಮಾನ ವಿಜೇತೆ
ಎಸ್.ಡಿ.ಎಂ., ಧರ್ಮಸ್ಥಳ, ದಕ್ಷಿಣ ಕನ್ನಡ ಜಿಲ್ಲೆ

# ಯುವ ಶಕ್ತಿಯೇ ದೇಶದ ಶಕ್ತಿ

**ಪೀಠಿಕೆ:** "ಯುವ ಶಕ್ತಿಯೇ ದೇಶದ ಶಕ್ತಿ" ಎನ್ನುವ ಮಾತಿನನ್ವಯ ಯುವಕರು ದೇಶದ ಬೃಹತ್ ಸಂಪತ್ತು ಎಂದು ಹೇಳಿದರೆ ತಪ್ಪಾಗಲಾರದು. ಕಾರಣ ನಮ್ಮ ದೇಶ ಭಾರತ ಬೃಹತ್ ಪ್ರಜಾಪ್ರಭುತ್ವ ಹೊಂದಿದ ದೇಶ. ವಿಶ್ವ ಭೂಪಟದಲ್ಲಿ ಭಾರತ ದೇಶಕ್ಕೆ ಮತ್ತು ಭಾರತೀಯರಿಗೆ ವಿಶೇಷ ಸ್ಥಾನಮಾನವಿದೆ.

**ವಿವರಣೆ:** ಇಂದಿನ ಯುವ ಜನತೆಯಲ್ಲಿ ಬದಲಾಗಬೇಕಾದ ಪ್ರಮುಖ ಬದಲಾವಣೆಗಳು

- ನಾನು, ನನ್ನದು, ನನ್ನ ಮನೆ ಎಂಬ ಸ್ವಾರ್ಥ ಬಿಟ್ಟು, ನನ್ನ ಊರು, ನನ್ನ ನೆಲ, ನನ್ನ ದೇಶಕ್ಕಾಗಿ ಏನನ್ನಾದರು ಸಾಧಿಸಬೇಕು ಎನ್ನುವ ಹಂಬಲವಿರಬೇಕು.
- ದೇಶ ನನಗೇನು ಮಾಡಿದೆ? ಎನ್ನುವ ಪ್ರಶ್ನೆ ತೆಗೆದು ಹಾಕಿ ಈ ದೇಶಕ್ಕೆ ನಾನೇನು ಮಾಡಿದೆ?, ಈ ನೆಲದ ಋಣ ತೀರಿಸಲು ಏನು ಮಾಡಬಲ್ಲೆ? ಎಂಬ ಮಿಡಿತ ತುಡಿತವಿರಬೇಕು.
- ನಮ್ಮ ಯುವ ಜನತೆಯ ವಿಪರೀತ ತಪ್ಪು ಎಂದರೆ ನಾನು ಇಂಜಿನಿಯರಿಂಗ್ ಮುಗಿಸಿದ್ದೇನೆ, ನಾನು ಬಹುದೊಡ್ಡ ಪದವಿ ಪಡೆದಿದ್ದೇನೆ, ನನಗೆ ಆ ಕೆಲಸವೇ ಬೇಕು, ನನಗೆ ಈ ಕೆಲಸವೇ ಬೇಕು, ಎನ್ನುವ ಮದ ಬಿಟ್ಟು ಅಭಿವೃದ್ಧಿ ಪಥದಲ್ಲಿ ಸಾಗುವ ಕೆಲಸಗಳನ್ನು ಆಯ್ಕೆ ಮಾಡಿಕೊಳ್ಳಬೇಕು.
- ಯಾವ ಕೆಲಸ ಮೇಲಲ್ಲ, ಯಾವುದೇ ಕೆಲಸ ಕೀಳಲ್ಲ, ಮಾಡುವ ಕೆಲಸ ಯಾವುದೇ ಇರಲಿ ಅದರಲ್ಲಿ ದೇಶದ ಅಭಿವೃದ್ಧಿಯ ಕನಸು ಕಾಣಬೇಕು. ಅಂದಾಗ ಮಾತ್ರ ಪ್ರತಿ ಕಾರ್ಯದಲ್ಲಿ ನಾವು ಯಶಸ್ಸು ಕಾಣಬಹುದಾಗಿದೆ.
- ಯುವ ಶಕ್ತಿಯ ಪಡೆಯಲ್ಲಿ ಕಣ್ಣು ಮುಚ್ಚಿದರೆ ಸಾಧನೆಯ ಕನಸಿರಬೇಕು, ಮಲಗಿದರೆ ಹೊಸದನ್ನು ಸಾಧಿಸುವ ಹಂಬಲವಿರಬೇಕು. ಪ್ರತಿ ಯುವಕರು ಛಲದೇಕ ಮಲ್ಲರಾಗಬೇಕು. ಅಂದಾಗ ಮಾತ್ರ ದೇಶದ ಬಹುದೊಡ್ಡ ಯುವಶಕ್ತಿ ನಿರ್ಮಾಣವಾಗುತ್ತದೆ.
- ವಿವೇಕಾನಂದರ ಅಮೃತ ವಾಣಿಯಂತೆ ಎಲ್ಲ ಯುವಪಡೆ "ಏಳಿ, ಎದ್ದೇಳಿ, ಗುರಿಮುಟ್ಟೋವರೆಗೂ ನಿಲ್ಲದಿರಿ" ನಿರಂತರವಾಗಿ ಚಲಿಸುತ್ತಾ ಹೋದರೆ, ಒಂದಲ್ಲಾ ಒಂದು ದಿನ ಇಟ್ಟ ಗುರಿ ತಲುಪೇ ತಲುಪುತ್ತೇವೆ. ಇದಕ್ಕೆ ಉತ್ತಮ ಉದಾಹರಣೆ "ಗುಕೇಶ್ ದೊಮ್ಮರಾಜು". ವಿಶ್ವಚೆಸ್ ಚಾಂಪಿಯನ್ ಆಗಿ ವಿಶ್ವ ಮಟ್ಟದಲ್ಲಿ ಭಾರತ ದೇಶದ ಕೀರ್ತಿ ಪತಾಕೆಯನ್ನು ಹಾರಿಸಿ, ತಾಯಿ ಭಾರತಿಗೆ ಹೆಮ್ಮೆಯ ಪುತ್ರನಾದನು. ಸಾಕಲ್ಲವೇ ಇಂತಹ ಪ್ರತಿಭೆಗಳು, ಎಲ್ಲಾ ಯುವಕರು ಬದಲಾಗಲು.
- ಖಾಲಿ ನೆಲದಲ್ಲಿ ಏನು ಬಿತ್ತುತ್ತೇವೋ, ಅದೇ ಫಸಲಾಗಿ ಬೆಳೆಯುತ್ತೇವೆ. ಅದೇ ರೀತಿಯಾಗಿ ನಾವು ಪ್ರತೀ ವಿದ್ಯಾರ್ಥಿಗಳು ಕೂಡ ಒಂದೊಳ್ಳೆ ದೃಢಸಂಕಲ್ಪದೊಂದಿಗೆ ವಿದ್ಯಾಭ್ಯಾಸ ಮಾಡಬೇಕು, ಶಿಸ್ತು, ಸಂಯಮ, ವಿದ್ಯೆ, ವಿನಯ, ಸಂಸ್ಕಾರ, ವಿದೇಯತೆ, ನಮಗೆ ದಾರಿ ದೀಪಗಳಾಗಬೇಕು. ಕಾರಣ ನಾವೇ ನಾಳಿನ ಭಾವಿ ಯುವಕರು.

**ದೇಶದ ಯುವಶಕ್ತಿಗೆ ಸರ್ಕಾರದ ಬೆಂಬಲ:**

- ದೇಶದ ಅಭಿವೃದ್ಧಿಯ ಕೊಡುಗೆಗೆ ಯುವಶಕ್ತಿಯ ಪಾತ್ರ ಮುಖ್ಯವೋ, ಹಾಗೆ ನಮ್ಮ ಸರ್ಕಾರ ಕೂಡ ಕೆಲವು ಜವಾಬ್ದಾರಿ ನಿಭಾಯಿಸಬೇಕಿದೆ.
- ಸೂಕ್ತ ಯೋಜನೆಗಳ ಮೂಲಕ ಸರ್ಕಾರ ಯುವಕರ ಶಕ್ತಿ ಹಿಮ್ಮಡಿಗೊಳಿಸಬೇಕು.
- ಹಲವಾರು ಪ್ರತಿಭೆಗಳಿಗೆ ವೇದಿಕೆ ಒದಗಿಸಬೇಕು. ಜೊತೆಗೆ ಯುವಕರ ಜವಾಬ್ದಾರಿಗಳ ಮನವರಿಕೆ ಕಾರ್ಯಾಗಾರ ನಡೆಸುವ ಕೇಂದ್ರ ಕಛೇರಿ ತೆರೆಯಬೇಕು. ಕಾರಣ ಈಗಿನ ಯುವ ಜನತೆ ಮೊಬೈಲ್ ಮೊರೆ ಹೋಗಿದೆ.
- ಕೆಲಸವಿಲ್ಲದೆ ಅಲೆಯುವ ನಿರುದ್ಯೋಗಿ ಯುವಕರಿಗೆ ಜೀವನದ ಹಾಗೂ ಕೆಲಸದ ಮಹತ್ವ ಅರಿಯುವ ಕೆಲವು ಯೋಜನೆ ಜಾರಿಗೆ ತರಬೇಕಾಗಿದೆ.
- ಯುವ ಶಕ್ತಿಗೆ ಮತ್ತು ಅವರ ಶಕ್ತಿ ಬಲವರ್ಧನೆಗೆ ಹಲವಾರು ಪರ್ಯಾಯ ಯೋಜನೆ ಜಾರಿ ಮಾಡಬೇಕು. ಸರ್ಕಾರ ಈ ನಿಟ್ಟಿನಲ್ಲಿ ಯೋಚನೆ ಮಾಡಿ ಹಲವಾರು ಹೊಸ ಹೊಸ ಯೋಜನೆ ಜಾರಿ ಮಾಡಬೇಕು.
- ಒಟ್ಟಾರೆ ಯುವ ಶಕ್ತಿ ಬಲವರ್ಧನೆಗೆ ನಮ್ಮ ಸರ್ಕಾರ ಕೂಡ ಸ್ಪಂದಿಸಬೇಕು ಎನ್ನುವುದು ನನ್ನ ಆಶಾದಾಯಕವಾದ ವಾದ.

**ಉಪಸಂಹಾರ:**

ದೇಶದ, ರಾಷ್ಟ್ರದ ಅಭಿವೃದ್ಧಿಯ ನಿರ್ಮಾಣದಲ್ಲಿ ಯುವಕರ ಪಾತ್ರ ಅನನ್ಯ. ಅದಕ್ಕಾಗಿಯೇ ಮಹಾತ್ಮ ಗಾಂಧೀಜಿಯವರು ಹೇಳಿದಂತೆ "Youths are the salt of Nation", "ಊಟದಲ್ಲಿ ಉಪ್ಪಿದ್ದರೆ ರುಚಿ, ದೇಶಕ್ಕೆ ಯುವಕರ ಭದ್ರತೆಯೇ ಸುಂದರವಾದ ಶುಚಿ". ಯುವಕರೇ ವಿವೇಕರ ವಾಣಿಯಂತೆ "ಏಳಿ, ಎದ್ದೇಳಿ, ಗುರಿ ಮುಟ್ಟೋವರೆಗೂ ನಿಲ್ಲದಿರಿ". ನಾವೇ ಒಂದು ಬೃಹತ್ ಶಕ್ತಿ ಎಂದು ಮುಂದೆ ಸಾಗೋಣ. ಆಗ ನಮ್ಮಲ್ಲಿಯೇ ಒಂದು ಹೊಸ ಚೇತನ ಹುಟ್ಟಿಕೊಳ್ಳುತ್ತದೆ.

"ಯುವ ಜನತೆಯೇ ದೇಶದ ಅಭಿವೃದ್ಧಿಗೆ ಶಕ್ತಿ, ದೇಶದಲ್ಲಿ ಯುವಶಕ್ತಿಯಿಂದಲೇ ದೇಶದ ಅಭಿವೃದ್ಧಿಗೆ ಮುಕ್ತಿ. ಬೆಳೆಯಲಿ ಎಲ್ಲಾ ಯುವಕರಲ್ಲಿ ನನ್ನ ನೆಲ, ನನ್ನ ಜಲ, ನನ್ನ ದೇಶ, ನನ್ನ ಭಾಷೆ ಎನ್ನುವ ಯುಕ್ತಿ. ವಿಶ್ವದ ಮೂಲೆ ಮೂಲೆಯಲ್ಲು ಮೊಳಗಲಿ ತಾಯಿ ಭಾರತಿಯ ಕೀರುತಿಯ ಉಕ್ತಿ, ಯುವ ಜನತೆಯಲ್ಲಿ ಇಮ್ಮಡಿಸಲಿ ದೇಶ ಸೇವೆಯ ಭಕ್ತಿ".

ಶ್ರೀನಿಧಿ, ಸ್ಕೌಟ್ ವಿದ್ಯಾರ್ಥಿ
ಪ್ರಥಮ ಬಹುಮಾನ ವಿಜೇತ
ದರ್ಶನಾಪುರ ಪಬ್ಲಿಕ್ ಶಾಲೆ, ಶಹಾಪೂರ, ಯಾದಗಿರಿ ಜಿಲ್ಲೆ

## ರಾಜ್ಯ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್, ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್‌ಗಳ ಹಿಮಾಲಯ ವೃಕ್ಷಮಣಿ (ಹೆಚ್‌ಡಬ್ಲ್ಯೂಬಿ) ತರಬೇತಿ ಶಿಬಿರ ಹಾಗೂ ಮ್ಯಾಪಿಂಗ್/ ಸ್ಟಾರ್ ಗೇಜಿಂಗ್ ಮತ್ತು ಪ್ರಥಮ ಚಿಕಿತ್ಸೆ ತರಬೇತಿ ಶಿಬಿರಗಳ ಸಂಕ್ಷಿಪ್ತ ವರದಿ

ಜನವರಿ 28 ರಿಂದ ಫೆಬ್ರವರಿ 03ರ ವರೆಗೆ, ಹಿಮಾಲಯ ವೃಕ್ಷಮಣಿ (HWB(SW) & (GW)) ತರಬೇತಿ ಹಾಗೂ ಜನವರಿ 31 ರಿಂದ ಫೆಬ್ರವರಿ 03ರ ವರೆಗೆ ಮ್ಯಾಪಿಂಗ್/ ಸ್ಟಾರ್‌ಗೇಜಿಂಗ್ ಮತ್ತು ಪ್ರಥಮ ಚಿಕಿತ್ಸೆ ತರಬೇತಿ ಶಿಬಿರಗಳನ್ನು ದಳನಾಯಕ–ದಳನಾಯಕಿಯರಿಗೆ ಡಾ॥ ಅನಿಬೆಸೆಂಟ್ ಸ್ಕೌಟ್ಸ್–ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ರಾಜ್ಯ ಸಂಸ್ಥೆ ಹಾಗೂ ರಾಷ್ಟ್ರೀಯ ಸಂಸ್ಥೆ ಇವರ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು.

ಕರ್ನಾಟಕ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 159 ಅಭ್ಯರ್ಥಿಗಳು ಹಿಮಾಲಯ ವೃಕ್ಷಮಣಿ (HWB(SW) & (GW)) ತರಬೇತಿ ಶಿಬಿರದಲ್ಲಿ ಮತ್ತು ಹೊರರಾಜ್ಯ ಆಂಧ್ರ ಪ್ರದೇಶದಿಂದ 01 ಅಭ್ಯರ್ಥಿ ಒಟ್ಟು 160 ಶಿಬಿರಾರ್ಥಿಗಳು ಹಾಗೂ 62 ಅಭ್ಯರ್ಥಿಗಳು ವಿಶೇಷ ತರಬೇತಿ ಶಿಬಿರಗಳಾದ ಮ್ಯಾಪಿಂಗ್/ ಸ್ಟಾರ್‌ಗೇಜಿಂಗ್ ಮತ್ತು ಪ್ರಥಮ ಚಿಕಿತ್ಸೆ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು.











ಸದರಿ ತರಬೇತಿ ಶಿಬಿರಗಳಿಗೆ ಶ್ರೀ ಚಿನ್ನಸ್ವಾಮಿರೆಡ್ಡಿ, ಎಲ್.ಟಿ (ಸ್ಕೌಟ್), ಶ್ರೀ ಎಮ್. ಗುರುಮೂರ್ತಿ, ಎಲ್.ಟಿ (ಸ್ಕೌಟ್), ಶ್ರೀಮತಿ ಸಿ. ಸಂಧ್ಯಾರಾಣಿ, ಎಲ್.ಟಿ.(ಕಬ್), ಶ್ರೀ ರಾಜೇಶ ಎ.ವಿ, ಎಲ್.ಟಿ. (ರೋವರ್), ಶ್ರೀಮತಿ ಸುಮನ ಎಸ್.ವಿ., ಎಲ್.ಟಿ. (ರೇಂಜರ್), ಶ್ರೀಮತಿ ಕೆ.ವಿ. ಶಾಮಲ, ಎಲ್.ಟಿ. (ಗೈಡ್) ಶ್ರೀಮತಿ ರತ್ನವ್ವ ಗುಂಜಾಳ; ಎಲ್.ಟಿ (ಗೈಡ್), ಶ್ರೀಮತಿ ಗೌರಾಬಾಯಿ, ಎಲ್.ಟಿ (ಬುಲ್‌ಬುಲ್), ಶ್ರೀ ಹೆಚ್.ಬಿ. ಭರಶೆಟ್ಟಿ, ಎಲ್.ಟಿ. (ಸ್ಕೌಟ್), ಶ್ರೀ ಸಿ.ಎನ್. ಮಹೇಶ, ಎಲ್.ಟಿ. (ಸ್ಕೌಟ್) ಇವರು ನಾಯಕರಾಗಿ ಕಾರ್ಯನಿರ್ವಹಿಸಿದರು.

ಶ್ರೀ ಕೆ.ಜಿ ಗೋಪಾಲಕೃಷ್ಣ, ಎಲ್.ಟಿ. (ಸ್ಕೌಟ್), ಶ್ರೀ ನಾಗೇಶ್ ಆರ್. ಶಿವಪೂರ್, ಎಲ್.ಟಿ. (ಸ್ಕೌಟ್), ಶ್ರೀ ಶ್ರೀಕಾಂತ ಮಾಸಗಟ್ಟಿ, ಎ.ಎಲ್.ಟಿ. (ಸ್ಕೌಟ್), ಶ್ರೀ ಎಮ್.ಆರ್. ಶ್ರೀರಾಮ, ಎ.ಎಲ್.ಟಿ. (ಸ್ಕೌಟ್), ಶ್ರೀ ಗಂಗಾಧರಯ್ಯ ಹಿರೇಮಠ, ಎ.ಎಲ್.ಟಿ. (ಸ್ಕೌಟ್), ಶ್ರೀ ಶಿವಪ್ಪ ಡಿ, ಪ್ರಿ–ಎ.ಎಲ್.ಟಿ. (ಸ್ಕೌಟ್), ಶ್ರೀಮತಿ ಮಧು ಸುಮಾ ಎಸ್.ಜಿ., ಎ.ಎಲ್.ಟಿ. (ಕಬ್), ಶ್ರೀ ಬಾಲಕೃಷ್ಣ ಡಿ., ಪ್ರಿ–ಎ.ಎಲ್.ಟಿ. (ರೋವರ್), ಶ್ರೀ ವಿನ್ಸಂಟ್ ಯವರಾಜ್, ಹೆಚ್.ಡಬ್ಲೂ.ಬಿ. (ಸ್ಕೌಟ್), ಶ್ರೀಮತಿ ಶೋಭಾ ಪಾಟೀಲ್, ಎ.ಎಲ್.ಟಿ. (ಗೈಡ್), ಶ್ರೀಮತಿ ಅಕ್ಕಮ್ಮ, ಎ.ಎಲ್.ಟಿ. (ಗೈಡ್), ಶ್ರೀಮತಿ ಭಾರತಿ ಟಿ. ಹೊಸಮನಿ, ಎ.ಎಲ್.ಟಿ. (ಗೈಡ್), ಶ್ರೀಮತಿ ಶಮ್‌ಶಾದ್ ಬೇಗಂ, ಎ.ಎಲ್.ಟಿ. (ಗೈಡ್), ಶ್ರೀಮತಿ ಆಲಿಮಾ ಪಿ.ಹೆಚ್., ಎ.ಎಲ್.ಟಿ. (ಗೈಡ್), ಶ್ರೀಮತಿ ಬಿ.ಆರ್. ರಾಧಿಕಾ, ಎ.ಎಲ್.ಟಿ. (ಗೈಡ್), ಶ್ರೀಮತಿ ಎಸ್. ಮಂಜುಳಾ, ಎ.ಎಲ್.ಟಿ. (ಗೈಡ್), ಶ್ರೀಮತಿ ಆರ್. ಮೀನಾಕ್ಷಮ್ಮ, ಎ.ಎಲ್.ಟಿ. (ಬುಲ್‌ಬುಲ್), ಶ್ರೀಮತಿ ಇಂದ್ರವ್ವ ಯು. ಬಾರಂಗಿ, ಎ.ಎಲ್.ಟಿ. (ಗೈಡ್), ಶ್ರೀಮತಿ ಅನ್ನಪೂರ್ಣ, ರೇಂಜರ್ ಲೀಡರ್ ಇವರು ಸಹ ನಾಯಕರಾಗಿ ಕಾರ್ಯನಿರ್ವಹಿಸಿದರು.

ಸದರಿ ಶಿಬಿರಗಳ ಉದ್ಘಾಟನಾ ಸಮಾರಂಭ ಆಯಾ ಶಿಬಿರಗಳ ನಾಯಕರ ಉಪಸ್ಥಿತಿಯಲ್ಲಿ ಜರುಗಿದವು. ರಾಷ್ಟ್ರೀಯ ಸಂಸ್ಥೆಯ ಪಠ್ಯಕ್ರಮ (SOT)ಯ ಪ್ರಕಾರ ತರಬೇತಿ ಶಿಬಿರಗಳನ್ನು ನಡೆಸಲಾಯಿತು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ರೇಂಜರ್), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ. (ಸ್ಕೌಟ್), ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್), ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯ ಯಶಸ್ವಿಗೆ ಸಹಕರಿಸಿದರು.

ಫೆಬ್ರವರಿ 01 ರಂದು 'ಅರಳು ಮಲ್ಲಿಗೆ' ಗ್ರಾಮದಲ್ಲಿ ವಸತಿ ಸಹಿತ ಹೊರ ಸಂಚಾರ (overnight Hike) ಶಿಬಿರಾರ್ಥಿಗಳೆಲ್ಲರೂ ಕೈಗೊಂಡರು. ಫೆಬ್ರವರಿ 02 ರಂದು 'ಭವ್ಯ ಶಿಬಿರಾಗ್ನಿ'ಯನ್ನು ಆಯೋಜಿಸಲಾಗಿತ್ತು. ಶ್ರೀ ಚಿನ್ನಸ್ವಾಮಿ ರೆಡ್ಡಿ, ಎಲ್.ಟಿ. (ಸ್ಕೌಟ್), ಶಿಬಿರ ನಿರ್ದೇಶಕರು ಹಾಗೂ ರಾಜ್ಯ ಸ್ಕೌಟ್ ಆಯುಕ್ತರು (ವಯಸ್ಕ ಸಂಪನ್ಮೂಲ) ಇವರು ಫೆಬ್ರವರಿ 02 ರಂದು ಸಂಜೆ 07.00 ಗಂಟೆಗೆ ಭವ್ಯ ಶಿಬಿರಾಗ್ನಿಯನ್ನು ಉದ್ಘಾಟಿಸಿ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಮತ್ತೆ ಕಾರ್ಯಕ್ರಮದ ಕೊನೆಗೆ ಶಿಬಿರಾರ್ಥಿಗಳು ನೀಡಿದ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ತಮ್ಮ ತಮ್ಮ ತಂಡಗಳಲ್ಲಿ ಮತ್ತು ತಾವು ನಡೆಸುವ ತರಬೇತಿ ಶಿಬಿರ (ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಯ ಮಟ್ಟದ)ಗಳಲ್ಲಿ ಇಂತಹ ಸಮಾರಂಭ ಏರ್ಪಡಿಸಿ, ಚಟುವಟಿಕೆಗಳ ಮಹತ್ವವನ್ನು ಎಲ್ಲರಿಗೂ ತಿಳಿಸುವಂತೆ ಹಿತವಚನ ನುಡಿದರು.

ಫೆಬ್ರವರಿ 03 ರಂದು ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ನಂತರದಲ್ಲಿ ಶಿಬಿರಾರ್ಥಿಗಳಿಂದ ಮೌಲ್ಯಮಾಪನ, ಶಿಬಿರಾರ್ಥಿಗಳಿಗೆ ಮುಕ್ತಸಭೆ ಹಾಗೂ ಧ್ವಜಾವರೋಹಣ ಕಾರ್ಯಕ್ರಮ ನಡೆಯಿಸಿ, ಎಲ್ಲರೂ ರಾಷ್ಟ್ರಗೀತೆ ಹೇಳುವುದರೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಮುಕ್ತಾಯಗೊಳಿಸಲಾಯಿತು.













# ಜಿಲ್ಲಾ ವಾರ್ತೆಗಳು

## ಬೆಳಗಾವಿ

* ಜನವರಿ 30 ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಬೆಳಗಾವಿ ಹಾಗೂ ಜಿಲ್ಲಾ ಸಂಸ್ಥೆ ಬೆಳಗಾವಿ ಇವರ ಸಹಯೋಗದೊಂದಿಗೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ಮಾಸಾಚರಣೆ ಅಂಗವಾಗಿ ಬೆಳಗಾವಿ ನಗರದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸದರಿ ಜಾಥಾ ಬೆಳಗಾವಿ ನಗರದ ಶ್ರೀ ಧರ್ಮವೀರ ಸಂಭಾಜಿ ವೃತದಿಂದ ಪ್ರಾದೇಶಿಕ ಸಾರಿಗೆ ಕಚೇರಿ ಬೆಳಗಾವಿ ಇಲ್ಲಿಯವರೆಗೆ ನಡೆಯಿತು. ಶ್ರೀಮತಿ ಎಂ.ಪಿ. ಓಂಕಾರೇಶ್ವರಿ, ಮಾನ್ಯ ಜಂಟಿ ಸಾರಿಗೆ ಆಯುಕ್ತರು ಬೆಳಗಾವಿ ವಿಭಾಗ, ಶ್ರೀ ಎನ್. ನಿರಂಜನರಾಜ್ ಅರಸ್, ಮಾನ್ಯ ಉಪಪೊಲೀಸ್ ಆಯುಕ್ತರು ಅಪರಾಧ ಮತ್ತು ಸಂಚಾರ ವಿಭಾಗ, ಬೆಳಗಾವಿ, ಶ್ರೀ ರಮೇಶ್ ಎಸ್. ಬೋರಗಾವಿ, ಕಮಾಂಡೆಂಟ್ ಕೆ.ಎಸ್.ಆರ್.ಪಿ., ಬೆಳಗಾವಿ, ಶ್ರೀ ಗಜಾನನ ಮನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀಮತಿ ಲೀಲಾವತಿ ಎಸ್. ಹಿರೇಮಠ, ಮಾನ್ಯ ಉಪನಿರ್ದೇಶಕರು (ಆಡಳಿತ) ಬೆಳಗಾವಿ ದಕ್ಷಿಣ, ಶ್ರೀ ವೈ.ಜೆ. ಭಜಂತ್ರಿ, ಬೆಳಗಾವಿ ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶ್ರೀ ಎಂ. ಗೌತಮರೆಡ್ಡಿ, ಜಿಲ್ಲಾ ಯುವ ಅಧಿಕಾರಿಗಳು ನೆಹರು ಯುವ ಕೇಂದ್ರ ಬೆಳಗಾವಿ, ಶ್ರೀ ನಾಗೇಶ ಮುಂಡಾಸ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಸಿರು ನಿಶಾನೆ ತೋರುವುದರ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಬೆಳಗಾವಿ ನಗರದ ವಿವಿಧ ಶಾಲೆಗಳಿಂದ 750 ಸ್ಕೌಟ್ಸ್–ಗೈಡ್ಸ್‌ಗಳು ಹಾಗೂ ಸ್ಕೌಟ್ ಮಾಸ್ಟರ್–ಗೈಡ್ ಕ್ಯಾಪ್ಟನ್‌ಗಳು ಭಾಗವಹಿಸಿದ್ದರು.




## ಬೆಂಗಳೂರು ದಕ್ಷಿಣ

* ಫೆಬ್ರವರಿ 08 ರಂದು ಜೆ.ಎಸ್.ಎಸ್ ಪಬ್ಲಿಕ್ ಶಾಲೆ, ಹೆಚ್.ಎಸ್.ಆರ್ ಲೇಔಟ್‌ನಲ್ಲಿ ವಿಲ್ಸನ್ ಗಾರ್ಡನ್ ಸ್ಥಳೀಯ ಸಂಸ್ಥೆಯ ವಾರ್ಷಿಕ ರ್‍ಯಾಲಿಯನ್ನು ಆಯೋಜನೆ ಮಾಡಲಾಗಿತು. ರ್‍ಯಾಲಿಯಲ್ಲಿ 367 ಕಬ್ಸ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್, 24 ದಳ ನಾಯಕರುಗಳು ಭಾಗವಹಿಸಿದರು. ರ್‍ಯಾಲಿಯಲ್ಲಿ ಮಾರ್ಚ್‌ಫಾಸ್ಟ್, ಸುಧಾರಿತ ಗುಡಾರ ಹಾಕುವುದು, ಧ್ವಜ ಸ್ವಂಭ ನಿರ್ಮಾಣ, ಬೆಂಕಿಯಿಲ್ಲದೆ ಅಡುಗೆ ಮಾಡುವುದು. ಚಿತ್ರಕಲೆ, ತ್ಯಾಜ್ಯದಿಂದ ಉತ್ತಮವಾದದ್ದು, ಜಾನಪದ ನೃತ್ಯ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗಿತು. ಶ್ರೀ ಪುನೀತ್ ಪಿ.ಎಸ್, ಶ್ರೀ ಪ್ರಫುಲ್, ಶ್ರೀಮತಿ ಪ್ರಿಯದರ್ಶಿನಿ, ಶ್ರೀಮತಿ ಪ್ರತಿಭಾ ಜೈನ್ ತೀರ್ಪುಗಾರರಾಗಿದ್ದರು. ರ್‍ಯಾಲಿಯ ಮುಕ್ತಾಯ ಸಮಾರಂಭದಲ್ಲಿ ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿ(ಗೈಡ್), ಶ್ರೀ ಚಂದ್ರು, ಪಿ–ಎಸ್.ಎಸ್.ಓ.ಸಿ (ಸ್ಕೌಟ್ಸ್) ಬೆಂಗಳೂರು ದಕ್ಷಿಣ ಜಿಲ್ಲೆಯಿಂದ



ಉಪಸ್ಥಿತರಿದರು. ರ್‍ಯಾಲಿಯ ಪ್ರಮಾಣ ಪತ್ರ ಸ್ಮರರಣಿಕೆಗಳ ಪ್ರಾಯೋಜಕರಾದ ಶ್ರೀ ಹೆಚ್.ಪಿ ಶೆಟ್ಟಿ, ಶ್ರೀ ಪ್ರದೀಪ್‌ಕುಮಾರ್, ವಿಜೇತರಿಗೆ ಟ್ರೋಫಿಗಳನ್ನು ಶ್ರೀ ಚಂದ್ರಶೇಖರ್‌ರವರು ಕೊಡುಗೆಯಾಗಿ ನೀಡಿದಾರೆ.

* ಜನವರಿ 24 ರಂದು ಆಡನ್ ಪಬ್ಲಿಕ್ ಶಾಲೆಯಲ್ಲಿ ದೀಕ್ಷಾ ಸಮಾರಂಭವನ್ನು ಆಯೋಜನೆ ಮಾಡಲಾಯಿತು. ಸಮಾರಂಭದಲ್ಲಿ ಶಾಲೆಯ ಪ್ರಾಂಶುಪಾಲರು, ಸ್ಕೌಟ್ಸ್–ಗೈಡ್ಸ್, ದಳ ನಾಯಕರುಗಳು ಸಮಾರಂಭದಲ್ಲಿ ಭಾಗವಹಿಸಿದರು.



* ಫೆಬ್ರವರಿ 01 ರಂದು ನರಗುಂದ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳಿಗೆ ಶಾಲೆಯ ವತಿಯಿಂದ ತುಮಕೂರು ಜಿಲ್ಲೆಯ ಶಿವಗಂಗೆ ಬೆಟ್ಟಕ್ಕೆ ಒಂದು ದಿನದ ಚಾರಣವನ್ನು ಆಯೋಜನೆ ಮಾಡಲಾಗಿತ್ತು. ಚಾರಣದಲ್ಲಿ 30 ಸ್ಕೌಟ್ಸ್–ಗೈಡ್ಸ್‌ಗಳು, ಸ್ಕೌಟ್ಸ್ ಮಾಸ್ಟರಾದ ಶ್ರೀ ಜಗದೀಶ್‌ರವರು, ಗೈಡ್ಸ್ ಕ್ಯಾಪ್ಟನ್‌ರಾದ ಹೇಮಾವತಿರವರು ಭಾಗವಹಿಸಿದರು.



* ಫೆಬ್ರವರಿ 01 ರಂದು ಆಡನ್ ಶಾಲೆಯಲ್ಲಿ ಕಬ್–ಬುಲ್, ಸ್ಕೌಟ್ಸ್–ಗೈಡ್ಸ್‌ಗಳಿಗೆ ಬೆಂಕಿ ಇಲ್ಲದೆ ಅಡುಗೆ ಚಟುವಟಿಕೆಯನ್ನು ಶಾಲೆಯ ಆವರಣದಲ್ಲಿ ಆಯೋಜನೆ ಮಾಡಲಾಯಿತು. ಚಟುವಟಿಕೆಯಲ್ಲಿ ದಳ ನಾಯಕರುಗಳು, ಕಬ್–ಬುಲ್, ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದರು.

* ಫೆಬ್ರವರಿ 08 ರಂದು ಎಸ್.ವಿ.ವಿ.ಪಿ ಶಾಲೆಯ ವತಿಯಿಂದ ಸ್ಕೌಟ್ಸ್–ಗೈಡ್ಸ್‌ಗಳಿಗೆ ಬಸವನಗುಡಿಯಿಂದ ರಾಜಾರಾಜೇಶ್ವರಿ ನಗರದ ವರಗೆ ಸೈಕಲ್ ಜಾಥವನ್ನು ಆಯೋಜಿಸಲಾಗಿತು. ಇದೇ ಸಮಯದಲ್ಲಿ ಹನುಮಂತನಗರ ಪೋಲೀಸ್ ಠಾಣೆಗೆ, ಸರ್ಕಾರಿ ದವಾಕಾನೆಗೆ ಸ್ಕೌಟ್ಸ್–ಗೈಡ್ಸ್‌ಗಳು ಭೇಟಿ ನೀಡಿದರು.



* ಫೆಬ್ರವರಿ 19 ರಂದು ಆಡನ್ ಪಬ್ಲಿಕ್ ಶಾಲೆಯಲ್ಲಿ ಶಿಬಿರಾಗ್ನಿ ಕಾರ್ಯಕ್ರಮವನ್ನು ಶಾಲೆಯ ಆವರಣದಲ್ಲಿ ಆಯೋಜನೆ ಮಾಡಲಾಗಿತು. ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತ ಮಂಡಳಿಯವರು ಶಾಲೆಯ ಪ್ರಾಂಶುಪಾಲರು, ಕಬ್–ಬುಲ್, ಸ್ಕೌಟ್ಸ್–ಗೈಡ್ಸ್, ದಳನಾಕರುಗಳು, ಪೋಷಕರುಗಳು ಭಾಗವಹಿಸಿದರು.



## ಬೆಂಗಳೂರು ಉತ್ತರ

*** The Shivajinagar Local Association conducted the Testing Camp and Annual Rally at shradanjali Intergrated School Lingarajpura on 29.1.2025 with help of the following leaders. Cub Section: Nagamani APD School. Bulbul Section: Radha Mani, Advance Flock Lader, APD School. Scout Section: Mr. Vincent Uraj, HWB(S). Guide Section: Smt. Leelavatju, HWB (G). Testing Camp: Dr. C.V. Krupa Vijai, LT(G) Secretary of SLA. 220 Cubs, Bulbuls, Scouts and Guides Participated. All the Programmes Co-ordinated by Mrs. Revoting .B, LT (B), Supporters V.P. & Chairman for snacks & Lunch. Chief Guest V.P. Mrs. Gayathri Kumar were Present.**



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಎಸ್.ಜೆ.ಆರ್. ಶಾಲೆ ನಗರ ಬೆಂಗಳೂರು ಇಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ರ್‍ಯಾಲಿಯನ್ನು ಫೆಬ್ರವರಿ 15 ಮತ್ತು 16 ರಂದು ನಡೆಸಲಾಯಿತು.




ಫೆಬ್ರವರಿ 15 ರಂದು ಪೂರ್ವಾಹ್ನ ದಾಖಲಾತಿಯೊಂದಿಗೆ ಆರಂಭವಾಯಿತು. ತದ ನಂತರ ಧ್ವಜಾರೋಹಣ ಮಾಡಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ವಿವಿಧ ಸ್ಪರ್ಧೆಗಳು ನಡೆದವು.





* ಫೆಬ್ರವರಿ 16 ರಂದು ಯೋಗ ಗುರುಗಳು ಹಾಗೂ ಬಾನಸವಾಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ವರದಮಾನ್ ಕಳಸೂರ್ ಇವರು ಸ್ಕೌಟ್ಸ್ ಗೈಡ್ಸ್‌ಗಳು ಸರಳಯೋಗವನ್ನು ಮನಮುಟ್ಟುವಂತೆ ತಿಳಿಸಿದರು. ತದ ನಂತರ ಸರ್ವಧರ್ಮ ಪ್ರಾರ್ಥನೆ ಮಾಡಲಾಯಿತು. ಸಮಾರೋಪ ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುರ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ತಮ್ಮ ಸ್ಕೌಟಿಂಗ್ ಅನುಭವ ಹಂಚಿಕೊಂಡರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಜ್ಯೋತಿ ಶಿಶಿಧರ್ ಹಾಗೂ ಉಪಪ್ರಾಂಶುಪಾಲರಾದ ಶ್ರೀಮತಿ ಜೋತ್ಸಾ ರಾವ್ ಇವರು ವಿಜೇತರಿಗೆ ಬಹುಮಾನವನ್ನು ವಿತರಿಸಿ ಶುಭ ಹಾರೈಸಿದರು. ಶಿಕ್ಷಕರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಶಿಬಿರದ ನಾಯಕರಾದ ಶ್ರೀ ಜ್ಯೋತಿರಂಗನಾಥ್ ಶಿಬಿರದ ವರದಿಯನ್ನು ನೀಡಿದರು. ಶ್ರೀಮತಿ ಮಾಲತಿ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

* ಬೆಂಗಳೂರು ಉತ್ತರ ಜಿಲ್ಲೆಯ' ಸ್ಕೌಟ್ಸ್ ನಡಿಗೆ ಹಳ್ಳಿಯ ಕಡೆಗೆ' ಕಾರ್ಯಕ್ರಮ ದಡಿಯಲ್ಲಿ 31ನೇ ತಿಂಗಳ ಸಮುದಾಯ ಸೇವಾ ಶಿಬಿರವನ್ನು ಜನವರಿ 31 ರಂದು ಗಂಟಿಗಾನಹಳ್ಳಿ ಇಲ್ಲಿ ಪ್ರತಿ ತಿಂಗಳಂತೆ ನಡೆಸಲಾಯಿತು. ಈ ಸೇವಾ ಶಿಬಿರದ ಸಮಯದಲ್ಲಿ ಹಳ್ಳಿಯ 2000 ಗಿಡಗಳಿಗೆ ನೀರು ಉಣಿಸಲಾಯಿತು. ಗ್ರಾಮ ಪಂಚಾಯತ್ ಅಧಿಕಾರಿಗಳೊಂದಿಗೆ ಸ್ವಚ್ಚತಾ ಅಭಿಯಾನ ಮತ್ತು ಜನಜಾಗೃತಿ ಮಾಡಲಾಯಿತು. ವಿವಿಧ ಕಾಲೇಜುಗಳಿಂದ 30 ರೋವರ್–ರೇಂಜರ್ ಭಾಗವಹಿಸಿದರು.



* ಮಾರುತಿ ಇಂಟರ್ ನ್ಯಾಶನಲ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಕೊಡಿಗೇಹಳ್ಳಿ ಗ್ರಾಮ ಪಂಚಾಯಿತು ಕಛೇರಿಗೆ ಬೇಟಿ ನೀಡಿ. ಅಲ್ಲಿನ ಅಧಿಕಾರಿಗಳನ್ನು




ಬೇಟಿ ಮಾಡಿ ಗ್ರಾಮ ಪಂಚಾಯತ್ ಪಾತ್ರ ಜವಾಬ್ದಾರಿಗಳು ಮತ್ತು ಕಾರ್ಯನಿರ್ವಹನೆಯ ಬಗ್ಗೆ ತಿಳಿಸಿದರು.

* ಜನವರಿ 23 ರಂದು ಆರ್.ಟಿ. ನಗರ ಸ್ಥಳೀಯ ಸಂಸ್ಥೆ ವತಿಯಿಂದ ರಸ್ತೆ ಸುರಕ್ಷೆ ಬಗ್ಗೆ ಸ್ಕೌಟ್ಸ್ ಗೈಡ್ಸ್‌ಗಳಿಗೆ ರಸ್ತೆ ಸುರಕ್ಷೆಯ ನಿಯಮಗಳು ಹಾಗೂ ಪಾಲಿಸುವ ಬಗ್ಗೆ ಟ್ರಾಫಿಕ್ ವಾರ್ಡನ್ ಇವರು ತಿಳಿಸಿದರು. ಕಾರ್ಯಕ್ರಮವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಸನ್ನ ಕುಮಾರ್ ಉದ್ಘಾಟಿಸಿದರು. ಆರ್.ಟಿ. ನಗರ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀಮತಿ ಸುನೀತ ಇವರು ಸಂಘಟಿಸಿದರು.




* ಶ್ರದ್ಧಾಂಜಲಿ ಇಂಟ್ರಿಗೇಟೆಡ್ ವಿಶೇಷ ಶಾಲೆಯ ಕಬ್–ಬುಲ್‌ಬುಲ್‌ಗಳಿಂದ ರಸ್ತೆ ಸುರಕ್ಷೆ ಬಗ್ಗೆ ಟ್ರಾಪಿಕ್ ಪೋಲಿಸ್ ಇವರ ಮೂಲಕ ತಿಳಿಸಲಾಯಿತು. ಶಾಲಾ ಪ್ರಾಂಶುಪಾಲರು ಶ್ರೀಮತಿ ಪನ್ನಗ ಇವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಟ್ರಾಫಿಕ್ ಪೊಲೀಸ್ ಅವರಗೆ ಧನ್ಯವಾದ ಸಲ್ಲಿಸಿದರು. ಕಾರ್ಯಕ್ರಮವನ್ನು ಶ್ರೀಮತಿ ರಾಧಮಣಿ ಫ್ಲೋಕ್ ಲೀಡರ್ ಕಾರ್ಯಕ್ರಮವನ್ನು ಸಂಘಟಿಸಿದರು.



## ಬೆಂಗಳೂರು ಪೂರ್ವ

* ಅತ್ತಿಬೆಲೆ ಸ್ಥಳೀಯ ಸಂಸ್ಥೆಯ ವತಿಯಿಂದ ಜನವರಿ 10 ರಂದು ಪ್ರಶಸ್ತಿ ಇಂಟರ್‌ನ್ಯಾಷನಲ್ ಸ್ಕೂಲ್ ಯಡವನಹಳ್ಳಿ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ ಮತ್ತು ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ



ರ್ಯಾಲಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್‌ರವರು ಮತ್ತು ಪ್ರಶಸ್ತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ರಶ್ಮಿರೆಡ್ಡಿ, ಸ್ಥಳೀಯ ಕಾರ್ಯದರ್ಶಿ ಶ್ರೀಮತಿ ಪ್ರಭಾವತಿ, ಎಸ್.ಜಿ.ವಿ. ಹಾಗೂ ಇತರೆ ಗಣ್ಯರು ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಜಿಲ್ಲಾ ಕಾರ್ಯದರ್ಶಿರವರು ಉದ್ಘಾಟನ ನುಡಿ ನುಡಿದರು. ಶಾಲೆಯ ಕಾರ್ಯದರ್ಶಿರವರು ಮಾತನಾಡಿ. ಮೇಳದಲ್ಲಿ ಪಾಲ್ಗೊಂಡ ಕಬ್–ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್, ಹಾಗೂ ಸ್ಕೌಟರ್ಸ್ ಮತ್ತು ಗೈಡರ್ಸ್ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಸುಮಾರು 245 ವಿದ್ಯಾರ್ಥಿಗಳ ಭಾಗವಹಿಸಿದ್ದರು.

* ಸರ್ಜಾಪುರ ಸ್ಥಳೀಯ ಸಂಸ್ಥೆಯ ವತಿಯಿಂದ ಜನವರಿ 17 ರಂದು ಸರ್ಕಾರಿ ಮಾದರಿ ಹೆಣ್ಣು ಮಕ್ಕಳ ಪ್ರಾಥಮಿಕ ಪಾಠ ಶಾಲೆ ಸರ್ಜಾಪುರದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ ಮತ್ತು ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು (ವ.ಸ.)ರವರು ಉದ್ಘಾಟನೆ ನಂತರ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಶ್ರೀ ರಾಮಕೃಷ್ಣಯ್ಯ, ಕಾರ್ಯದರ್ಶಿ, ಸ್ಥಳೀಯ ಸಂಸ್ಥೆಯ ಪದಾಧಿಕಾರಿಳು, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು, ಗ್ರಾಮ ಪಂಚಯಿತಿಅಭಿವೃದ್ಧಿ ಅಧಿಕಾರಿಗಳು, ಎಸ್.ಡಿ.ಎಂ.ಸಿ ಅಧ್ಯಕ್ಷರು, ಶಾಲಾ ಮುಖ್ಯ ಶಿಕ್ಷಕರು ಶ್ರೀ ರಾಜಶೇಖರ್, ಎಸ್.ಜಿ.ವಿ.ರವರು ಹಾಗೂ ಸುಮಾರು 240 ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಹೆಬ್ಬಗೋಡಿ ಸ್ಥಳೀಯ ಸಂಸ್ಥೆಯ ವತಿಯಿಂದ ಜನವರಿ 22 ರಂದು ಸರ್ಕಾರಿ ಪ್ರೌಢ ಶಾಲೆ ಹೆಬ್ಬಗೋಡಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ ಮತ್ತು ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್ ನರೇಂದ್ರಕುಮಾರ್, ಶಾಲಾ ಮುಖ್ಯ ಶಿಕ್ಷಕರು, ಕಬ್ ಮತ್ತು ಬುಲ್ ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್, ಹಾಗೂ ಸ್ಕೌಟರ್ಸ್ ಮತ್ತು ಗೈಡರ್ಸ್ ಶಿಕ್ಷಕರು ಮತ್ತು ಸುಮಾರು450 ವಿದ್ಯಾರ್ಥಿಗಳ ಭಾಗವಹಿಸಿದ್ದರು.

* ಜಿಗಣಿ ಸ್ಥಳೀಯ ಸಂಸ್ಥೆಯ ವತಿಯಿಂದ ಜನವರಿ 30 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ಕೊಪ್ಪಗೇಟ್ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ ಮತ್ತು ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಎ.ಎನ್ ನರೇಂದ್ರಕುಮಾರ್ ಹಾಗೂ ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಸ್ಥಳೀಯ ಪದಾಧಿಕಾರಿಗಳು ಕಬ್ ಮತ್ತು ಬುಲ್ ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್, ಹಾಗೂ ಸ್ಕೌಟರ್ಸ್ ಮತ್ತು ಗೈಡರ್ಸ್ ಶಿಕ್ಷಕರು ಮತ್ತುಸುಮಾರು 230 ವಿದ್ಯಾರ್ಥಿಗಳ ಭಾಗವಹಿಸಿದ್ದರು.

* ಆನೇಕಲ್ ಸ್ಥಳೀಯ ಸಂಸ್ಥೆಯ ವತಿಯಿಂದ ಫೆಬ್ರವರಿ 04 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ಕೊಪ್ಪಗೇಟ್ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ ಮತ್ತು ಮಕ್ಕಳ ಹಬ್ಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಶ್ರೀ ಎ.ಎನ್ ನರೇಂದ್ರಕುಮಾರ್, ಶ್ರೀ ಲಕ್ಷ್ಮೀಕಾಂತರಾಜ್ ಜಿಲ್ಲಾ ಖಜಾಂಚಿ ಶ್ರೀ ಆರ್.ಎಲ್. ನಾರಾಯಣಸ್ವಾಮಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ,



ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಸ್ಥಳೀಯ ಪದಾಧಿಕಾರಿಗಳು ಕಬ್ ಮತ್ತು ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್, ಹಾಗೂ ಸ್ಕೌಟರ್ಸ್ ಮತ್ತು ಗೈಡರ್ಸ್ ಶಿಕ್ಷಕರು ಮತ್ತು ಸುಮಾರು 220 ವಿದ್ಯಾರ್ಥಿಗಳ ಭಾಗವಹಿಸಿದ್ದರು.

## ಬೀದರ್

* ಜನವರಿ 25 ರಂದು ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಬೀದರ ವತಿಯಿಂದ "ರಾಷ್ಟ್ರೀಯ ಮತದಾರರ ದಿನಾಚರಣೆ"ಯ ಅಂಗವಾಗಿ ಜಿಲ್ಲಾಧಿಕಾರಿಗಳ ಕಚೇರಿಯಿಂದ ಶ್ರೀ ಚನ್ನಬಸವ ಪಟ್ಟದೇವರು ರಂಗಮಂದಿರ ಮಾರ್ಗವಾಗಿ ಜಾಥಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಡಾ|| ಶಿಲ್ಪಾ ಶರ್ಮಾ, ಭಾ.ಆ.ಸೇ, ಜಿಲ್ಲಾಧಿಕಾರಿಗಳು ಬೀದರರವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಜಾಥಾ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಯೂನಿಕ್ ಪಬ್ಲಿಕ್ ಶಾಲೆ ಬೀದರ ಈ ಶಾಲೆಯ ಸ್ಕೌಟ್ಸ್, ಗೈಡ್ಸ್ ಮಕ್ಕಳು ಹಾಗೂ ಶ್ರೀ ರಾಚಯ್ಯ ನಾಸಿ ಸಹಾಯಕ ಕಾರ್ಯದರ್ಶಿಗಳು, ಶ್ರೀಮತಿ ಸುಜಾತ ಪೂಜಾರಿ, ಡಿ.ಓ.ಟಿ., ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ.ರವರು ಭಾಗವಹಿಸಿದ್ದರು.




* ಜನವರಿ 26 ರಂದು ಜಿಲ್ಲಾ ಪಂಚಾಯತ್, ಬೀದರ ಇಲ್ಲಿ ಡಾ. ಗೀರಿಶ್ ದಿಲೀಪ್ ಬಿ., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್, ಬೀದರ ಇವರು 76ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಯೂನಿಕ್ ಪಬ್ಲಿಕ್ ಶಾಲೆ ಶಿವಾನಗರ ಬೀದರ ಶಾಲೆಯ ಸ್ಕೌಟ್ಸ್–ಗೈಡ್ಸ್ ಮಕ್ಕಳು ಹಾಗೂ ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ.ರವರು ಭಾಗವಹಿಸಿದ್ದರು.



* ಫೆಬ್ರವರಿ 05 ರಂದು ಜಿಲ್ಲಾ ಸಂಸ್ಥೆ ಬೀದರ ಹಾಗೂ ಸ್ಥಳೀಯ ಸಂಸ್ಥೆ ಔರಾದ್ ವತಿಯಿಂದ ತಾಲೂಕ ಮಟ್ಟದ ಸ್ಕೌಟರ್–ಗೈಡರ್ ಸಮಾವೇಶವನ್ನು ಶ್ರೀ ಜಯರಾಜ್ ಜೋಯೆಲ್ ತಾಲೂಕ ದೈಹಿಕ ಶಿಕ್ಷಣಾಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಸವನಗಲ್ಲಿ ಔರಾದ್ ಇಲ್ಲಿ ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರಭಾವತಿ ರವರು ಆಗಮಿಸಿದ್ದರು. ಜಿಲ್ಲಾ ಸಂಸ್ಥೆ ಬೀದರ ವತಿಯಿಂದ ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ.ರವರು ಆಗಮಿಸಿದ್ದರು. ಶ್ರೀ ಮಹೇಂದ್ರಸಿಂಗ್ ಪಾಟೀಲ್, ಕಾರ್ಯದರ್ಶಿಗಳುರವರು ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಕಬ್ ಮಾಸ್ಟರ್, ಫ್ಲಾಕ್ ಲೀಡರ್, ಗೈಡ್ ಕ್ಯಾಪ್ಟನ್, ಸ್ಕೌಟ್ ಮಾಸ್ಟರ್ 22 ಜನ ಶಿಕ್ಷಕರು ಭಾಗವಹಿಸಿದ್ದರು.



## ಚಿಕ್ಕಬಳ್ಳಾಪುರ

* ಜನವರಿ 04 ರಂದು ಅರುಣೋಧಯ ಶಾಲೆ, ಬಾಗೇಪಲ್ಲಿ ಇಲ್ಲಿ ದ್ವಿತೀಯ ಸೋಪಾನ ಪರೀಕ್ಷೆಯ ಪೂರ್ವ ಸಿದ್ದತಾ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ 50 ಸ್ಕೌಟ್ಸ್ ಮತ್ತು 40 ಗೈಡ್ಸ್‌ಗಳು ಭಾಗವಹಿಸಿದರು.

* ಜನವರಿ 04 ರಂದು ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು, ಚಿಂತಾಮಣಿ ಇಲ್ಲಿ ರೋವರ್ಸ್‌ಗಳಿಗೆ ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ಮಾಹಿತಿ ನೀಡಿದರು ಮತ್ತು ರೋವರ್ ಸ್ಕೌಟ್ ಲೀಡರ್ ಶ್ರೀ ವೆಂಕಟರಮಣಪ್ಪ ರವರು ಮತ್ತು ರೋವರ್ಸ್‌ಗಳು ಉಪಸ್ಥಿತರಿದ್ದರು.

* ಜನವರಿ 13 ರಂದು ಜಿಲ್ಲಾ ಸಂಸ್ಥೆ ಚಿಕ್ಕಬಳ್ಳಾಪುರ ಹಾಗೂ ಎಸ್.ಎಸ್.ಇ.ಎ ಕಾಲೇಜಿನ ರೋವರ್ಸ್ ಘಟಕ ಇವರ ಸಹಯೋಗದಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಸ್ವಾಮಿ ವಿವೇಕಾನಂದರ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

* ಜನವರಿ 21 ರಂದು ಶಾಲಾ ಶಿಕ್ಷಣ ಇಲಾಖೆ ಮತ್ತು ಸ್ಥಳೀಯ ಸಂಸ್ಥೆ ಗುಡಿಬಂಡೆ ಇಲ್ಲಿ ತಾಲ್ಲೂಕು ಮಟ್ಟದ ಸ್ಕೌಟರ್ಸ್–ಗೈಡರ್ಸ್ ಸಮಾವೇಶವನ್ನು ಆಯೋಜಿಸಲಾಗಿತ್ತು. ಮಾನ್ಯ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಮತಿ ನಾಗಮಣಿ ಉದ್ಘಾಟಿಸಿದರು, ಕಾರ್ಯಕ್ರಮ ಅಧ್ಯಕ್ಷತೆಯನ್ನು ಕ್ಷೇತ್ರಶಿಕ್ಷಣಾಧಿಕಾರಿ ಶ್ರೀ ಕೃಷ್ಣಪ್ಪರವರು ವಹಿಸಿದ್ದರು. ಈ ಸಂದರ್ಭದಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಕೆ.ವಿ. ನಾರಾಯಣಸ್ವಾಮಿ, ಕಾರ್ಯದರ್ಶಿ ಶ್ರೀ ಮುನಿಕೃಷ್ಣಪ್ಪ, ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀ ಬಾಲಾಜಿ, ಜಿ.ಪಿ.ಟಿ ಸಂಘದ ಶ್ರೀ ರಾಜಶೇಖರ್, ಕಸಾಪ ಶ್ರೀ ಮಂಜುನಾಥ್, ಪದಾಧಿಕಾರಿಗಳು ಹಾಗೂ ಸ್ಕೌಟರ್ಸ್–ಗೈಡರ್ಸ್ ಭಾಗವಹಿಸಿದ್ದರು.

* ಜನವರಿ 22 ರಂದು ಚಿಕ್ಕಬಳ್ಳಾಪುರ, ನೆಹರು ಯುವ ಕೇಂದ್ರ ಕೋಲಾರ–ಚಿಕ್ಕಬಳ್ಳಾಪುರ, ಪೋಲಿಸ್ ಇಲಾಖೆ ಚಿಕ್ಕಬಳ್ಳಾಪುರ, ಸಹಯೋಗದಲ್ಲಿ ಚಿಂತಾಮಣಿ ನಗರದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು. ನಗರದ ವಿವಿಧ ರಸ್ತೆಗಳಲ್ಲಿ ಜಾಥಾ ಮಾಡಿ ಅರಿವು ಮೂಡಿಸಲಾಯಿತು. ಚಿಂತಾಮಣಿ ನಗರ ಠಾಣೆ ಸಬ್ ಇನ್ಸ್‌ಪೆಕ್ಟರ್ ಶ್ರೀ ನಾರಾಯಣಸ್ವಾಮಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ರಸ್ತೆ ಸುರಕ್ಷತಾ ಬಗ್ಗೆ ಮಾಹಿತಿ ನೀಡಿದರು. ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಚಿಂತಾಮಣಿ ಪ್ರಾಂಶುಪಾಲರಾದ ಶ್ರೀ ಸುಬ್ಬಯ್ಯರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟಕ ಶ್ರೀ ವಿಶ್ವನಾಥ ವಿ., ಕಾಲೇಜಿನ ರೋವರ್ ಲೀಡರ್ ಶ್ರೀ ವೆಂಕಟರಮಣಪ್ಪ, ವಿವಿಧ ಉಪನ್ಯಾಸಕರು, ಪೋಲಿಸ್ ಅಧಿಕಾರಿಗಳು ಮತ್ತು ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಜನವರಿ 23 ರಂದು ಬಿ.ಆರ್.ಸಿ ಕಛೇರಿ ಶಾಲಾ ಶಿಕ್ಷಣ ಇಲಾಖೆ ಮತ್ತು ಸ್ಥಳೀಯ ಸಂಸ್ಥೆ ಬಾಗೇಪಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ ರವರ ಸಹಯೋಗದಲ್ಲಿ ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶ ಹಾಗೂ ಪುನಶ್ಚೇತನ ಶಿಬಿರ ಮತ್ತು ಪೋಲೀಸ್ ಇಲಾಖೆ ಸಹಯೋಗದಲ್ಲಿ ರಸ್ತೆ ಸುರಕ್ಷತೆ ಸಪ್ತಾಹ ಕಾರ್ಯಕ್ರಮದ ಅಂಗವಾಗಿ ನಗರದ ಪ್ರಮುಖ ಬಿದಿಗಳಲ್ಲಿ ಸ್ಕೌಟ್ಸ್–ಗೈಡ್ಸ್‌ಗಳು ಮತ್ತು ಶಿಕ್ಷಕರಿಂದ ಜಾಥ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾನ್ಯ ತಹಶೀಲ್ದಾರ್ ಶ್ರೀಮತಿ ಮನೀಷಾ ಮಹೇಶ್ ಪತ್ರಿ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ವೆಂಕಟೇಶಪ್ಪ, ಬಿ.ಆರ್.ಸಿ ಶ್ರೀ ವೆಂಕಟರಾಮ್, ಜಿಲ್ಲಾ ತರಬೇತಿ ಆಯುಕ್ತೆ ಶ್ರೀಮತಿ ಲಕ್ಷ್ಮೀಹೊನ್ನಪ್ಪ ನಾಯಕ್ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

* ಜನವರಿ 26 ರಂದು ಗಣರಾಜ್ಯೋತ್ಸವವನ್ನು ದಳ, ಸ್ಥಳಿಯ, ಜಿಲ್ಲಾ ಮಟ್ಟದಲ್ಲಿ ಆಚರಿಸಲಾಯಿತು. ಸ್ಥಳೀಯ ಮತ್ತು ಜಿಲ್ಲಾ ಮಟ್ಟದಲ್ಲಿ ಪಥಚಲನದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ತಂಡಗಳು ಭಾಗವಹಿಸಿದರು.

* ಜನವರಿ 29 ರಂದು ಸ್ಥಳೀಯ ಸಂಸ್ಥೆ ಗುಡಿಬಂಡೆ ಮತ್ತು ಪಿ.ಎಂ.ಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸೋಮೇನಹಳ್ಳಿ ಇಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷ ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು.

* ಜನವರಿ 30 ರಂದು ಡಾ. ಹೆಚ್. ನರಸಿಂಹಯ್ಯ ರವರ ಜನ್ಮದಿನಾಚರಣೆ ಅಂಗವಾಗಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ವತಿಯಿಂದ ಬೆಂಗಳೂರುನಿಂದ ಗೌರಿಬಿದನೂರು ತಾಲೂಕಿಗೆ ಆಗಮಿಸಿದ "ವಿಜ್ಞಾನದೆಡೆಗೆ ನಮ್ಮ ನಡಿಗೆ" ಕಾರ್ಯಕ್ರಮದ ಪಾದಯಾತ್ರೆಯನ್ನು ಗೌರಿಬಿದನೂರು ನಗರದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವತಿಯಿಂದ ಸ್ವಾಗತಿಸಿ ಪಾಲ್ಗೊಂಡು ಸಹಕಾರ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರಾದ ಶ್ರೀ ಪುಟ್ಟಸ್ವಾಮಿಗೌಡರವರೊಂದಿಗೆ ಚಿಕ್ಕಬಳ್ಳಾಪುರ ಜಿಲ್ಲಾ, ಮತ್ತು ಗೌರಿಬಿದನೂರು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್, ದಳ ನಾಯಕರುಗಳು ಭಾಗವಹಿಸಿದ್ದರು.

* ಜನವರಿ 30 ರಂದು ಸ್ಥಳಿಯ ಸಂಸ್ಥೆ ಚಿಂತಾಮಣಿ, ಆರೋಗ್ಯ ಇಲಾಖೆ, ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಕ್ಷಯರೋಗ ಮುಕ್ತ ಅಂಗವಾಗಿ ಅರಿವು ಜಾಥ ಕಾಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ  ಸರ್ಕಾರಿ ಬಾಲಕರ ಕಾಲೇಜು ಮತ್ತು ಪ್ರೌಡಶಾಲೆ ಸ್ಕೌಟ್ಸ್ ರೋವರ್ಸ್‌ಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

* ಜನವರಿ 31 ರಂದು ಶಾಲಾ ಶಿಕ್ಷಣ ಇಲಾಖೆ ಮತ್ತು ಸ್ಥಳೀಯ ಸಂಸ್ಥೆ ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆರವರ ಸಹಯೋಗದಲ್ಲಿ ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶ ಹಾಗೂ ಪುನಶ್ಚೇತನ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಕೆ.ವಿ. ಶ್ರೀನಿವಾಸಮೂರ್ತಿ ರವರು ಉದ್ಘಾಟಿಸಿ ಶುಭಹಾರೈಸಿ ಮಾತನಾಡಿದರು. ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣಾಧಿಕಾರಿ ಶ್ರೀ ಹನುಮಂತರಾಯಪ್ಪ, ಕಾರ್ಯದರ್ಶಿ ಶ್ರೀ ಗಿರಿಧರ್ ವೈ.ಜಿ., ನಾಯಕರುಗಳು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಫೆಬ್ರವರಿ 01 ರಂದು ಡಾ. ಅಬ್ದುಲ್ ಕಲಾಂ ಭವನ ಚಿಕ್ಕಬಳ್ಳಾಪುರ ಇಲ್ಲಿ. ಚಿಕ್ಕಬಳ್ಳಾಪುರ, ಸಾರಿಗೆ ಇಲಾಖೆ, ಪೋಲಿಸ್ ಇಲಾಖೆರವರ ಸಹಯೋಗದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಜಿಲ್ಲಾ ಸಾರಿಗೆ ಇಲಾಖೆ ಅಧಿಕಾರಿಗಳಾದ ಶ್ರೀ ವಿವೇಕಾನಂದರವರು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪನಿರ್ದೇಶಕರಾದ ಶ್ರೀ ಮುನಿಕೇಪೇಗೌಡರವರು ವಹಿಸಿ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ಈ ಸಂದರ್ಭದಲ್ಲಿ ಮೋಟಾರು ವಾಹನ ನೀರೀಕ್ಷರಾದ ಶ್ರಿಮತಿ ಅರುಣ, ಜಿಲ್ಲಾ ನೌಕರರ ಸಂಘದ ನಿರ್ದೇಶಕರಾದ ಶ್ರೀ ಸುನೀಲ್, ಕಾರ್ಯಕ್ರಮದಲ್ಲಿ ಸುಮಾರು 150ಕ್ಕೂ ಹೆಚ್ಚು ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

* ಫೆಬ್ರವರಿ 04 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತೀಲಕುಂಟಹಳ್ಳಿಯ "ಶಿವಾಜಿ ಸ್ಕೌಟ್ ದಳ ಮತ್ತು ಝಾನ್ಸಿ ಗೈಡ್ ಕಂಪನಿ" ವತಿಯಿಂದ ಹೊರ ಸಂಚಾರ ಹಾಗೂ ಅಡುಗೆ ಪ್ರಾವಿಣ್ಯತಾ ಪದಕದ ಬಗ್ಗೆ (ಕುಕಿಂಗ್) ಕ್ಯಾಂಪನ್ನು ಸ್ಕೌಟ್ ಮಾಸ್ಟರ್ ವಿಜಯ್ ಕುಮಾರ್ ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಉಮಾರವರ ನೇತೃತ್ವದಲ್ಲಿ ಆಯೋಜಿಸಲಾಗಿತ್ತು.

* ಫೆಬ್ರವರಿ 05 ರಂದು ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಇಲಾಖೆ, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ. ಸ್ಥಳೀಯ ಸಂಸ್ಥೆ, ಚಿಂತಾಮಣಿ ಸಹಯೋಗದಲ್ಲಿ ಬಿ.ಆರ್.ಸಿ. ಕಛೇರಿ, ಚಿಂತಾಮಣಿ ಇಲ್ಲಿ ಚಿಂತಾಮಣಿ ತಾಲ್ಲೂಕು ಮಟ್ಟದ ಸ್ಕೌಟರ್ಸ್ ಗೈಡರ್ಸ್ ಸಮಾವೇಶ ಹಾಗೂ ವಾರ್ಷಿಕ ಮಹಾಸಭೆಯನ್ನು ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಶ್ರೀಮತಿ ಉಮಾದೇವಿ ವಿ.,ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾತನಾಡಿ ಚಿಂತಾಮಣಿ ತಾಲ್ಲೂಕಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳ ಅನುಷ್ಠಾನ, ದಳಗಳು ಪ್ರಾರಂಭಿಸುವ ಬಗ್ಗೆ, ಇಲಾಖೆ ವತಿಯಿಂದ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿ, ತರಬೇತಿ ಪಡೆದ ಎಲ್ಲರೂ ಘಟಕ ಪ್ರಾರಂಭಿಸುವಂತೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಪಕ್ಕಸಾಭಿ, ಬಿ.ಆರ್.ಪಿ ಮತ್ತು ನೋಡಲ್ ಅಧಿಕಾರಿ ಶ್ರೀಮಂಜುನಾಥ ಉಪಸ್ಥಿತರಿದ್ದರು.

* ಫೆಬ್ರವರಿ 13 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಿಡ್ಲಘಟ್ಟ ಇಲ್ಲಿ ರೋವರ್ಸ್ ರೇಂಜರ್ಸ್‌ಗಳ ಮಾಹಿತಿ ಮತ್ತು ಓ.ವೈ.ಎಂ.ಎಸ್ ನೋಂದಣಿ ಬಗ್ಗೆ ಕಾರ್ಯಗಾರ ಆಯೋಜಿಸಲಾಗಿತ್ತು. ಜಿಲ್ಲಾ ಕೋಶಾಧಿಕಾರಿ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ. ಮುರಳಿ ಆನಂದ್, ರೇಂಜರ್ ಲೀಡರ್ ಗಿರೀಜಾ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಘಟಕ ವಿಶ್ವನಾಥ ರವರು ಮಾಹಿತಿ ನೀಡಿದರು.













## ಚಿತ್ರದುರ್ಗ

* ಹೊಳಲ್ಕೆರೆ ಸ್ಥಳೀಯ ಸಂಸ್ಥೆ ಹಾಗೂ ಡ್ರೀಮ್ ವರ್ಲ್ಡ್ ಶಾಲೆಯ ವತಿಯಿಂದ ಜನವರಿ 22 ರಂದು ಸ್ಕೌಟ್ಸ್–ಗೈಡ್ಸ್‌ಗಳಿಗೆ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತ್ತು. ಹೊಳಲ್ಕೆರೆಯ ನಗರದ ಪ್ರಮುಖ ಬೀದಿಗಳಲ್ಲಿ ಹಾಗೂ ವೃತ್ತಗಳಲ್ಲಿ ಸ್ಕೌಟ್ಸ್ ಗೈಡ್ಸ್‌ಗಳು ರಸ್ತೆ ಜಾಗೃತಿಯ ಬಗ್ಗೆ ಘೋಷಣೆಗಳನ್ನು ಕೂಗುತ್ತಾ ಸಾಗಿದರು ಹಾಗೂ ಹೆಲ್ಮೇಟ್ ಧರಿಸದೆ ವಾಹನ ಚಾಲನೆ ಮಾಡುವುದರಿಂದ ಸಂಭವಿಸುವ ಅಪಘಾತಗಳ ಬಗ್ಗೆ ಕಿರುನಾಟಕ ಹಾಗೂ ಅನುಕರಣೆಯನ್ನು ವೃತ್ತಗಳಲ್ಲಿ ಮಾಡಿ  ಜನರಿಗೆ ಜಾಗೃತಿಯನ್ನು ಮೂಡಿಸಿದರು, ಮತ್ತು ರಸ್ತೆಯಲ್ಲಿ ಸಾಗುವ ವಾಹನ ಚಾಲಕರುಗಳಿಗೆ ಭಿತ್ತಿ ಪತ್ರಗಳನ್ನು ನೀಡಿ ಮಾಹಿತಿಯನ್ನು ಕೊಟ್ಟರು. ಶಾಲಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಹಾಗೂ ಸಿಗ್ನಲ್ಸ್‌ಗಳ ಬಗ್ಗೆ ಶ್ರೀ ಮಹಂತೇಶರವರು ಸವಿಸ್ತಾರವಾಗಿ ತಿಳಿಸಿ ಹೇಳಿದರು. ಮುಖ್ಯ ಅಥಿತಿಗಳಾಗಿ ಆಗಮಿಸಿದ ಪ್ರಕಾಶ R.T.O ಅಧಿಕಾರಿ ಇವರು ವಾಹನ ಚಾಲನೆ ಮಾಡುವಾಗ ಮುಂಬದಿ ಮತ್ತು ಹಿಂಬದಿ ಕುಳಿತಿರುವ ವ್ಯಕ್ತಿಗಳು ಹೆಲ್ಮೇಟ್ ಧರಿಸಿ ಸಾಗಬೇಕು. ಸುರಕ್ಷಿತವಾಗಿ ಸಾಗಲು ಸೀಟ್‌ಬೆಲ್ಟ್‌ನ್ನು ಕಡ್ಡಾಯವಾಗಿ ಧರಿಸಬೇಕೆಂದು



ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಹಾಗೂ ವಕೀಲರಾದ ಶ್ರೀ ಮಹೇಶ್ವರಪ್ಪ ಎನ್.ಆರ್., ಶ್ರೀಮತಿ ಶಶಿಕಲಾ ಎಸ್.ಬಿ., ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು, ಶಾಲಾ ಮುಖ್ಯೋಪಾಧ್ಯಯರು, ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಸ್ಥಳೀಯ ಸಂಸ್ಥೆ ಮೊಳಕಾಲ್ಮೂರು ಸಂಸ್ಥೆ ವತಿಯಿಂದ ಜನವರಿ 24 ರಂದು ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ತಾಲ್ಲೂಕು ಅರಕ್ಷಕ ಠಾಣೆ ಮೊಳಕಾಲ್ಮೂರು ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮವನ್ನು ಮಾಡಲಾಯಿತು. ವಿವಿಧ ಶಾಲೆಗಳಿಂದ ಮಕ್ಕಳ ಈ ಸಪ್ತಾಹದಲ್ಲಿ ಪಾಲ್ಗೊಂಡು ಜನಗಳಿಗೆ ಅಪಘಾತದ ಬಗ್ಗೆ ಜಾಗೃತಿಯನ್ನು ಮೂಡಿಸಲು ಘೋಷಣೆಗಳನ್ನು ಕೂಗುತ್ತಾ ರಸ್ತೆಗಳಲ್ಲಿ ಜಾಥಾವನ್ನು ನಡೆಸಿದರು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಭಡಯ್ಯ ಮತ್ತು ಇತರೆ ಪದಾಧಿಕಾರಿಗಳು ಪೋಲಿಸ್ ಠಾಣೆಯ ಅಧಿಕಾರಿಗಳು ಪಾಲ್ಗೊಂಡರು.



* ಜನವರಿ 26 ರಂದು 76ನೇ ಗಣರಾಜ್ಯೋತ್ಸವವನ್ನು ಜಿಲ್ಲಾ ಸಂಸ್ಥೆ ವತಿಯಿಂದ ಆಚರಿಸಲಾಯಿತು. ಅಧ್ಯಕ್ಷತೆಯನ್ನು ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಜಿ.ಎಸ್. ಉಜಿನಪ್ಪರವರು ವಹಿಸಿದ್ದರು. ಜಿಲ್ಲಾ ಸಂಘಟಿಕರಾದ ಶ್ರೀ ಕೆ.ಟಿ ಮಲ್ಲೇಶಪ್ಪನವರು ಸ್ವಾಗತವನ್ನು ಕೋರಿದರು. ಶ್ರೀಮತಿ ಸವಿತಾ ಶಿವಕುಮಾರ್ ಜಿಲ್ಲಾ ಆಯುಕ್ತರು (ಗೈಡ್) ಧ್ವಜಾರೋಹಣ ನಡೆಸಿದರು. ಉಪಾಧ್ಯಕ್ಷರಾದ ಶ್ರೀ ಉಜಿನಪ್ಪರವರು ಗಣರಾಜ್ಯೋತ್ಸವದ ಬಗ್ಗೆ ಹಾಗೂ ಸಂವಿಧಾನದ ಬಗ್ಗೆ ಮಾತನಾಡಿದರು. ಜಿಲ್ಲಾ ಸಹ ಕಾರ್ಯದರ್ಶಿಗಳಾದ ಡಾ॥ ರಹಮತುಲ್ಲಾರವರು ಶುಭಕೋರಿದರು.

* 76ನೇ ಗಣರಾಜ್ಯೋತ್ಸವದ ಅಂಗವಾಗಿ ಮೊಳಕಾಲ್ಮುರು ಕ್ರೀಡಾಂಗಣದಲ್ಲಿ ನೆಡದ ಪೆರೇಡ್‌ನಲ್ಲಿ ಭಾಗವಹಿಸಿದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು.

* ಜನವರಿ 31 ರಂದು ಜಿ.ಹೆಚ್.ಪಿ.ಎಸ್ ಮಾರಭ ಘಟ್ಟ ಹೊಸದುರ್ಗ ತಾಲ್ಲೂಕು ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ಚಾರಣ ಶಿಬಿರವನ್ನು ಶಾಲಾ ಸ್ಕೌಟ್ಸ್ ಶಿಕ್ಷಕರಾದ ಶ್ರೀ ಯೋಗರಾಜ್ ಇವರು ಹಮ್ಮಿಕೊಂಡಿದ್ದರು ದೇವಸ್ಥಾನ. ಮಠ–ಮಸೀದಿಗಳಿಗೆ ಹಾಗೂ ನ್ಯಾಯಾಲಯದ ಕಛೇರಿಗೆ ಭೇಟಿ ನೀಡಿ ಮಕ್ಕಳಿಗೆ ಅದರಿಂದಾಗುವ



ಪ್ರಯೋಜನಗಳನ್ನು ಅಲ್ಲಿಯ ಅಧಿಕಾರಿಗಳು ಹಾಗೂ ಧರ್ಮಾಧಿಕಾರಿಗಳು ತಿಳಿಸಿದರು. 40 ಸ್ಕೌಟ್ಸ್–ಗೈಡ್ಸ್‌ಗಳಿಗೆ ಟಿ–ಶರ್ಟ್‌ಗಳನ್ನು ಎಂ.ಈ.ಐ.ಎಲ್. ಕಂಪನಿ ಹೈದರಾಬಾದ್ ಇವರು ನೀಡಿರುತ್ತಾರೆ. ಮಕ್ಕಳಿಗೆ ಊಟ–ಉಪಹಾರದ ವ್ಯವಸ್ಥೆಯನ್ನು ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮೋಷಿನ್‌ರವರು ನೀಡಿದರು.

* ಫೆಬ್ರವರಿ 05 ರಂದು ಭರಮ ಸಾಗರದ ಡಿ.ವಿ.ಎಸ್ ಶಾಲೆಯಲ್ಲಿ ಜಿಲ್ಲಾ ಸಂಸ್ಥೆ ಹಾಗೂ ಆರ್.ಟಿ.ಓ ಅಧಿಕಾರಿಗಳ ಸಂಯುಕ್ತಾಶ್ರಯದಲ್ಲಿ ರಸ್ತೆ ಸಪ್ತಾಹ ಕಾರ್ಯಕ್ರಮವನ್ನು ಮಾಡಲಾಯಿತ್ತು. ಶಾಲಾ ಮುಖ್ಯೋಪಾಧ್ಯಯರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಜಿಲ್ಲಾ ಸಂಘಟಿಕರಾದ ಶ್ರೀ ಮಲ್ಲೇಶಪ್ಪ .ಕೆ.ಟಿ ಇವರು ಮಾಡಿದರು. ರಸ್ತೆ ಸುರಕ್ಷತೆ ಹಾಗೂ ಶ್ರೀ ರಾಜೇಶ್ ಪಿ.ಟಿ.ರವರು ರಸ್ತೆ ಸಪ್ತಾಹದ ಬಗ್ಗೆ ಮಕ್ಕಳಿಗೆ ತಿಳಿಸಿ ಹೇಳಿದರು. ಸುಮಾರು 750 ಮಕ್ಕಳು ಭಾಗವಹಿಸಿದ್ದರು. ಶಾಲೆಯ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ ಮಾಸ್ಟರ್, ಫ್ಲಾಕ್–ಕಬ್ಸ್‌ಯವರು ಭಾಗವಹಿಸಿದ್ದರು.



* ಜಿಲ್ಲಾ ಅಧಿಕಾರಿ ಮತ್ತು ಉಪನಿರ್ದೇಶರು ಸಾರ್ವಜನಿಕ ಶಿಕ್ಷಣ ಇಲಾಖೆ ಒಪ್ಪಿಗೆ ಮೇರೆಗೆ ಫೆಬ್ರವರಿ 06 ರಿಂದ 08ರ ವರೆಗೆ ನಡೆದ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದಲ್ಲಿ ಸರ್ಕಾರಿ ಕಲಾ ಕಾಲೇಜು (ಸ್ವಾಯುತ) ಚಿತ್ರದುರ್ಗ ರೋವರ್ಸ್–ರೇಂಜರ್ಸ್ ಹಾಗೂ ಚಳ್ಳಕೆರೆ ರೋವರ್ಸ್ ಮತ್ತು ರೇಂಜರ್ಸ್‌ಗಳು ಸ್ವಯಂ ಸೇವಕರಾಗಿ 3 ದಿನಗಳ ಕಾಲ ಶ್ರೀ ಮುರಾಘ ರಾಜೇಂದ್ರ ಮಠದಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ.

* ಚಿತ್ರದುರ್ಗ ಸ್ಥಳೀಯ ಸಂಸ್ಥೆ ದ್ವಿತೀಯ ಸೋಪಾನ ತರಬೇತಿ ಪರೀಕ್ಷಾ ಶಿಬಿರವನ್ನು ಫೆಬ್ರವರಿ 10 ರಿಂದ 11ರ ವರೆಗೆ ಸಂಘಟಿಸಲಾಯಿತ್ತು. ಸ್ಕೌಟ್ ಶಿಬಿರದ ನಾಯಕರಾಗಿ ಶ್ರೀ ಸಿ.ಎನ್. ಮಹೇಶ್, ಎಲ್.ಟಿ.ರವರು ಗೈಡ್ಸ್ ಶಿಬಿರದ ನಾಯಕಿಯಾಗಿ ಶ್ರೀಮತಿ ತಸ್ಮಿಯಾ ಊ.ಘ.ಃ ರವರು ವಹಿಸಿಕೊಂಡಿದ್ದರು.

* ಜಿಲ್ಲಾ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಹಾಗೂ ನೆಹರು ಯುವ ಕೇಂದ್ರ, ಪ್ಯಾರ ಮೆಡಿಕಲ್ ಕಾಲೇಜು ಚಿತ್ರದುರ್ಗ, ಚಿತ್ರದುರ್ಗ ಸ್ಥಳೀಯ ಸಂಸ್ಥೆ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಡಬನಕಟ್ಟೆ ಶಾಲೆಯಲ್ಲಿ ನಡೆದ ಬ್ಲಡ್ ಗ್ರೂಪ್ ತಪಾಸಣೆ ಶಿಬಿರದಲ್ಲಿ ಸ್ಥಾನಿಕ ಆಯುಕ್ತರು ಶ್ರೀ ದೇವರಾಜ್ ಸಹ ಕಾರ್ಯದರ್ಶಿ ಶ್ರೀ ವಿಶ್ವನಾಥ ಇವರು ಭಾಗವಹಿಸಿದ್ದರು.

* ಜನವರಿ 25 ರಿಂದ 27ರ ವರೆಗೆ ಸ್ಥಳೀಯ ಸಂಸ್ಥೆ ವಾಗ್ದೇವಿ ಸಮ್ಮಿಲನ ಕಬ್, ಬುಲ್–ಬುಲ್, ಸೌಟ್ಸ್ ಮತ್ತು ಗೈಡ್ಸ್, ರೋವರ್ಸ್ ರೇಂಜರ್ಸ್ ಮತ್ತು ಹೊಳಲ್ಕೆರೆಯ ಎಲ್ಲಾ ಶಾಲೆಯ 2007 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿಯಾದ ಶ್ರೀ ಬಿ.ಎ. ಲಿಂಗಾರೆಡ್ಡಿ, ಜಿಲ್ಲಾ ಸಹ ಕಾರ್ಯದರ್ಶಿ ಡಾ॥ ರಹಮತುಲಾ, ಜಿಲ್ಲಾ ಸ್ಥಾನಿಕ ಆಯುಕ್ತರು (ಸ್ಕೌಟ್ಸ್) ಶ್ರೀ ಎಂ.ಕೆ. ಅನಂತ್‌ರೆಡ್ಡಿ, ಜಿಲ್ಲಾ ಗೈಡ್ಸ್ ಆಯುಕ್ತರು ಶ್ರೀಮತಿ ಸವಿತಾ ಶಿವಕುಮಾರ್, ಜಿಲ್ಲಾ ಸಂಘಟಿಕರು ಶ್ರಿ ಮಲ್ಲೇಶಪ್ಪ ಕೆ.ಟಿ. ಹಾಗೂ ಜಿಲ್ಲಾ ಸಂಘಟನಾ ಶಿಕ್ಷಕರು ರವಿ ಸಿ.,ರವರು ಭಾಗವಹಿಸಿದ್ದರು.



## ಚಿಕ್ಕಮಗಳೂರು

* ಫೆಬ್ರವರಿ 01 ರಂದು ರಸ್ತೆ ಸುರಕ್ಷತಾ ಸಪ್ತಾಹ ಕಾಯಕ್ರಮವನ್ನು ಜಿಲ್ಲಾ ಸಂಸ್ಥೆ, ಚಿಕ್ಕಮಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಶ್ರೀ ರಾಕೇಶ್ ಮತ್ತು ಅವರ ತಂಡ ಹಾಗೂ ಸಂಚಾರಿ ಪೋಲಿಸ್ ಇಲಾಖೆಯ ನೇತೃತ್ವದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಂದ ಸಂಚಾರ ನಿಯಮಗಳನ್ನು ಸಾರ್ವಜನಿಕರಿಗೆ ತಿಳಿಸುವುದರ ಮೂಲಕ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ, ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ಜಿಲ್ಲಾ ಆಯುಕ್ತರಾದ ಶ್ರೀ ಫಣಿರಾಜ್ ಹಾಗೂ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ನೀಲಕಂಠಚಾರ್ಯ, ಜಿಲ್ಲಾ ಸಂಘಟಕರಾದ ಶ್ರೀ ಬಿ.ಎನ್. ಕಿರಣ್‌ಕುಮಾರ್ ಹಾಜರಿದ್ದರು.




* ಜನವರಿ 13 ರಿಂದ 17ರ ವರೆಗೆ ರಸ್ತೆ ಸುರಕ್ಷತಾ ಸಪ್ತಾಹ ಕಾಯಕ್ರಮವನ್ನು ಚಿಕ್ಕಮಗಳೂರಿನಲ್ಲಿ ಏರ್ಪಡಿಸಲಾಗಿತ್ತು. ಜಿಲ್ಲಾ ಸಂಸ್ಥೆ, ಚಿಕ್ಕಮಗಳೂರು ಇವರ ಸಹಯೋಗದೊಂದಿಗೆ, ಪೋಲಿಸ್ ಇಲಾಖೆಯ ಶ್ರೀ ವಿಕ್ರಂ ಅಮಟೆ, ಐ.ಪಿ.ಎಸ್. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಹಾಗೂ ಶ್ರೀ ಕೃಷ್ಣಮೂರ್ತಿ, ಎ.ಎಸ್.ಪಿ. ಇವರ ನೇತೃತ್ವದಲ್ಲಿ ಟ್ರಾಫಿಕ್ ರೂಲ್ಸ್‌ಗಳನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಲಾಯಿತು. ಈ ಕಾರ್ಯಕಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಹಾಗೂ ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್ ಮತ್ತು ಜಿಲ್ಲಾ ಆಯುಕ್ತರಾದ ಶ್ರೀ ಫಣಿರಾಜ್ ಹಾಗೂ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ನೀಲಕಂಠಚಾರ್ಯ, ಜಿಲ್ಲಾ ಸಂಘಟಕರಾದ ಶ್ರೀ ಬಿ.ಎನ್. ಕಿರಣ್‌ಕುಮಾರ್ ಹಾಜರಿದ್ದರು.



* ಜಿಲ್ಲಾ ಸಂಸ್ಥೆ, ಶಾಲಾ ಶಿಕ್ಷಣ ಇಲಾಖೆ, ವಸತಿ ಶಾಲೆ ಚಿಕ್ಕಮಗಳೂರು ಇವರ ಸಹಯೋಗದೊಂದಿಗೆ 2024–25ನೇ ಸಾಲಿನ ಸಹ ಶಿಕ್ಷಕ–ಶಿಕ್ಷಕಿಯರಿಗೆ ಸ್ಕೌಟ್ಸ್–ಗೈಡ್ಸ್ ಮೂಲ ತರಬೇತಿ ಶಿಬಿರವನ್ನು ಜನವರಿ 02 ರಿಂದ 08ರ ವರೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬೀಕನಹಳ್ಳಿ ಚಿಕ್ಕಮಗಳೂರು ಏರ್ಪಡಿಸಲಾಗಿತ್ತು. ಸ್ಕೌಟ್ಸ್ ವಿಭಾಗಕ್ಕೆ 22 ಶಿಕ್ಷಕರು, ಗೈಡ್ಸ್ ವಿಭಾಗಕ್ಕೆ 28 ಶಿಕ್ಷಕರು ತರಬೇತಿ ಪಡೆಯಲು ಆಗಮಿಸಿದ್ದರು. ಈ ಶಿಬಿರದಲ್ಲಿ ಸ್ಕೌಟ್ಸ್ ವಿಭಾಗದಕ್ಕೆ ತರಬೇತಿ ನಾಯಕರಾಗಿ



ಶ್ರೀಮತಿ ಹೇಮಾಲತಾ ಎಲ್.ಟಿ., ಶಿವಮೊಗ್ಗ, ಗೈಡ್ಸ್ ವಿಭಾಗಕ್ಕೆ ತರಬೇತಿ ನಾಯಕರಾಗಿ ಶ್ರೀಮತಿ ಕಾತ್ಯಾಯಿನಿ, ಎಲ್.ಟಿ., ಶಿವಮೊಗ್ಗ ಕಾರ್ಯನಿರ್ವಹಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಂ.ಎನ್. ಷಡಕ್ಷರಿ, ಡಿ.ಸಿ.ಸಿ. ಚಿಕ್ಕಮಗಳೂರು, ಶ್ರೀ ನೀಲಕಂಠ ಉಚಾರ್ಯ, ಕಾರ್ಯದರ್ಶಿಗಳು ಹಾಗೂ ಶ್ರೀ ರಾಘವೇಂದ್ರ, ಪ್ರೀ–ಎ.ಎಲ್.ಟಿ. ಭಾಗವಹಿಸಲಿದರು. ಶಿಬಿರದ ಆರನೇ ದಿನ ಜನವರಿ 07 ರಂದು ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

## ದಕ್ಷಿಣ ಕನ್ನಡ

* ಸ್ಥಳೀಯ ಸಂಸ್ಥೆ ಸುರತ್ಕಲ್ ಮತ್ತು ಬ್ರಹ್ಮ ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆ ಕಾಟಿಪಳ್ಳ ಇವರ ಸಂಯುಕ್ತ ಆಶ್ರಯದಲ್ಲಿ ಸ್ಕೌಟ್–ಗೈಡ್, ಕಬ್–ಬುಲ್‌ಬುಲ್, ರೋವರ್ಸ್–ರೇಂಜರ್ಸ್ ಸಮಾಗಮದ ಉದ್ಘಾಟನಾ ಸಮಾರಂಭವು ಜನವರಿ 11 ರಂದು ಸಂಸ್ಥೆಯ ಆವರಣದಲ್ಲಿ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಬ್ರಹ್ಮ ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಹಾಗೂ ಸುರತ್ಕಲ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪಿ. ದಯಾಕರ್ ಮಾತನಾಡಿ “ಇಂತಹ ಕಾರ್ಯಕ್ರಮಗಳು ಜವಾಬ್ದಾರಿಯ ಪ್ರಜ್ಞೆಯೊಂದಿಗೆ ವಿದ್ಯಾರ್ಥಿಗಳನ್ನು ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಹಾಯ ಮಾಡುತ್ತದೆ” ಎಂದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ದ.ಕ ಜಿಲ್ಲಾ ಸಂಸ್ಥೆಯ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ಮಾತನಾಡಿ “ಸ್ಕೌಟ್–ಗೈಡ್ ಜಾಗತಿಕ ಯುವ ಸಂಘಟನೆಗಳಾಗಿದ್ದು, ಚಟುವಟಿಕೆಗಳೊಂದಿಗೆ ಸಮುದಾಯ ಸೇವೆ ಮಾಡುವ ಉದ್ದೇಶ ಹೊಂದಿದೆ. ಇಂತಹ ಕಾರ್ಯಕ್ರಮಗಳು ಇಲ್ಲಿ ಆಯೋಜನೆಗೊಂಡಿರುವುದು ಅಭಿನಂದನಾರ್ಹ” ಎಂದರು. ಸಂಸ್ಥೆಯ ಆಡಳಿತ ಅಧಿಕಾರಿ ಡಾ. ಗಣೇಶ್ ಅಮೀನ್, ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಪೂಜಾರಿ, ವಿದ್ಯಾದಾಯಿನಿ ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲರಾದ ಡಾ. ಶಶಿಕುಮಾರ್, ನಾರಾಯಣ ಗುರು ಶಿಕ್ಷಣ ಸಂಸ್ಥೆಯ ಟ್ರಸ್ಟಿನ ಸದಸ್ಯರಾದ ಶ್ರೀ ರಾಜಾರಾಮ್ ಸಾಲಿಯಾನ್, ಶ್ರೀ ಭೋಜ ಅಂಚನ್, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷೆ ಕು. ಪುಷ್ಪಲತಾ ರಾವ್, ಪ್ರಾಂಶುಪಾಲರಾದ ಶ್ರೀ ಉಮೇಶ್ ಎಂ. ಕರ್ಕೇರ, ಆಂಗ್ಲ ಮಾಧ್ಯಮ ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಗುಣವತಿ ರಮೇಶ್, ಕನ್ನಡ ಮಾಧ್ಯಮ ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಸುರೇಖಾ ಚಿದಾನಂದ, ಶಿಬಿರದ ನಾಯಕರಾದ ಶ್ರೀ ಸುರೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸುರತ್ಕಲ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಶಶಿಪ್ರಭಾ ಪ್ರಸ್ತಾವಿಕದೊಂದಿಗೆ ಸ್ವಾಗತಿಸಿ, ಕೋಶಾಧಿಕಾರಿ ಶ್ರೀ ಉಮೇಶ್ ವಂದಿಸಿದರು. ಉಪನ್ಯಾಸಕಿ ಶ್ರೀಮತಿ ನಾಜ್ಮೀನ್ ಕಾರ್ಯಕ್ರಮ ನಿರೂಪಿಸಿದರು. ಸುಮಾರು 16 ಶಾಲೆಗಳ 600 ವಿದ್ಯಾರ್ಥಿಗಳು ಮತ್ತು 45 ದಳ ನಾಯಕರು ಈ ಸಮಾಗಮದಲ್ಲಿ ಭಾಗವಹಿಸಿದ್ದರು. ಸಂಜೆ ಶ್ರೀ ದಯಾಕರ್‌ರವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಿತು. ಶ್ರೀ ನಾರಾಯಣ ಗುರು ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಶ್ರೀ ಗಣೇಶ್ ಅಮೀನ್ ಸಂಕಮಾರ್, ಟ್ರಸ್ಟಿ ಶ್ರೀ ಭೋಜ ಅಮೀನ್, ಸಂಸ್ಥೆಯ ಉಪಾಧ್ಯಕ್ಷೆ ಕು. ಪುಷ್ಪಾವತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



* ಕೃಷ್ಣಾಪುರ ಸರಕಾರಿ ಪದವಿ ಪೂರ್ವ ಕಾಲೇಜಿನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರೋವರ್ಸ್ ಘಟಕವು ಸುರತ್ಕಲ್ ಪೋಲೀಸ್ ಠಾಣೆಗೆ ತೆರಳಿ “ತೆರೆದ ಮನೆ” ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ನೈತಿಕತೆಯೊಂದಿಗೆ ಸ್ವಯಂ ಶಿಸ್ತನ್ನು ಅಳವಡಿಸಿಕೊಂಡಾಗ ಸಮಾಜ ಸೇವಾ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯ, ಈ ನಿಟ್ಟಿನಲ್ಲಿ ರೋವರ್ಸ್‌ಗಳು ಕಾರ್ಯತತ್ಪರಾಗಬೇಕೆಂದು ಸುರತ್ಕಲ್ ಆರಕ್ಷಕ ನಿರೀಕ್ಷಕರಾದ ಶ್ರೀ ಮಹೇಶ್ ಪ್ರಸಾದ್ ಕರೆ ನೀಡಿದರು. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪೋಲೀಸರೊಂದಿಗೆ ಯುವ ಜನತೆಗೆ ಹೇಗೆ ಸಹಕರಿಸಬೇಕು, ತಮ್ಮ ಕರ್ತವ್ಯಗಳೇನು ಎಂಬುದರ ಬಗ್ಗೆ ಆರಕ್ಷಕ ಉಪನಿರೀಕ್ಷಕರಾದ ಶ್ರೀ ಶಶಿಧರ್ ಶೆಟ್ಟಿ, ಶ್ರೀ ರಘು ನಾಯಕ್, ಸಹಾಯಕ ಉಪನಿರೀಕ್ಷಕ ಶ್ರೀ ತಾರನಾಥ



ಮಾರ್ಗದರ್ಶನ ನೀಡಿದರು. ರೋವರ್ಸ್ ಲೀಡರ್ ಸಮಾಜ ಶಾಸ್ತ್ರ ಉಪನ್ಯಾಸಕ ಶ್ರೀ ರವಿಚಂದ್ರ ನೇತೃತ್ವ ವಹಿಸಿದ್ದರು. ಪ್ರಭಾರ ಪ್ರಾಂಶುಪಾಲ ಶ್ರೀ ವೀರೇಶ್ ಬೇಕಲ್ ಕಾರ್ಯಕ್ರಮ ನಿರೂಪಿಸಿದರು.

* ಸ್ಥಳೀಯ ಸಂಸ್ಥೆ ಬೆಳ್ತಂಗಡಿ ಹಾಗೂ ಶ್ರೀ ಧರ್ಮಸ್ಥಳ ಆಂಗ್ಲ ಮಾಧ್ಯಮ ಶಾಲೆ ಜಂಟಿ ಆಶ್ರಯದಲ್ಲಿ ದ್ವಿತೀಯ, ತೃತೀಯ ಸೋಪಾನ ಪರೀಕ್ಷೆ ಬರೆಯುವ ಕಬ್–ಬುಲ್‌ಬುಲ್, ಸ್ಕೌಟ್–ಗೈಡ್‌ಗಳಿಗೆ ಪರೀಕ್ಷಾ ಪೂರ್ವಸಿದ್ಧತಾ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಶಾಲಾ ಸಂಚಾಲಕರಾದ ಶ್ರೀ ಅನಂತಪದ್ಮನಾಭ ಭಟ್ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಪರಿಮಳ ಎಂ.ವಿವಹಿಸಿದ್ದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಗೀತಾ ಕೆ. ಸ್ವಾಗತಿಸಿದರು, ಫ್ಲಾಕ್ ಲೀಡರ್ ಸೌಮ್ಯ ಹಾಗೂ ಕಬ್ ಮಾಸ್ಟರ್ ಹೇಮಾವತಿ ಕಾರ್ಯಕ್ರಮ ನಿರೂಪಣೆ ಮಾಡಿದರು.ತರಬೇತಿ ಶಿಬಿರದಲ್ಲಿ ವಾಣಿ ಆಂಗ್ಲ ಮಾಧ್ಯಮ ಶಾಲೆ, ಸಂತ ತೆರೆಸಾ, ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆ, ಸೈಂಟ್ ಮೇರಿಸ್, ಲಾಯಿಲ, ಅನುಗ್ರಹ ಆಂಗ್ಲ ಮಾಧ್ಯಮ ಶಾಲೆ, ಎಸ್.ಡಿ.ಎಂ. ಸಿಬಿಎಸ್‌ಇ ಉಜಿರೆ, ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಮುಂಡತ್ತೋಡಿ ಒಟ್ಟು 576 ವಿದ್ಯಾರ್ಥಿಗಳು ಹಾಗೂ 25 ಶಿಕ್ಷಕರು ಭಾಗವಹಿಸಿದ್ದರು.



* ಸ್ಥಳೀಯ ಸಂಸ್ಥೆ ಸುಳ್ಯ, ಪೋಲಿಸ್ ಇಲಾಖೆ ಸುಳ್ಯ ಹಾಗೂ ವಿವಿಧ ಸಂಘ ಸಂಸ್ಥೆಗಳ ವತಿಯಿಂದ ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿ ರಸ್ತೆ ಸುರಕ್ಷತಾ ಜಾಗೃತಿ ಜಾಥಾ ನಡೆಯಿತು. ಪೋಲಿಸ್ ಠಾಣೆ ಸುಳ್ಯದ ಸಬ್ ಇನ್ಸ್‌ಪೆಕ್ಟರ್ ಶ್ರೀ ಸಂತೋಷ್ ಜಾಥಾಕ್ಕೆ ಚಾಲನೆ ನೀಡಿದರು. ಕ್ರೈಮ್ ವಿಭಾಗದ ಎಸ್.ಐ. ಶ್ರೀಮತಿ ಸರಸ್ವತಿ ಮತ್ತು ಪೋಲಿಸ್ ಠಾಣೆಯ ಸಿಬ್ಬಂದಿ ವರ್ಗ, ಬಿ.ಇ.ಓ. ಶ್ರೀಮತಿ ಶೀತಲ್, ಶಿಕ್ಷಣ ಸಂಯೋಜಕಿ ಶ್ರೀಮತಿ ಸಂಧ್ಯಾ ಕುಮಾರಿ, ನಗರ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಶಶಿಲಕಲಾ, ನಗರ ಪಂಚಾಯತ್ ಮಾಜಿ ಅಧ್ಯಕ್ಷರು ವಕೀಲರಾದ ಶ್ರೀ ವೆಂಕಪ್ಪಗೌಡ, ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಶ್ರೀ ಶಶಿಧರ್ ಎಂ.ಜೆ., ಗೌರವ ಅಧ್ಯಕ್ಷ ಶ್ರೀ ಬಾಪು ಸಾಹೇಬ್, ಉಪಾಧ್ಯಕ್ಷರು ಶ್ರೀ ರಾಜು ಪಂಡಿತ್, ಉಪಸ್ಥಿತರಿದ್ದರು. ರೋಟರಿ ಆಂಗ್ಲ ಮಾಧ್ಯಮ ಶಾಲೆ, ಸೈಂಟ್ ಬ್ರಿಜಿಡ್ಸ್ ಶಾಲೆ, ಸ.ಮಾ.ಹಿ.ಪ್ರಾ ಶಾಲೆ, ಸ.ಪ್ರೌ.ಶಾಲೆ ಅಜ್ಜಾವರ ಸಂಸ್ಥೆಗಳ ಕಬ್ಸ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್ ಭಾಗವಹಿಸಿದ್ದರು.



* ಜನವರಿ 17 ರಂದು ಕರ್ನಾಟಕ ರಾಜ್ಯ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ಮೆರವಣಿಗೆಯಲ್ಲಿ ಮಂಗಳೂರು ತಾಲೂಕಿನ ವಿವಧ ಶಾಲಾ ಕಾಲೇಜುಗಳ ಸುಮಾರು 358 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.




* ಮುಡಿಪು ಸ್ಥಳೀಯ ಸಂಸ್ಥೆ ಇದರ ವಾರ್ಷಿಕ ರ‍್ಯಾಲಿ ಉತ್ಸವವು ಜನವರಿ 16 ರಂದು ದ.ಕ. ಜಿ.ಪಂ.ಉ.ಹಿ.ಪ್ರಾ ಶಾಲೆ ಹೂಹಾಕುವಕಲ್ಲು ಇಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ರಮೇಶ ಶೇಣವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಡಿಪು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮೊಹಮ್ಮದ್ ಐ. ಎಲ್ಲರನ್ನೂ ಸ್ವಾಗತಿಸಿದರು. ಉತ್ಸವವನ್ನು ಶ್ರೀ ಶಾರದಾ ಗಣಪತಿ ವಿದ್ಯಾಕೇಂದ್ರ ಪುಣ್ಯಕೋಟಿ ನಗರ ಕೈರಂಗಳ ಇದರ ಸಂಚಾಲಕರಾದ ಶ್ರೀ ಟಿ.ಜಿ. ರಾಜರಾಮ ಭಟ್‌ರವರು ದೀಪ ಬೆಳಗಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಉದ್ಯಮಿ ಶ್ರೀ ರಾಧಾಕೃಷ್ಣ ರೈ ಭಾಗವಹಿಸಿದ್ದರು. ಸ್ಥಳೀಯ ಸಂಸ್ಥೆಯ ಗೌರವಾಧ್ಯಕ್ಷರು ಶ್ರೀ ಸಂತೋಷ್ ಕುಮಾರ್ ರೈ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಕೋಶಾಧಿಕಾರಿ ಶ್ರೀ ಫೆಲಿಕ್ಸ್ ಡಿಸೋಜ ಧನ್ಯವಾದ ಸಮರ್ಪಿಸಿದರು. ಅಪರಾಹ್ನ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಉಪಾಧ್ಯಕ್ಷರಾದ ಶ್ರೀ ಎಮ್. ರಾಮರಾವ್ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಪಂಚಾಯತ್ ಸದಸ್ಯರಾದ ಶ್ರೀ ಮಹಮ್ಮದ್ ಹನೀಫ್, ಶಾಲಾ ಮೇಲುಸ್ತುವಾರಿ ಸಮಿತಿ ಅಧ್ಯಕ್ಷರಾದ ಶ್ರೀ ಟಿ. ಅಬ್ದುಲ್ ರಹಿಮಾನ್, ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ವಿಜಯಲಕ್ಷ್ಮಿ, ಚೇಳೂರು ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಆಲ್ವಿನ್ ಲ್ಯಾನ್ಸಿ ರೋಡ್ರಿಗಸ್ ಕಾರ್ಯಕ್ರಮ ನಿರೂಪಿಸಿ, ಜತೆ ಕಾರ್ಯದರ್ಶಿ ಶ್ರೀಮತಿ ರಂಜನಿಯವರು ಧನ್ಯವಾದ ಸಮರ್ಪಿಸಿದರು.

* ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಮತ್ತು ಮೂಡಬಿದಿರೆ ಸ್ಥಳೀಯ ಸಂಸ್ಥೆ ಸಹಭಾಗಿತ್ವದಲ್ಲಿ ಕೃಷಿ ಸಿರಿ ವೇದಿಕೆಯಲ್ಲಿ ಜನವರಿ 23 ರಂದು ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಕ್ಯಾಂಪೋರಿ ಕಾರ್ಯಕ್ರಮದ ಸ್ಕೌಟ್ಸ್ ಮತ್ತು ಗೈಡ್ಸ್ ಮೇಳ, ರೋವರ್ಸ್–ರೇಂಜರ್ಸ್ ಸಮಾಗಮವನ್ನು ಡಾ. ಎಂ. ಮೋಹನ್ ಆಳ್ವರವರು ಉದ್ಘಾಟಿಸಿ ಮಾತನಾಡಿದರು. ಜಿಲ್ಲಾ ಕೋಶಾಧಿಕಾರಿ ಶ್ರೀ ನವೀನ್‌ಚಂದ್ರ ಅಂಬೂರಿ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಸಂಘಟನಾ ಆಯುಕ್ತರು ಶ್ರೀ ವಸಂತ್ ದೇವಾಡಿಗ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ವಂದಿಸಿದರು. ಜನವರಿ 25 ರಂದು ಕ್ಯಾಂಪೋರಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಅಧ್ಯಕ್ಷತೆಯನ್ನು ವಹಿಸಿದ್ದರು. ವೇದಿಕೆಯಲ್ಲಿ ಶಿಬಿರ ನಿರ್ದೇಶಕ ಶ್ರೀ ನಾರಾಯಣ ನಾಯಕ್, ಸ್ಕೌಟ್ ವಿಭಾಗದ ನಾಯಕರು ಶ್ರೀ ಪ್ರತೀಪ್, ಗೈಡ್ ವಿಭಾಗದ ನಾಯಕಿ ಶ್ರೀಮತಿ ತ್ರಿಶಲಾ, ರೋವರ್ ಮತ್ತು ರೇಂಜರ್ ವಿಭಾಗದ ನಾಯಕಿ ಡಾ. ಅಪರ್ಣ, ಬುಲ್‌ಬುಲ್ ವಿಭಾಗದ ನಾಯಕಿ ಸಿಸ್ಟರ್ ಲೋರಿನಾ, ಸ್ಥಳೀಯ ಸಂಸ್ಥೆಯ ಪದಾಧಿಕಾರಿ ಶ್ರೀ ಕೃಷ್ಣಮೂರ್ತಿ ಉಪಸ್ಥಿತರಿದ್ದರು.



* ಫೆಬ್ರವರಿ 07 ರಿಂದ 08ರ ವರೆಗೆ ಸ್ಥಳೀಯ ಸಂಸ್ಥೆ ಗುರುಪುರದ ಸ್ಕೌಟ್–ಗೈಡ್ ಮೇಳ ಹಾಗೂ ಕಬ್–ಬುಲ್‌ಬುಲ್ ಉತ್ಸವ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ ಇಲ್ಲಿ ನಡೆಯಿತು. ಉದ್ಘಾಟನಾ ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ

ಶ್ರೀ ಸೋಹನ್ ಅತಿಕಾರಿರವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಮಂಗಳೂರು ದಕ್ಷಿಣದ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಶ್ರೀಮತಿ ಲಿಲ್ಲಿ ಪಾಯಸ್ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಸುನಿಲ್ ಜಿ ಉಪಸ್ಥಿತರಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಜಯಲಕ್ಷ್ಮಿ ಸ್ವಾಗತಿಸಿದರು. ಸ್ಥಳೀಯ ಕೋಶಾಧಿಕಾರಿ ಶ್ರೀ ಸುನಿಲ್ ಕುಮಾರ್ ಶೆಟ್ಟಿ ವಂದಿಸಿದರು. ಕಬ್ ಮಾಸ್ಟರ್ ಶ್ರೀಮತಿ ಸಂಧ್ಯಾ ಕಾರ್ಯಕ್ರಮ ನಿರೂಪಿಸಿದರು.

* ಫೆಬ್ರವರಿ 10 ರಂದು ಸ್ಥಳೀಯ ಸಂಸ್ಥೆ ಬೆಳ್ತಂಗಡಿಯ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಕಬ್-ಬುಲ್‌ಬುಲ್‌ಗಳಿಗೆ ದ್ವಿತೀಯ ಸೋಪಾನ, ದ್ವಿತೀಯ ಚರಣ, ರಜತ ಗರಿ ಪರೀಕ್ಷೆಯು ಉಜಿರೆಯ ಎಸ್‌ಡಿಎಮ್ ಇಂದ್ರಪ್ರಸ್ಥ ಸಭಾಂಗಣದಲ್ಲಿ ನಡೆಯಿತು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ನಡೆದಂತಹ ಪರೀಕ್ಷಾ ಶಿಬಿರಕ್ಕೆ ಎಸ್‌ಡಿಎಂ ಸಿಬಿಎಸ್‌ಇ ಶಾಲೆಯ ಪ್ರಾಂಶುಪಾಲರಾದ ಡಾ. ಕುಮಾರ್ ಹೆಗ್ಡೆ ವಿದ್ಯಾರ್ಥಿಗಳಿಗೆ ಶುಭಾಶಯ ತಿಳಿಸಿದರು. ಸ್ಕೌಟ್ ವಿಭಾಗದಿಂದ ಶ್ರೀ ವಿನ್ಸೆಂಟ್ ಹಾಗೂ ಗೈಡ್ ವಿಭಾಗದಿಂದ ಶ್ರೀಮತಿ ತ್ರಿಶಲಾರವರ ನಾಯಕತ್ವದಲ್ಲಿ ನಡೆದ ಪರೀಕ್ಷೆಯಲ್ಲಿ ಸ್ಥಳೀಯ ಸಂಸ್ಥೆಯ ಸುಮಾರು 420 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿದರು.



* ಫೆಬ್ರವರಿ 13 ರಂದು ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಆಚರಣೆಯ ಉದ್ಘಾಟನೆಯನ್ನು ಚಲನಚಿತ್ರ ನಟ ಶ್ರೀ ಅರವಿಂದ್ ಬೋಳಾರ್ ಇವರು ನಗರದ ಉದ್ಯಮ ಕೇಂದ್ರದಲ್ಲಿ ಪೋಲಿಸ್ ಇಲಾಖೆ, ಸಾರಿಗೆ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನಗರದ ವಿವಿಧ ಸಂಸ್ಥೆಗಳ ಸ್ಕೌಟರ್-ಗೈಡರ್‌ಗಳು ಹಾಗೂ ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿದ್ದರು.

* ಎಸ್.ಡಿ.ಎಂ. ಮಂಗಳ ಜ್ಯೋತಿ ಸಮಗ್ರ ಶಾಲೆ ವಾಮಂಜೂರು ಇಲ್ಲಿ ರಸ್ತೆ ಸುರಕ್ಷತಾ ಸಪ್ತಾಹವನ್ನು ಆಚರಿಸಲಾಯಿತು. ಈ ಬಗ್ಗೆ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಹಾಗೂ ರಸಪ್ರಶ್ನೆಗಳನ್ನು ಆಯೋಜಿಸಲಾಯಿತು.

## ದಾವಣಗೆರೆ

* ಜನವರಿ 13 ರಂದು ದಾವಣಗೆರೆ ದಕ್ಷಿಣ ವಲಯದ ಜೈನ್ ವಿದ್ಯಾಲಯ ಶಾಲೆಯ ಬನ್ನೀಸ್ ಮಕ್ಕಳು ಸ್ವಾಮಿ ವಿವೇಕಾನಂದ ದಿನಾಚರಣೆಯನ್ನು ಆಚರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಮಂಜುಳ ಮುಖ್ಯೋಪಾಧ್ಯಾಯರು ಮತ್ತು ಗೈಡ್ ಕ್ಯಾಪ್ಟನ್ ಶ್ರೀಮತಿ ಗೀತಾ ಬನ್ನೀ ಶಿಕ್ಷಕಿ ಹಾಗೂ ಶ್ರೀ ಕೊಟ್ರಯ್ಯ ಎಂ.ಸಿ. ಸ್ಕೌಟ್ ಮಾಸ್ಟರ್ ಉಪಸ್ಥಿತರಿದ್ದರು.



* ಜನವರಿ 16 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ಆರ್.ವಿ.ಜಿ.ಕೆ. ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಷ್ಟ್ರೀಯ ರಸ್ತೆ ಸುರಕ್ಷಾ ಸಪ್ತಾಹ ದಡಿ ಸಂಚಾರಿ ನಿಯಮದ ಪಾಲನೆ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಶ್ರೀಮತಿ ಶೈಲಜಾ,



ಟ್ರಾಫಿಕ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಅವರ ಸಿಬ್ಬಂದಿ ಭಾಗವಹಿಸಿದ್ದರು. ಶ್ರೀ ಸುರೇಶ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮವನ್ನು ಸಂಘಟಿಸಿದರು.

* ಜನವರಿ 16 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಬ್ ಮತ್ತು ಬುಲ್‌ಬುಲ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸಂಕ್ರಾಂತಿ ಹಬ್ಬವನ್ನು ವಿಶೇಷವಾಗಿ ಶಾಲೆಯಲ್ಲಿ ಆಚರಿಸಿದರು. ಕಾರ್ಯಕ್ರಮದ ವಿಶೇಷ ಅತಿಥಿಗಳಾಗಿ ಶ್ರೀ ಜಯಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಭಾಗವಹಿಸಿದ್ದರು. ಶ್ರೀಮತಿ ಆಶಾ, ಗೈಡ್ ಕ್ಯಾಪ್ಟನ್ ಮತ್ತು ಪ್ರಭಾರಿ ಮುಖ್ಯೋಪಾಧ್ಯಾಯರು ಹಾಗೂ ಶ್ರೀಮತಿ ಶಿವರುದ್ರಮ್ಮ ಲೇಡಿಕಬ್ ಮಾಸ್ಟರ್ ಉಪಸ್ಥಿತರಿದ್ದರು.

* ಜನವರಿ 17 ರಂದು ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆಯಲ್ಲಿ ಕುಕ್ಕಿಂಗ್ ಪ್ರಾವಿಣ್ಯತಾ ಪದಕ ಪಡೆಯಲು ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಂದ ಕುಕ್ಕಿಂಗ್ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶ್ರೀಮತಿ ಜಸ್ಟಿನ್ ಡಿಸೋಜ ಮಕ್ಕಳಿಗೆ ಶುಭ ಹಾರೈಸಿದರು. ಶ್ರೀ ಮಹೇಶ್ ಎಂ.ಸಿ. ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಚಟುವಟಿಕೆಯನ್ನು ಸಂಘಟಿಸಿದರು.



* ಜನವರಿ 18 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಕಕ್ಕರಗೊಳ್ಳ ಗ್ರಾಮದ ಪಟೇಲ್ ವೀರಪ್ಪ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ 162ನೇ ಜಯಂತಿಯನ್ನು ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಆಚರಿಸಿದರು. ಈ ಸಂದರ್ಭದಲ್ಲಿ ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಭಾಗವಹಿಸಿ ವಿವೇಕಾನಂದ ಮಹತ್ತರವಾದ ವಿಷಯಗಳನ್ನು ಮಕ್ಕಳಿಗೆ ತಿಳಿಸಿದರು. ಶ್ರೀಮತಿ ಜಯಶೀಲ ಸಬ್ ಇನ್ಸ್‌ಪೆಕ್ಟರ್ ಹಾಗೂ ಶ್ರೀ ಬಸವರಾಜ್ ಭಾಗವಹಿಸಿ ಟ್ರಾಫಿಕ್ ಸಿಗ್ನಲ್ ರೂಲ್ಸ್‌ಗಳ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶಾಲಾ ನಿರ್ದೇಶಕರಾದ ಶ್ರೀಮತಿ ಪ್ರಣೀತ ಗಿರಿರಾಜ್, ಸಂಯೋಜಕರಾದ ಶ್ರೀ ಸೋಮಶೇಖರಪ್ಪ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ. ಮತ್ತು ಸ್ಕೌಟರ್ಸ್-ಗೈಡರ್ಸ್‌ಗಳು ಭಾಗವಹಿಸಿದ್ದರು.



* ಜನವರಿ 18 ರಂದು ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆಯಲ್ಲಿ ಕಬ್–ಬುಲ್‌ಬುಲ್ ವಿದ್ಯಾರ್ಥಿಗಳಿಗೆ ಬುಕ್ ಬೈಂಡರ್ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಉಳಿದ ಹಾಳೆಗಳಿಂದ ಹೇಗೆ ಬುಕ್ ಬೈಂಡಿಂಗ್ ಅನ್ನು ತಯಾರಿಸುವುದೆಂದು ತಿಳಿದು ನಂತರ ಪ್ರಾಯೋಗಿಕವಾಗಿ ಮಕ್ಕಳು ಬುಕ್ ಬೈಂಡಿಂಗ್ ಮಾಡಿದರು. ಶ್ರೀಮತಿ ರೇಖಾರಾಣಿ, ಜಿಲ್ಲಾ ಸಹಾಯಕ ಆಯುಕ್ತರು ಚಟುವಟಿಕೆಯಲ್ಲಿ ಭಾಗವಹಿಸಿದರು. ಸಿದ್ದಗಂಗಾ ಶಾಲೆಯ ಸ್ಕೌಟರ್ಸ್–ಗೈಡರ್ಸ್‌ಗಳು ಉಪಸ್ಥಿತರಿದ್ದರು.

* ಜನವರಿ 21 ರಂದು ಎಸ್.ವಿ.ಎಸ್. ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನೀತಿಗೆರೆ ಮತ್ತು ಸ್ವಾಮಿ ವಿವೇಕಾನಂದ ಶಾಲೆ ಕಾಕನೂರು ಈ ಶಾಲೆಗಳ ಸ್ಕೌಟ್ಸ್–ಗೈಡ್ಸ್‌ಗಳಾಗಿ ಹೊರ ಸಂಚಾರವನ್ನು ಹಮ್ಮಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಶ್ರೀ ಜಯಪ್ಪ ಎಲ್., ಕ್ಷೇತ್ರ ಶಿಕ್ಷಣಾಧಿಕಾರಿಗಳು ಚನ್ನಗಿರಿ ಇವರು ಭಾಗವಹಿಸಿದ್ದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ಎ. ಮತ್ತು ಶ್ರೀ ನವೀನ್, ಯುವ ಸಮಿತಿ ಸದಸ್ಯರು ಭಾಗವಹಿಸಿ ಹೊರ ಸಂಚಾರದ ಮಹತ್ವ ಮತ್ತು ಸಮವಸ್ತ್ರದ ಮಹತ್ವವನ್ನು ತಿಳಿಸಿದರು.

* ಜನವರಿ 25 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಟೇಲ್ ವೀರಪ್ಪ ಶಾಲೆಯಲ್ಲಿ ಪ್ರಾವಿಣ್ಯತಾ ಪದಕವನ್ನು ಪಡೆಯಲು ಫ್ಯಾನ್ಸಿ ಕುಕ್ಕಿಂಗ್ ಚಟುವಟಿಕೆಯನ್ನು ಏರ್ಪಡಿಸಲಾಗಿತ್ತು. ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ತಂದಿರುವ ಅಡುಗೆಗಳಿಗೆ ಚೆನ್ನಾಗಿ ಅಲಂಕರಿಸಿ ಅತಿಥಿಗಳಿಗೆ ನೀಡಿದರು. ಈ ಸಂದರ್ಭದಲ್ಲಿ ಶಾಲಾ ನಿರ್ದೇಶಕರಾದ ಶ್ರೀಮತಿ ಪ್ರಣೀತ ಗಿರಿರಾಜ್, ಸಂಯೋಜಕರಾದ ಶ್ರೀ ಸೋಮಶೇಖರಪ್ಪ, ಶಿಕ್ಷಕರು ಉಪಸ್ಥಿತರಿದ್ದರು.

* ಜನವರಿ 26 ರಂದು ಜಿಲ್ಲಾ ಸಂಸ್ಥೆಯಲ್ಲಿ 76ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಶ್ರೀ ಆರ್.ಡಿ. ಬದ್ರಿನಾಥ್, ಅಧ್ಯಕ್ಷರು ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಫೆಬ್ರವರಿ 08 ರಂದು ಸಂಜೆ 6.00 ಗಂಟೆಗೆ ನೇತಾಜಿ ಓಪನ್ ಸ್ಕೌಟ್ ಗ್ರೂಪ್ ಮತ್ತು ಚೇತನಾ ಗೈಡ್ ಗ್ರೂಪ್‌ನ 26 ನೇ ವಾರ್ಷಿಕೋತ್ಸವ ವೈಭವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮಂಜುನಾಥ್ ಹೆಚ್.ಬಿ., ಉಪಾಧ್ಯಕ್ಷರು, ದಾವಣಗೆರೆ ಜಿಲ್ಲಾ ಸಂಸ್ಥೆ ಇವರು ನೆರವೇರಿಸಿ ಯಶಸ್ಸು ಸಂಚಿಕೆಯನ್ನು ಬಿಡುಗಡೆ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಸಿ.ಆರ್. ಮರುಳಪ್ಪ, ಶ್ರೀ ಹಾಲಪ್ಪ, ಜಿಲ್ಲಾ ಸಹಾಯಕ ಆಯುಕ್ತರು ದಾವಣಗೆರೆ ದಕ್ಷಿಣ ವಲಯ, ಶ್ರೀ ಸೈಯದ್ ಆರೀಫ್ ಪ್ರಾಂಶುಪಾಲರು ಸೆಂಟ್‌ಜಾನ್ಸ್ ಶಾಲೆ, ಶ್ರೀ ಡಿ. ಬಸವರಾಜ್ ಎಲ್.ಟಿ. ಸ್ಕೌಟ್ ಇನ್ನು ಮುಂತಾದ ಪದಾಧಿಕಾರಿಗಳು ಭಾಗವಹಿಸಿದರು.

* ಫೆಬ್ರವರಿ 10 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಬನ್ನೀಸ್ ಮಕ್ಕಳಿಗೆ ಆಯೋಜಿಸಿ ಹಣ್ಣುಗಳ ಮಹತ್ವವನ್ನು ತಿಳಿಸಿಕೊಡಲಾಯಿತು.

* ಫೆಬ್ರವರಿ 13 ರಂದು ಹರಿಹರ ಸ್ಥಳೀಯ ಸಂಸ್ಥೆಯ ಸೆಂಟ್ ಮೇರಿಸ್ ಕಾನ್ವೆಂಟ್ ಶಾಲೆಯ ಸ್ಕೌಟ್–ಗೈಡ್‌ಗಳು ಶ್ರೀ ಶಕ್ತಿ ಹಿರಿಯ ನಾಗರೀಕರ ಆಶ್ರಮ ವಸತಿ ನಿಲಯ ಮತ್ತು ಮದರ್ ತೆರೆಸಾ ನಿರಾಶ್ರಿತರ ವಸತಿ ನಿಲಯಕ್ಕೆ ಭೇಟಿ ನೀಡಿ 300 ಸ್ನಾನದ ಸಾಬೂನುಗಳು, ಬಟ್ಟೆ ಶುಚಿಗೊಳಿಸುವ ಸಾಬೂನುಗಳು, ಪೇಸ್ಟ್, ಬ್ರಷ್, ಶ್ಯಾಂಪು ಇನ್ನು ಮುಂತಾದ ವಸ್ತುಗಳನ್ನು ವಿತರಿಸಿ ಅವರಜೊತೆ ಸಮಯ ಕಳೆದರು. ಈ ಕಾರ್ಯಕ್ರಮದ ಉಸ್ತುವಾರಿಯನ್ನು ಶ್ರೀ ಜ್ಞಾನಪ್ರಕಾಶ್, ಸ್ಕೌಟ್ ಮಾಸ್ಟರ್, ಸ್ಥಳೀಯ ಸಂಸ್ಥೆ ಸಹ ಕಾರ್ಯದರ್ಶಿಗಳು ವಹಿಸಿದ್ದರು.

* ಫೆಬ್ರವರಿ 14 ರಂದು ನಗರದ ನಿಜಲಿಂಗಪ್ಪ ಬಡಾವಣೆಯ ಅಮರ್ ಜವಾನ್ ಪಾರ್ಕ್‌ನಲ್ಲಿ ಪುಲ್ವಾಮ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಸುಬೇದಾರ್ ಮಲ್ಲನಗೌಡ ಪಾಟೀಲ್‌ರವರು ಮಕ್ಕಳಿಗೆ ಪುಲ್ವಾಮ ದಿನಾಚರಣೆ ಮತ್ತು ಸೈನಿಕರ ಬಗ್ಗೆ ಮಾಹಿತಿ ನೀಡಿದರು. ಅಮೃತ ವಿದ್ಯಾಲಯ ಮತ್ತು ಸಿದ್ದಗಂಗಾ ಶಾಲೆಯ ಕಬ್–ಬುಲ್‌ಬುಲ್ ಸ್ಕೌಟ್–ಗೈಡ್‌ಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

* ಫೆಬ್ರವರಿ 14 ರಂದು ಜೈನ್ ವಿದ್ಯಾಲಯ ಶಾಲೆಯ ಬನ್ನೀಸ್ ಟಮಟೋಲ ಮಕ್ಕಳು ವೀರಯೋಧರಿಗೆ ಜೈಕಾರ ಹಾಕುವ ಮೂಲಕ ಪುಲ್ವಾಮ ದಿನಾಚರಣೆಯನ್ನು ಆಚರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಕೊಟ್ರಯ್ಯ, ಗೈಡ್ ಕ್ಯಾಪ್ಟನ್ ಶ್ರೀಮತಿ ಮಂಜುಳ, ಜಿಲ್ಲಾ ಸಂಸ್ಥೆಯ ಶ್ರೀಮತಿ ಸುಖವಾಣಿ ಯುವ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

* ಫೆಬ್ರವರಿ 15 ರಂದು ದಾವಣಗೆರೆ ಉತ್ತರ ವಲಯದ ನ್ಯೂಡೆಲ್ಲಿ ಪಬ್ಲಿಕ್ ಶಾಲೆಯಲ್ಲಿ ಸ್ಕೌಟ್–ಗೈಡ್ ಮಕ್ಕಳಿಂದ ಹೊಲಿಯುವಿಕೆ ತರಬೇತಿಯನ್ನು ಆಯೋಜಿಸಲಾಗಿತ್ತು.

## ಧಾರವಾಡ

* ಜನವರಿ 16 ರಂದು ಹುಬ್ಬಳ್ಳಿ ಶಹರ ವತಿಯಿಂದ ರಸ್ತೆ ಸುರಕ್ಷಾ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ ರಸ್ತೆ ಸುರಕ್ಷಾ ನಿಯಮಗಳ ಬಗ್ಗೆ ಜಾಗೃತಿಯನ್ನು ಮೂಡಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ 380 ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿದರು.




* ಜನವರಿ 26 ರಂದು 76ನೇ ಗಣರಾಜೋತ್ಸವ ಕಾರ್ಯಕ್ರಮವನ್ನು ಜಿಲ್ಲಾ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ವಿ.ವಿ. ಕಟ್ಟಿಯವರು ಧ್ವಜಾರೋಹಣ ಮಾಡಿದರು. ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಎಸ್.ವಿ. ಮೊರಬ ಮತ್ತು ಜಿಲ್ಲಾ ಪದಾಧಿಕಾರಿಗಳು ಹಾಗೂ ವಾಣಿಜ್ಯ ಮಳಿಗೆಗಳ ಬಾಡಿಗೆದಾರರು ಭಾಗವಹಿಸಿದರು. ನಂತರ ಜಿಲ್ಲಾ ಕ್ರೀಡಾಂಗಣದಲ್ಲಿ ಪರೇಡ್ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.



* ಫೆಬ್ರವರಿ 03 ರಿಂದ 08ರ ವರೆಗೆ "ಸಸ್ಯ ಚೇತನ" ಜಿಲ್ಲಾ ತರಬೇತಿ ಕೇಂದ್ರ ದಡ್ಡಿಕಮಲಾಪೂರದಲ್ಲಿ ಸ್ಕೌಟ್ಸ್ ಗೈಡ್ಸ್ ಮಕ್ಕಳಿಗೆ ಜಿಲ್ಲಾ ಪುರಸ್ಕಾರ ಕಾರ್ಯಕ್ರಮವನ್ನು ಎರಡು ಹಂತಗಳಲ್ಲಿ ಹಮ್ಮಿಕೊಳ್ಳಲಾಯಿತು. ಸದರಿ ಜಿಲ್ಲಾ ಪುರಸ್ಕಾರದಲ್ಲಿ 268 ಸ್ಕೌಟ್ಸ್, 331 ಗೈಡ್ಸ್, 40 ಸ್ಕೌಟರ್ಸ್ ಗೈಡರ್ಸ್‌ಗಳು ಹಾಗೂ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದರು.



## ಹಾಸನ

* "ರಸ್ತೆ ಸಂಚಾರಿ ನಿಯಮಗಳನ್ನು ಪ್ರತಿಯೊಬ್ಬರು ಪಾಲಿಸಬೇಕು", ಎಂದು ಪಟ್ಟಣದ ಸಂಚಾರಿ ಪೊಲೀಸ್ ಠಾಣೆಯ ಸಭ್ ಇನ್ಸ್‌ಪೆಕ್ಟರ್ ಶ್ರೀಮತಿ ಅಶ್ವಿನಿ ಹೇಳಿದರು. ಅವರು ಪಟ್ಟಣದ ಕರ್ನಾಟಕ ಸಂಘದ ಸಭಾ ಭವನದಲ್ಲಿ ತಾಲೂಕು ಸ್ಥಳೀಯ ಸಂಸ್ಥೆ ಆಯೋಜಿಸಿದ್ದ, ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮದಲ್ಲಿ, ಮಾರ್ಗದರ್ಶನ ಮತ್ತು ಉಪನ್ಯಾಸವನ್ನು ನೀಡಿದರು. ಹಾಸನ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಪ್ರಾಸ್ತಾವಿಕ ನುಡಿಯಾಡಿ, "ಜಿಲ್ಲೆಯಲ್ಲಿ ಪೊಲೀಸ್ ಇಲಾಖೆ ಸಾರಿಗೆ ಇಲಾಖೆ ಸಹಯೋಗದಲ್ಲಿ, ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ" ಎಂದರು. ರಾಷ್ಟ್ರ ಪರಿಸರ ಪ್ರಶಸ್ತಿ ಪುರಸ್ಕೃತ ಶ್ರೀ ಸಿ.ಎನ್. ಅಶೋಕ್, ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಸ್. ಆದಿಶೇಶ್ ಕುಮಾರ್, ಪುರಸಭೆ ಮುಖ್ಯ ಅಧಿಕಾರಿ ಶ್ರೀ ಯತೀಶ್ ಕುಮಾರ್, ಜಿಲ್ಲಾ ಆಯುಕ್ತ ಶ್ರೀ ಸ್ಟೀಫನ್ ಪ್ರಕಾಶ್, ನಿವೃತ್ತ ಬಿಇಓ ಶ್ರೀ ಸೋಮನಾಥ್ ಮಾರ್ಗದರ್ಶನ ನೀಡಿದರು. ರಸ್ತೆ ಸುರಕ್ಷತಾ ಸಪ್ತಾಹದ ಜಾತಾ ಕಾರ್ಯಕ್ರಮಕ್ಕೆ, ನಗರ ಠಾಣೆ ವೃತ್ತ ನಿರೀಕ್ಷಕ ಶ್ರೀ ರಘುಪತಿ ಅವರು ಚಾಲನೆ ನೀಡಿದರು. ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣಾಧಿಕಾರಿ ಶ್ರೀ ಕೆ.ಟಿ. ಆನಂದ್, ಪಾಲ್ಗೊಂಡಿದ್ದರು. ಜ್ಞಾನ ಸಾಗರ ಇಂಟರ್ನ್ಯಾಷನಲ್ ಶಾಲೆ, ಶಾಲಿನಿ ಇಂಟರ್ನ್ಯಾಷನಲ್ ಶಾಲೆ, ಪೂರ್ಣಚಂದ್ರ ಪಬ್ಲಿಕ್ ಸ್ಕೂಲ್, ಗೊರವಾರನಹಳ್ಳಿ ಸರ್ಕಾರಿ ಪ್ರೌಢಶಾಲೆ, ಶ್ರವಣಬೆಳಗೊಳ ಅಂಬಿಕಾ ಶಾಲೆ, ಹಿರಿಸಾವೆ ಸರ್ಕಾರಿ ಬಾಲಿಕಾ ಪ್ರೌಢಶಾಲೆ ಸ್ಕೌಟ್-ಗೈಡ್ಸ್‌ಗಳು ಸಮವಸ್ತ್ರದೊಂದಿಗೆ ಬ್ಯಾಂಡ್ ಸೆಟ್ ವಾದನ ದೊಂದಿಗೆ, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಿದರು. ಕರ್ನಾಟಕ ಸಂಘದ ಸಭಾಭವನದಲ್ಲಿ ದ್ವಿತೀಯ ಸೋಪಾನ ಪರೀಕ್ಷೆ ನಡೆಯಿತು.



* ಸಕಲೇಶಪುರ ತಾಲ್ಲೂಕು ಸ್ಥಳೀಯ ಸಂಸ್ಥೆಯ ಸಂತ ಜೋಸೆಫ್ ಶಾಲೆಯ ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್‌ಗಳಿಗೆ ಶಾಲಾ ಮುಖ್ಯೋಪಾಧ್ಯಾಯರ ಸಮ್ಮುಖದಲ್ಲಿ ದೀಕ್ಷಾ ಸಮಾರಂಭ ಕಾರ್ಯಕ್ರಮವನ್ನು ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಪೋಷಕರು ಮತ್ತು ಸ್ಕೌಟ್ ಮಾಸ್ಟರ್ ಶ್ರೀ ವಿಜಯಕುಮಾರ್ ಪಿಂಟೋ, ಶ್ರೀ ಕೀರ್ತಿಕುಮಾರ್ ಹಾಗೂ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

* ಹೊಳೆನರಸಿಪುರ ಪಟ್ಟಣದ ಮಹಾತ್ಮಾ ಗಾಂಧಿಯವರ ಉದ್ಯಾನವನದ ಹಿಂಭಾಗ ಇರುವ ಕರ್ನಾಟಕ ಪಬ್ಲಿಕ್ ಶಾಲೆ (ಬಾಲಕಿಯರ ಪ್ರೌಢಶಾಲಾ ವಿಭಾಗ)ಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕವನ್ನು ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ. ಪೊಲೀಸ್ ಇಲಾಖೆಯ ಶ್ರೀಮತಿ ಮಂಗಳ ಅವರು ವಿದ್ಯಾರ್ಥಿಗಳಿಗೆ ಸಂಚಾರಿ ನಿಯಮಗಳ ಬಗ್ಗೆ ಮತ್ತು ಪೋಕ್ಸೋ ಕಾನೂನಿನ ಬಗ್ಗೆ ಮಾಹಿತಿ ನೀಡಿದರು. ರೇಂಜರ್ ಶ್ರೀಮತಿ ಪಲ್ಲವಿ ಅವರು ಮಕ್ಕಳಿಗೆ ಜೀವನದಲ್ಲಿ ಸಾಧನೆಗಳನ್ನು ಮಾಡಲು ಪ್ರೇರಣಾದಾಯಕ ಭಾಷಣ ಮಾಡಿದರು. ತಾಲ್ಲೂಕು ಕಾರ್ಯದರ್ಶಿ ಶ್ರೀ ಆರ್. ಕುಮುದ ಅವರು ಸಂಸ್ಥೆಯು ಬೆಳೆದು ಬಂದ ಹಾದಿಯ ಬಗ್ಗೆ ವಿವರಣೆ ನೀಡಿದರು. ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕಿ ಶ್ರೀಮತಿ ಸವಿತ, ಗೈಡ್ಸ್ ಶಿಕ್ಷಕಿ ಶ್ರೀಮತಿ ಸುಧಾಮಣಿ, ಮತ್ತು ಶಾಲೆಯ ಶಿಕ್ಷಕ ವೃಂದದವರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

* ಸಂತ ಫಿಲೋಮಿನಾ ಶಾಲೆಯಲ್ಲಿ ಬುಲ್‌ಬುಲ್‌ಗಳಿಗೆ ಪರಿಸರ ಪರಿವೀಕ್ಷಣೆ ಮಾಡಿಸಲಾಯಿತು. ವಿದ್ಯಾರ್ಥಿನಿಯರು ಹಲವು ಬಗೆಯ ಗಿಡಮರಗಳನ್ನು ವೀಕ್ಷಿಸುವ ಮೂಲಕ ಅವುಗಳ ಬಗ್ಗೆ ತಿಳಿದುಕೊಂಡರು. ಪರಿಸರ ರಕ್ಷಣೆಯ ಮಹತ್ವವನ್ನು ಹಾಗೂ ಪ್ಲಾಸ್ಟಿಕ್ ನಿಷೇಧದ ಜಾಗೃತಿಯನ್ನು ಅರಿತರು.

* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪೇಟೆ ಬಾಣಾವಾರ ಶಾಲೆ ಅರಸೀಕೆರೆ ತಾಲ್ಲೂಕಿನಲ್ಲಿ ನೂತನವಾಗಿ ಕಿತ್ತೂರು ರಾಣಿ ಚೆನ್ನಮ್ಮ ಗೈಡ್ ಕಂಪನಿ ಘಟಕದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಲಾಯಿತು ಇದೆ ಸಂದರ್ಭದಲ್ಲಿ ರಾಷ್ಟ್ರೀಯ ಯುವ ದಿನವನ್ನು ಆಚರಣೆ ಮಾಡಲಾಯಿತು ಈ ಸಂಧರ್ಭದಲ್ಲಿ ಸ್ಕೌಟ್ ಮಾಸ್ಟರ್



ಶ್ರೀ ಸತೀಶ್ ಗೈಡ್ ಶಿಕ್ಷಕಿ ಶ್ರೀಮತಿ ರಾಧಮಣಿ ಶಾಲಾ ಮುಖ್ಯೋಪಾಧ್ಯಾಯರು ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕ ಹಾಗೂ ಶಾಲಾ ಸಿಬ್ಬಂಧಿರವರುಗಳು ಉಪಸ್ಥಿತರಿದ್ದರು.

* ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹರಿಹರಪುರ ಬಾಣಾವಾರ ಅರಸೀಕೆರೆ ತಾಲ್ಲೂಕಿನಲ್ಲಿ ಪ್ರಕೃತಿ ಗೈಡ್ ಕಂಪನಿ ಘಟಕವನ್ನು ಉದ್ಘಾಟನೆ ಮಾಡಲಾಯಿತು ಶಾಲಾ ಮುಖ್ಯೋಪಾದ್ಯಾಯರು ಗೈಡ್ ಶಿಕ್ಷಕಿ ಶ್ರೀಮತಿ ಶ್ವೇತ, ಶಾಲಾ ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು ಸ್ಕೌಟ್ ಮಾಸ್ಟರ್ ಶ್ರೀ ಸತೀಶ್ ಹಾಗೂ ಎ.ಎಸ್.ಓ.ಸಿ. ಶ್ರೀಮತಿ ಪ್ರಿಯಾಂಕ ಉಪಸ್ಥಿತರಿದ್ದರು.



* 76ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಸ್ಥೆಯ ವತಿಯಿಂದ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿರವರ ಸೇವಾ ಮನೋಭಾವನ್ನು ಪರಿಗಣಿಸಿ ಜಿಲ್ಲಾಡಳಿತವತಿಯಿಂದ ಗೌರವ ಸಮರ್ಪಣೆ ಮಾಡಿರುತ್ತಾರೆ. ಈ ಸಂಧರ್ಭದಲ್ಲಿ ಹಾಸನ ಜಿಲ್ಲಾ ಉಸ್ತುವರಿ ಸಚಿವರಾದ ಮಾನ್ಯ ಶ್ರೀ ರಾಜಣ್ಣನವರು, ಜಿಲ್ಲಾಧಿಕಾರಿಗಳಾದ ಶ್ರೀಮತಿ ಸತ್ಯಭಾಮ, ಜಿಲ್ಲಾ ಆಯುಕ್ತರಾದ ಶ್ರೀ ಸ್ಟೀಫನ್ ಪ್ರಕಾಶ್, ಜಿಲ್ಲಾ ಖಜಾಂಚಿ ಶ್ರೀ ಆರ್.ಎಸ್. ರಮೇಶ್ ಉಪಸ್ಥಿತರಿದ್ದರು. ಇದೇ ಸಂಧರ್ಬಧಲ್ಲಿ ಬೇಲೂರು ತಾಲ್ಲೂಕಿನ ಎಡಿಸಿಗಳಾದ ಮೋಹನ್ ರಾಜ್‌ರವರಿಗೆ ಹೆಚ್ಚು ಬಾರಿ ರಕ್ತದಾನ ಮಾಡಿರುವುದಕ್ಕೆ ಗೌರವ ಸಮರ್ಪಣೆ ಮಾಡಲಾಯಿತು.




* 76ನೇ ಗಣರಾಜ್ಯೋತ್ಸವ ಅಂಗವಾಗಿ ಬೇಲೂರು ತಾಲ್ಲೂಕು ಆಡಳಿತ ವತಿಯಿಂದ ಶ್ರೀಮತಿ ಮಮತ ಬಿ.ಎಲ್.ರವರು ಸ್ಕೌಟ್-ಗೈಡ್ ಸಂಸ್ಥೆಗೆ ಸಲ್ಲಿಸುತ್ತಿರುವ ಸೇವೆಯನ್ನು ಗಮನಿಸಿ ತಾಲ್ಲೂಕು ಆಡಳಿತವತಿಯಿಂದ ಆಯ್ಕೆಮಾಡಿ ಗೌರವ ಸಮಾರ್ಪಣೆ ಮಾಡಿರುತ್ತಾರೆ ತಾಲ್ಲೂಕು ಆಡಳಿತ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಹೊಳೆನರಸಿಪುರ ತಾಲ್ಲೂಕು ಆಡಳಿತದ ವತಿಯಿಂದ ಪ್ರೋ॥ ಜಿ.ಡಿ. ನಾರಾಯಣ್, ಕೇಂದ್ರ ಸ್ಥಾನಿಕ ಆಯುಕ್ತರು ಇವರನ್ನು ಗೈಡ್ ಶಿಕ್ಷಕಿ ಶ್ರೀಮತಿ ಮಮತರವರನ್ನು ಗೌರವ ಸಮರ್ಪಣೆ ಮಾಡಲಾಗಿದೆ. ಹೊಳೆನರಸೀಪುರ ತಾಲ್ಲೂಕು ಶಾಸಕರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಾರವಾರ (ಉ.ಕ.)

* ಭಟ್ಕಳ ಸ್ಥಳೀಯ ಸಂಸ್ಥೆ ವತಿಯಿಂದ ಜನವರಿ 30 ರಂದು ಮುರ್ಡೇಶ್ವರದ ಆರ್.ಎನ್.ಎಸ್. ಶಾಲೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹದ ಮಹತ್ವವನ್ನು ಪೋಲಿಸರು ಮಕ್ಕಳಿಗೆ ವಿವರಿಸಿ ಕೈ ಸನ್ನೆಯ ಮೂಲಕ ವಾಹನಗಳ ನಿಲುಗಡೆ ಹಾಗೂ ಕಳಿಸುವ ರೀತಿಯನ್ನು ವಿವರಿಸಿ ಪ್ರಾತ್ಯಕ್ಷಿಕೆಯನ್ನು ತೋರಿಸಿಕೊಟ್ಟರು. ಆರ್.ಎನ್.ಎಸ್. ಮುಖ್ಯೋಪಾಧ್ಯಾಯರು ಹಸಿರು ನಿಶಾನೆ ತೋರಿಸುವುದರ ಮೂಲಕ ಪಥಸಂಚಲನಕ್ಕೆ ಚಾಲನೆ ನೀಡಿದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ವೆಂಕಟೇಶ ಗುಬ್ಬಿಹಿತ್ತಲ್, ಸ್ಕೌಟರ್ ಶ್ರೀ ದೇವಿದಾಸ ನಾಯ್ಕ, ಗೈಡ್ ಕ್ಯಾಪ್ಟನ್ ಶ್ರೀಮತಿ ವೀಣಾ ಪೋಲಿಸ ಶಿಬ್ಬಂದಿಗಳು, ಊರಿನ ಪ್ರಮುಖರು ಉಪಸ್ಥಿತರಿದ್ದರು.



* ಫೆಬ್ರವರಿ 15 ರಂದು ಕುಮಟಾ ಸ್ಥಳೀಯ ಸಂಸ್ಥೆಯ ದ್ವಿತೀಯ ಸೋಪಾನ ಹಾಗೂ ದ್ವಿತೀಯ ಚರಣ್ ಪರೀಕ್ಷಾ ಶಿಬಿರವು ಡಯಟ್ ಸಭಾಂಗಣದಲ್ಲಿ ನಡೆಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಈ ಕಾರ್ಯಕ್ರಮಕ್ಕೆ ಆಗಮಿಸಿ ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆಯನ್ನು ನೆರವೇರಿಸಿ, ಮಕ್ಕಳೊಂದಿಗೆ ಸಂವಾದ ನಡೆಸಿದರು. ಅಧ್ಯಕ್ಷತೆ ವಹಿಸಿದ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಸುಧಾ ಗೌಡ್ ರವರು ಮಾತನಾಡಿ ರಾಜ್ಯ ಮುಖ್ಯ ಆಯುಕ್ತರು ನಮ್ಮ ಸ್ಥಳೀಯ ಸಂಸ್ಥೆಗೆ ಬಂದಿರುವುದು ನಮ್ಮ ಹಾಗೂ ಮಕ್ಕಳ ಭಾಗ್ಯವೆ ಸರಿ ಎಂದು ಎಲ್ಲರಿಗೂ ಶುಭಕೋರಿದರು. ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಪ್ರಭಾಕರ ಭಟ್, ಜಿಲ್ಲಾ ನೊಡಲ್ ಅಧಿಕಾರಿ ಶ್ರೀ ಪರಮೇಶ್ವರ ದೇಶಭಂಡಾರಿ, ಡಯಟ್ ಉಪನ್ಯಾಸಕರಾದ ಶ್ರೀ ಭಟ್, ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶೋಭಾ ಕುಲಕರ್ಣಿ, ಸ್ಕೌಟರ್ಸ್ ಗೈಡರ್ಸ್‌ಗಳು ಹಾಗೂ 77 ಸ್ಕೌಟ್ಸ್-ಗೈಡ್ಸ್, ಕಬ್‌ಗಳು ಉಪಸ್ಥಿತರಿದ್ದರು.



* ಜನವರಿ 26 ರಂದು ಭಟ್ಕಳ ತಾಲ್ಲೂಕಿನ ಗ್ರೌಂಡನಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಟ್ಕಳ ಅಲಿ ಪಬ್ಲಿಕ್ ಶಾಲೆಯ ಸ್ಕೌಟ್ಸ್‌ಗಳು ತಾಲ್ಲೂಕು ಹಂತದಲ್ಲಿ ನಡೆದ ಪಥಸಂಚಲನದಲ್ಲಿ ಪ್ರಥಮ ಸ್ಥಾನವನ್ನು ಹಾಗೂ ರೋವರ್ ವಿಭಾಗದಲ್ಲಿ ತೃತೀಯ ಸ್ಥಾನವನ್ನು ತಹಶೀಲ್ದಾರ್ ಶ್ರೀ ಬಿ.ಜಿ. ಕುಲಕರ್ಣಿ ರವರಿಂದ ಪಡೆದುಕೊಂಡು ಶಾಲೆಗೆ, ತಾಲ್ಲೂಕಿಗೆ ಹಾಗೂ ಜಿಲ್ಲೆಗೆ ಕೀರ್ತಿಯನ್ನು ತಂದಿರುತ್ತಾರೆ.



## ಕೊಡಗು

* ಜನವರಿ 26 ರಂದು ಜಿಲ್ಲಾಡಳಿತ ವತಿಯಿಂದ ನಡೆದ ಗಣರಾಜ್ಯೋತ್ಸವದ ಪಥ ಸಂಚಲನದಲ್ಲಿ ಪ್ರಥಮ ಬಾರಿಗೆ 13 ಸ್ಕೌಟ್ಸ್-ಗೈಡ್ಸ್ ತುಕಡಿಗಳು ಭಾಗವಹಿಸಿದ್ದು ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ ಬೋಸ್‌ರಾಜುರವರು, ಮಡಿಕೇರಿ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಡಾ. ಮಂತರ್ ಗೌಡ, ಜಿಲ್ಲಾಧಿಕಾರಿಗಳು, ಅಪರಜಿಲ್ಲಾಧಿಕಾರಿಗಳು, ಪೋಲಿಸ್ ವರಿಷ್ಠಾಧಿಕಾರಿಗಳು, ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಅಲ್ಲದೆ ಅನೇಕ ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರಶಂಸಿಸಿದರು.





## ಕೋಲಾರ

* ಜನವರಿ 02 ರಂದು ಕೋಲಾರ ನಗರದ ಮಹಿಳಾ ಸಮಾಜ ಶಾಲಾ ಕೋಲಾರ ನಗರದ ಮಹಿಳಾ ಸಮಾಜ ಶಾಲೆಯಲ್ಲಿ ಸ್ಕೌಟ್ಸ್-ಗೈಡ್ಸ್ ಸಂಸ್ಥೆ, ರೋಟರಿ ಕೋಲಾರ ನಂದಿನಿ, ಮಹಿಳಾ ಸಮಾಜ ಕಾಲೇಜು, ಲೈಫ್ ಸೇವರ್ಸ್ ಆಸೋಶಿಯೇಶನ್ ಹಾಗೂ ಶ್ರೀ ಆರ್.ಎಲ್. ಜಾಲಪ್ಪ ರಕ್ತನಿಧಿ ಕೇಂದ್ರದ ವತಿಯಿಂದ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಕೆ.ವಿ. ಶಂಕರಪ್ಪರವರ 80ನೇ ವರ್ಷದ ಜನ್ಮ ದಿನದ ಅಂಗವಾಗಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜನೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾ ಗೈಡ್ಸ್ ಆಯುಕ್ತರು ಹಾಗೂ ಮಹಿಳಾ ಸಮಾಜ ಶಿಕ್ಷಣ ಸಂಸ್ಥೆಯ ನಿರ್ವಹಣಾಧಿಕಾರಿಗಳಾದ ಶ್ರೀಮತಿ ನವೀನಾ ರವರು ಮಾತನಾಡಿ "ಪರರ ಸೇವೆ ಮಾಡಿದವರು ಮಾತ್ರ ಈ ಭೂಮಿಯ ಮೇಲೆ ಶಾಶ್ವತವಾಗಿ ಉಳಿಯಲು ಸಾಧ್ಯ, ಎಲ್ಲರೂ ಸೇವಾ ಮನೋಭಾವವನ್ನು ಬೆಳಸಿಕೊಂಡು ಸಮಾಜದ ಅಗತ್ಯತೆಗೆ ತಕ್ಕಂತೆ ಕೈಲಾದಷ್ಟು ನೆರವಾಗುವ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಲೆಯ ಕಾರ್ಯದರ್ಶಿ ಶ್ರೀಮತಿ ನಂದನಾ, ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ ಪದಾಧಿಕಾರಿಗಳು ರಕ್ತನಿಧಿ ಕೇಂದ್ರದ ಸಂಚಾಲಕರಾದ ಶ್ರೀ ಚಲಪತಿ ಮುಂತಾದವರು ಉಪಸ್ಥಿತರಿದ್ದರು.




* ಜನವರಿ 04 ರಂದು ಕೋಲಾರ ನಗರದ ಹಸಿರೀಕರಣ ಮಾಡುವ ಉದ್ದೇಶದಿಂದ "ಗಿಡ ಬೆಳಸಿ ಕೋಲಾರ ಉಳಿಸಿ" ಅಭಿಯಾನಕ್ಕೆ ಕೋಲಾರ ನಗರಸಭೆಯ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮಿದೇವಮ್ಮ ರಮೇಶ್‌ರವರು ಚಾಲನೆ ನೀಡಿದರು. ಜಿಲ್ಲಾ ಅರಣ್ಯಾಧಿಕಾರಿಗಳಾದ

ಶ್ರೀ ಏಡುಕೊಂಡಲ ರವರು ಮಾತನಾಡಿ "ವಿದ್ಯಾರ್ಥಿಗಳು ಮತ್ತು ನಗರ ವಾಸಿಗಳು ತಮ್ಮ ಹುಟ್ಟು ದಿನದ ನೆನಪಿಗಾಗಿ ಪ್ರತಿ ವರ್ಷ ಗಿಡಗಳನ್ನು ನೆಟ್ಟು ಪೋಷಿಸುವ ಹವ್ಯಾಸವನ್ನು ರೂಡಿಸಿಕೊಂಡು ಪರಿಸರ ಅಭೀವೃದ್ದಿಗೆ ಸಹಕರಿಸಬೇಕು" ಎಂದರು. ವಂಶೋಧಯ ಆಸ್ಪತ್ರೆಯ ವೈಧ್ಯರಾದ ಡಾ॥ ಅರವಿಂದ್‌ರವರು ಮಾತನಾಡಿ "ಭೂಮಿ ತಾಯಿಯ ಋಣವನ್ನು ತೀರಿಸಲು ಅತ್ಯಂತ ಉತ್ತಮವಾದ ಮಾರ್ಗ ಗಿಡಗಳನ್ನು ನೆಟ್ಟು ಪೋಷಿಸುವುದು" ಎಂದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ "ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಮತ್ತು ರೋಟರಿ ಸಂಸ್ಥೆಗಳ ಮೂಲ ಆಶಯ ತಮ್ಮ ಸಮೀಪದ ಸಾರ್ವಜನಿಕರಿಗೆ ಬೇಕಾದ ಮೂಲಭೂತ ಅಗತ್ಯಗಳು ಸಿಗುವಲ್ಲಿ ತಮ್ಮ ಕೈಲಾದಷ್ಟು ಮಟ್ಟಿಗೆ ಸೇವೆ ಸಲ್ಲಿಸುವುದೇ ಆಗಿದ್ದು, ಕಳೆದ ಐದು ವರ್ಷಗಳ ಹಿಂದೆ ಇದ್ದ ಮರಗಳನ್ನು ಅಭಿವೃದ್ಧಿಯ ದೃಷ್ಟಿಯಿಂದ ಕಡಿಯಲಾಗಿತ್ತು, ಈಗ ನಾವು ನೀವು ಎಲ್ಲರೂ ಸೇರಿ ಗಿಡಗಳನ್ನು ಮರಗಳಾಗಿ ಬೆಳೆಸುವಲ್ಲಿ ಪ್ರಯತ್ನಿಸೋಣ" ಎಂದು ತಿಳಿಸಿದರು. ನೀರಾವರಿ ಹೋರಾಟಗಾರ ಶ್ರೀ ರಾಜೇಶ್, ಸ್ಕೌಟ್ ಬಾಬು, ವಂಶೋಧಯ ಆಸ್ಪತ್ರೆಯ ಈ ಯೋಜನೆಯ ಸಂಚಾಲಕರಾದ ಶ್ರೀಮತಿ ಪವಿತ್ರರವರು ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಖಜಾಂಚಿ ಶ್ರೀ ಉಮೇಶ್, ಅರಣ್ಯ ಇಲಾಖೆಯ ಶ್ರೀ ಮನೋಹರ್ ಚರಣ್, ನಗರ ಸಭೆಯ ಶ್ರೀ ನವಾಜ್ ಅಹ್ಮದ್, ಸ್ವಯಂ ಸೇವಕರಾದ ಶ್ರೀ ತೇಜಾನಂದ, ಶ್ರೀ ವಸಂತ್‌ಗೌಡ, ಶ್ರೀ ಸುರೇಶ್, ಶ್ರೀ ರಘು ಮುಂತಾದವರು ಉಪಸ್ಥಿತರಿದ್ದರು.

* ಜನವರಿ 9 ರಂದು ಸ್ಕೌಟ್ ಭವನದಲ್ಲಿ ಉದ್ಯೋಗ ಮೇಳ ಆಯೋಜಿಸಿ, "ಯುವಜನತೆ ಸಂಘ ಸಂಸ್ಥೆಗಳ ನೆರವನ್ನು ಪಡೆದು ಉತ್ತಮ ಜೀವನವನ್ನು ಕಟ್ಟಿಕೊಳ್ಳಬೇಕು, ಕೋಲಾರ ಜಿಲ್ಲೆ ಕೈಗಾರಿಕಾ ಜಿಲ್ಲೆಯಾಗಿ ಪರಿವರ್ತನೆಯಾಗುತ್ತಿದ್ದು, ನಿರುಧ್ಯೋಗಿ ಅಭ್ಯರ್ಥಿಗಳು ಇಂತಹ ಕೆಲಸವೇ ಬೇಕು ಎನ್ನದೇ ತಮಗೆ ಸಿಕ್ಕ ಕೆಲಸವನ್ನು ಶ್ರಧ್ಧಾ ಭಕ್ತಿಯಿಂದ ಮಾಡಬೇಕು" ಎಂದು ಸ್ಕೌಟ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್‌ರವರು ತಿಳಿಸಿದರು. ಈ ಸಂದರ್ಭದಲ್ಲಿ ರೊಟರಿ ಪಧಾಧಿಕಾರಿಗಳಾದ ಶ್ರೀ ಸುಧಾಕರ್, ಶ್ರೀ ರವೀಂದ್ರ, ಸ್ಕೌಟ್ ಬಾಬು ಮುಂತಾದವರು ಉಪಸ್ಥಿತರಿದ್ದರು.



* ಜನವರಿ 10 ರಂದು ಪದಕ ತರಬೇತಿ ಶಿಬಿರವನ್ನು ಬಂಗಾರಪೇಟೆ ತಾಲ್ಲೂಕಿನ ಜೈನ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಮತ್ತು ಶ್ರೀನಿವಾಸಪುರ ಜಿ.ಜಿ.ವೇಣು ಶಾಲೆಯಲ್ಲಿ ನಡೆಸಲಾಯಿತು. ಈ ಶಿಬಿರದ ಪರೀಕ್ಷಕರಾಗಿ ಪ್ರಾಂಶುಪಾಲರಾದ ಶ್ರೀಮತಿ ಅನ್ನಪೂರ್ಣ, ತರಬೇತಿ ನಾಯಕರಾದ ಶ್ರೀಯುತ ನಂಜುಂಡಪ್ಪ, ಜಂಟಿ ಕಾರ್ಯದರ್ಶಿ ಶ್ರೀಮತಿ ಉಮಾದೇವಿ, ಸಂಘಟಕರಾದ ಸ್ಕೌಟ್ ಬಾಬುರವರು ಭಾಗವಹಿಸಿದ್ದರು. ಶಿಬಿರವು ಸ್ಕೌಟ್ ಮಾಸ್ಟರ್ ಶ್ರೀ ಹರೀಶ್, ಫ್ಲಾಕ್ ಲೀಡರ್ ಶ್ರೀಮತಿ ಹೇಮಾವತಿರವರ ಮಾರ್ಗದರ್ಶನದಲ್ಲಿ ಜರುಗಿತು.




* ಜನವರಿ 11 ರಂದು ರಾಷ್ಟ್ರೀಯ ಯುವ ದಿನಾಚರಣೆಯನ್ನು ಕೋಲಾರ ನಗರದ ಸರ್ಕಾರಿ ಮಹಿಳಾ  ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಯುವಶಕ್ತಿ, ರೋಟರಿ ಕೋಲಾರ ನಂದಿನಿ, ಕನ್ನಡ ಸೇನೆ ರವರ ಸಂಯುಕ್ತ ಆಶ್ರಯದಲ್ಲಿ ಆಯೋಜನೆ ಮಾಡಿ ವಿದ್ಯಾರ್ಥಿಗಳಿಗೆ ವಿವಿಧ ಗ್ರಾಮೀಣ ಆಟಗಳನ್ನು ಆಯೋಜಿಸಿ ಬಹುಮಾನ ನೀಡಲಾಯಿತು. ಈ ಸಂದರ್ಭದಲ್ಲಿ ಶಾಲಾ ಪ್ರಾಂಶುಪಾಲರಾದ ಶ್ರೀಯುತ ಬಾಲಕೃಷ್ಣ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಆಯುಕ್ತರಾದ ಶ್ರೀ ಸುರೇಶ್, ಜಿಲ್ಲಾ ಯುವಶಕ್ತಿ ಅಧ್ಯಕ್ಷ ಶ್ರೀ ಪುಟ್ಟರಾಜು ಕಾಲೇಜು ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



* ಜನವರಿ 13 ರಂದು ರವಿ ಇಂಟರ್ ನ್ಯಾಷನಲ್ ಶಾಲೆ, ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ ನಗರದ ರವಿ ಶಿಕ್ಷಣ ಸಂಸ್ಥೆಯಲ್ಲಿ ಸಂಕ್ರಾಂತಿ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು, ಈ ಸಂದರ್ಭದಲ್ಲಿ ಶಾಲೆಯ ಕಾರ್ಯದರ್ಶಿ ಮೂರಂಡಹಳ್ಳಿ ಶ್ರೀ ಇ. ಗೋಪಾಲಪ್ಪ, ಪಾಕರಹಳ್ಳಿ ಶ್ರೀ ವೆಂಕಟೇಶಪ್ಪ, ಸಂಸ್ಥೆಯ ಆಡಳಿತಾಧಿಕಾರಿ ಶ್ರೀ ನರೇಶ್ ಬಾಬು, ಶ್ರೀಮತಿ ಸುಷ್ಮಾ, ಬಿ.ಎಡ್. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಂಜುನಾಥ ರೆಡ್ಡಿ, ಮುಖ್ಯ ಶಿಕ್ಷಕಿ ಶ್ರೀಮತಿ ಭವಾನಿ, ಸ್ಕೌಟ್ಸ್–ಗೈಡ್ಸ್ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.




* ಜನವರಿ 24 ರಂದು ಜಿಲ್ಲಾ ಔಷದ ವ್ಯಾಪಾರಿಗಳ ಸಂಘ, ಸ್ಕೌಟ್ಸ್–ಗೈಡ್ಸ್ ಸಂಸ್ಥೆ, ರೋಟರಿ ಕೋಲಾರ ನಂದಿನಿ ವತಿಯಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಜಿಲ್ಲಾ ಸಂಸ್ಥೆಯ ಖಚಾಂಚಿಗಳಾದ ಶ್ರೀಯುತ ಉಮೇಶ್‌ರವರ ನಾಯಕತ್ವದಲ್ಲಿ  ಆಯೋಜನೆ ಮಾಡಲಾಗಿತ್ತು. ಈ ಶಿಬಿರದಲ್ಲಿ 50 ಯುನಿಟ್ ರಕ್ತವನ್ನು ಸಂಗ್ರಹಿಸಲಾಯಿತು. ಈ ಶಿಬಿರವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಉದ್ಘಾಟಿಸಿದರು.

* ಜನವರಿ 26 ರಂದು ಗಣರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ನಗರದ ಸ್ಕೌಟ್ ಭವನದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ಧ್ವಜಾರೋಹಣವನ್ನು ನೆರವೇರಿಸಿದರು. ಜಿಲ್ಲಾ ಅಧ್ಯಕ್ಷರಾದ ಶ್ರೀ ಬಿಸಪ್ಪಗೌಡ, ಸ್ಕೌಟ್ಸ್ ಆಯುಕ್ತರಾದ ಶ್ರೀ ಕೆ.ಆರ್. ಸುರೇಶ್, ಜಿಲ್ಲಾ ಖಚಾಂಚಿ ಶ್ರೀ ಉಮೇಶ್, ಕೋಲಾರ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಕಾಡಹಳ್ಳಿ ಶ್ರೀ ಶಶಿಕುಮಾರ್ ಮುಂತಾದವರು ಉಪಸ್ಥಿತರಿದ್ದರು.



* ಫೆಬ್ರವರಿ 9 ರಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ರೋಟರಿ ಕೋಲಾರ ನಂದಿನಿ, ವಿಜಯವಾಣಿ ದಿನಪತ್ರಿಕೆ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಸಂಕ್ರಾತಿ ಸಂಭ್ರಮ ಕಾರ್ಯಕ್ರಮವನ್ನು ಕೋಲಾರ ನಗರದ ಕೀಲುಕೋಟೆಯ ಶ್ರೀಬೀರೇಶ್ವರ ದೇವಾಲಯದ ಆವರಣದಲ್ಲಿ ಆಚರಣೆ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪರವರು ರಾಗಿ ರಾಶಿಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಮಹಿಳೆಯರಿಗೆ ಮತ್ತು ಮಕ್ಕಳಿಗೆ ಗ್ರಾಮೀಣ ಕ್ರೀಡೆಗಳನ್ನು ಆಯೋಜಿಸಿ ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಕೆ.ವಿ. ಶಂಕರಪ್ಪರವರು ಮಾತನಾಡಿ "ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಇಂದಿನ ಯುವಪೀಳಿಗೆಗೆ ಪರಿಚಯಿಸಲು ಇಂತಹ ಕಾರ್ಯಕ್ರಮಗಳನ್ನು ಸಹಕಾರಿಯಾಗಿದೆ" ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿಜಯವಾಣಿ ಪತ್ರಿಕೆಯ ಜಿಲ್ಲಾ ವರದಿಗಾರರಾದ ಶ್ರೀಯುತ ಸುದರ್ಶನ್, ಧರ್ಮಸ್ಥಳ ಸಂಘದ ಅಧಿಕಾರಿಗಳಾದ ಶ್ರೀಮತಿ ಸೌಮ್ಯ, ಶ್ರೀಮತಿ ವಿಜಯ್, ಶ್ರೀಮತಿ ವೀಣಾ ಮುಂತಾದವರು ಉಪಸ್ಥಿತರಿದ್ದರು.



## ಮಧುಗಿರಿ

* ನವಂಬರ್ 27 ರಂದು ಮಧುಗಿರಿ ಜಿಲ್ಲಾ ಸಂಸ್ಥೆಯ ವಾರ್ಷಿಕ ಮಹಾಸಭೆಯು ಜಿಲ್ಲಾ ಉಪ ನಿರ್ದೇಶಕರ ಕಾರ್ಯಾಲಯ ಕಾನ್ಫರೆನ್ಸ್ ಹಾಲ್‌ನಲ್ಲಿ ಮಾನ್ಯ ಶ್ರೀ ಗೋಟೂರು ಶಿವಪ್ಪ, ಕೆ.ಎ.ಎಸ್. ಉಪ ವಿಭಾಗಾಧಿಕಾರಿ ಹಾಗೂ ದಂಡಾಧಿಕಾರಿಗಳು ಮತ್ತು ಜಿಲ್ಲಾ ಅಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮಧುಗಿರಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ ಗಿರಿಜಾ ಬಿ.ಹೆಚ್. ಕೆ.ಇ.ಎಸ್. ಉಪ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಇವರು ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಎಂ.ವಿ. ರಾಜಣ್ಣ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾಶಿಕ್ಷಣಾಧಿಕಾರಿಗಳು ಮಧುಗಿರಿ.ಮಾನ್ಯ ಶೆಟ್ಟಿಮನಿ ರವೀಂದ್ರ ಮಲ್ಲಪ್ಪ, ಜಿಲ್ಲಾ ದೈಹಿಕ ಶಿಕ್ಷಣ ಪರೀಕ್ಷಕರು, ಮದುಗಿರಿ. ಶ್ರೀ ಓಬಳರಾಜ, ಅಧ್ಯಕ್ಷರು, ಸ್ಥಳೀಯ ಸಂಸ್ಥೆ ಕೊರಟಗೆರೆ., ಶ್ರೀ ಯರಗಾಮಯ್ಯ, ದೈಹಿಕ ಶಿಕ್ಷಣ ಪರೀವಿಕ್ಷಕರು ಮದುಗಿರಿ, ಶ್ರೀ ವಜೀರ್ ಖಾನ್, ದೈಹಿಕ ಶಿಕ್ಷಣ ಪರಿವೀಕ್ಷಕರು ಕೊರಟಗೆರೆ, ಶ್ರೀ ನಾಗರಾಜ್, ದೈಹಿಕ ಶಿಕ್ಷಣ ಪರಿವೀಕ್ಷಕರು ಶಿರಾ, ಶ್ರೀ ವಿಜಯಕುಮಾರ್, ದೈಹಿಕ ಶಿಕ್ಷಣ ಪರಿವೀಕ್ಷಕರು ಪಾವಗಡ, ಮದುಗಿರಿ ಪದಾಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿದರು. ಶ್ರೀ ಕೃಷ್ಣಮೂರ್ತಿ ಅವರು ಸ್ವಾಗತಿಸಿದರು. ಶ್ರೀ ಕರಿಸಿದ್ದಪ್ಪ ಟಿ. ಅವರು ವಂದನಾರ್ಪಣೆ ಮಾಡಿದರು.




* ಡಿಸೆಂಬರ್ 25 ರಿಂದ 27ರ ವರೆಗೆ ಮದುಗಿರಿಯಲ್ಲಿ ರಾಜ್ಯ ಪುರಸ್ಕಾರ ವಿದ್ಯಾರ್ಥಿಗಳಿಗೆ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರವನ್ನು ಜಿಲ್ಲಾ ಸಂಸ್ಥೆ ಆವರಣದಲ್ಲಿ ನಡೆಸಲಾಯಿತು. ಶ್ರೀ ಕೃಷ್ಣಮೂರ್ತಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್), ಶ್ರೀಮತಿ ಸಾಯಿರಾಬಾನ್, ಜಿಲ್ಲಾ ತರಬೇತಿ ಆಯುಕ್ತರು (ಗೈಡ್) ಇವರ ನಾಯಕತ್ವದಲ್ಲಿ 32 ಸ್ಕೌಟ್-ಗೈಡ್, ರೋವರ್-ರೇಂಜರ್‌ಗಳು ಭಾಗವಹಿಸಿದ್ದರು.



* ಡಿಸೆಂಬರ್ 30 ರಂದು ಶಿರಾ ಸ್ಥಳೀಯ ಸಂಸ್ಥೆ ವತಿಯಿಂದ ಸ್ಕೌಟ್ಸ್-ಗೈಡ್, ಕಬ್-ಬುಲ್‌ಬುಲ್ ಶಿಕ್ಷಕರುಗಳ ಒಂದು ದಿನದ ಮಾಹಿತಿ ಕಾರ್ಯಾಗಾರ, ದಳ ನೋಂದಣಿ ಮತ್ತು ನವೀಕರಣವನ್ನು ನಗರದ ಕಾಳಿದಾಸ ಪ್ರೌಢ ಶಾಲೆಯಲ್ಲಿ ಆಯೋಜಿಸಲಾಗಿದ್ದು ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೃಷ್ಣಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿರಾ ಇವರು ವಹಿಸಿದ್ದರು

* ಜನವರಿ 3 ರಂದು ಪಾವಗಡ ಸ್ಥಳೀಯ ಸಂಸ್ಥೆಯ ವತಿಯಿಂದ ಕರ್ನಾಟಕ ಪಬ್ಲಿಕ್ ಶಾಲೆ ತಿರುಮಣಿ ಇಲ್ಲಿ ರಾಷ್ಟ್ರದ ಪ್ರಪ್ರಥಮ ಮಹಿಳಾ ಶಿಕ್ಷಕಿ ಶ್ರೀಮತಿ ಸಾವಿತ್ರಿ ಬಾಯಿಪುಲೆ ಇವರ 194ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರು ಸ್ಕೌಟ್-ಗೈಡ್ ಶಿಕ್ಷಕರು ಸಿಬ್ಬಂದಿ ವರ್ಗ ಹಾಗೂ ಶಾಲಾ ಸ್ಕೌಟ್ ಗೈಡ್ ಇತರ ವಿದ್ಯಾರ್ಥಿಗಳು ಭಾಗವಹಿಸಿ ಸಾವಿತ್ರಿ ಬಾಯಿಪುಲೆ ಇವರ ಆದರ್ಶವನ್ನು ಅವರು ನಡೆದು ಬಂದ ದಾರಿಯ ವಿಷಯಗಳನ್ನು ಶಿಕ್ಷಕರು ಮಕ್ಕಳಿಗೆ ತಿಳಿಸಿದರು. ಹಾಗೂ ವಿನಾಯಕ ಸರಸ್ವತಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಪಾವಗಡ ಮತ್ತು ತರೂರು ಶಾಲೆ ಹಾಗು ಜಿ.ಎಚ್.ಪಿ.ಎಸ್. ಕೋಟೆ ಕೊರಟಗೆರೆ ಶಾಲೆಗಳಲ್ಲೂ ಕೂಡ ಸಾವಿತ್ರಿಬಾಯಿ ಫುಲೆ ಅವರ ಜನ್ಮ ದಿನಾಚರಣೆಯನ್ನು ಆಚರಿಸಿ ಮಕ್ಕಳಿಗೆ ಅರಿವು ಮೂಡಿಸಿದರು.



* ಜನವರಿ 8 ರಂದು ಶಿರಾ ಸ್ಥಳೀಯ ಸಂಸ್ಥೆಯ ವತಿಯಿಂದ ತಾಲೂಕ್ ರ‍್ಯಾಲಿ ಪ್ರಯುಕ್ತ ನಗರದ ಪ್ರವಾಸಿ ಮಂದಿರದಿಂದ ಶ್ರೀ ಮಾಧವ ಪ್ರೌಢ ಶಾಲೆಯವರೆಗೆ ಜಾಥಾ ಆಯೋಜಿಸಲಾಗಿದ್ದು. ಈ ಜಾಥಾ ವನ್ನು ಶ್ರೀ ನಾಗರಾಜ್, ದೈಹಿಕ ಶಿಕ್ಷಣ ಪರಿವಿಕ್ಷಕರು ಉದ್ಘಾಟಿಸಿದರು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಸ್ಕೌಟ್-ಗೈಡ್ ಶಿಕ್ಷಕರು ಶಾಲಾ ಸಿಬ್ಬಂದಿ ವರ್ಗ ಹಾಗೂ 240 ಸ್ಕೌಟ್-ಗೈಡ್‌ಗಳು ಭಾಗವಹಿಸಿದ್ದರು.

* ಜನವರಿ 9 ರಂದು ಶಿರಾ ಸ್ಕೌಟ್ಸ್-ಗೈಡ್ಸ್‌ಗಳಿಗೆ ದ್ವಿತೀಯ ಸೋಪಾನ ಪರೀಕ್ಷೆಯನ್ನು ಮಾಧವ ಪ್ರೌಢ ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಪರೀಕ್ಷೆಯಲ್ಲಿ ಸುಮಾರು 120 ವಿದ್ಯಾರ್ಥಿಗಳು ತಮ್ಮ ತರಬೇತಿ ಶಿಕ್ಷಕರುಗಳೊಂದಿಗೆ ಭಾಗವಹಿಸಿದ್ದರು.

* ಜನವರಿ 13 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಶಿರಾ ಇಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ಯೂತ್ ಡೇ ಕಾರ್ಯಕ್ರಮವನ್ನು ಕಾಲೇಜು ಪ್ರಾಂಶುಪಾಲರಾದ ಡಾ॥ ಚಂದ್ರಶೇಖರ್ ಇವರ ನೇತೃತ್ವದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಕಾಲೇಜು ಹಿರಿಯ ಉಪನ್ಯಾಸಕರಾದ ಡಾ॥ ಹೊನ್ನ ಆಂಜನೇಯ, ಡಾ॥ ಬಾಳಪ್ಪ, ಡಾ॥ ತಿಪ್ಪೇಸ್ವಾಮಿ, ರೋವರ್ ಲೀಡರ್ ಈ ಸಮಾರಂಭದಲ್ಲಿ 64 ರೋವರ್-ರೇಂಜರ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜನವರಿ 20 ರಂದು 2024-25ನೇ ಸಾಲಿನ ಜಿಲ್ಲಾ ಮಟ್ಟದ ಪ್ರೇರಣಾ ಶಿಬಿರವನ್ನು ಮಧುಗಿರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ರೇಂಜರ್‌ಗಳಿಗೆ ಕಾನೂನು ಇಲಾಖೆ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಇವರ ಸಹಯೋಗದೊಂದಿಗೆ ಎರಡು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು



ಈ ಕಾರ್ಯಗಾರದಲ್ಲಿ ಡಾ॥ ಕುಮಾರ್, ಪ್ರಾಂಶುಪಾಲರು ಇವರ ಅಧ್ಯಕ್ಷತೆಯಲ್ಲಿ ಕಾನೂನು ಸಲಹೆಗಳನ್ನು ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಪ್ರಮೀಳಾ ಹಾಗೂ ವಕೀಲರಾದ ಶ್ರೀಮತಿ ಲಕ್ಷ್ಮಿ ನೀಡಿದರು. ಪೊಲೀಸ್ ಇಲಾಖೆಯಿಂದ ಶ್ರೀಮತಿ ವನಜ ಶ್ರೀಮತಿ ಅನಿತಾ ಸಲಹೆಗಳನ್ನು ನೀಡಿದರು. ಆರೋಗ್ಯ ಇಲಾಖೆಯಿಂದ ಶ್ರೀಮತಿ ಸುಜಾತ ಶ್ರೀಮತಿ ಸುನಿತಾಸಲಹೆಗಳನ್ನು ನೀಡಿದರು.

* ಜನವರಿ 21 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಪೊಲೀಸ್ ಉಪ ಅಧೀಕ್ಷಕರ ಕಚೇರಿ ಶಿರಾ ಇವರ ಸಹಯೋಗದೊಂದಿಗೆ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ನಡೆಸಲಾಯಿತು ಶ್ರೀ ನರಸಿಂಹಮೂರ್ತಿ ಎ.ಎಸ್.ಐ., ಶ್ರೀ ಕಿರಣ್‌ಕುಮಾರ್, ಹೆಡ್ ಕಾನ್ಸ್‌ಟೇಬಲ್ ಇವರು ರಸ್ತೆ ಸುರಕ್ಷತೆಯ ಬಗ್ಗೆ ಮಾಹಿತಿ ನೀಡಿದರು.

* ಜನವರಿ 24 ರಂದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ನಗರದ ವಿವಿಧ ಶಾಲೆಗಳ ಸ್ಕೌಟ್ ಗೈಡ್ ಹಾಗೂ ಇತರೆ ವಿದ್ಯಾರ್ಥಿಗಳು ಭಾಗವಹಿಸಿದ್ದು ಈ ಸಂದರ್ಭದಲ್ಲಿ ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ, ಶ್ರೀ ರಾಜೇಂದ್ರ, ಶ್ರೀ ಎನ್. ರಾಜಣ್ಣ ಎಂಎಲ್‌ಸಿ ಶ್ರೀ ಗೋಟುರು ಶಿವಪ್ಪ ಉಪ ವಿಭಾಗಾಧಿಕಾರಿಗಳು ಮತ್ತು ಸ್ಕೌಟ್ ಗೈಡ್ ಅಧ್ಯಕ್ಷರು ಮಾತನಾಡಿದರು. ಸ್ಕೌಟ್-ಗೈಡ್ ಶಿಕ್ಷಕರು 150 ಗೈಡ್ಸ್‌ಗಳು ಭಾಗವಹಿಸಿದ್ದರು.

* ಜನವರಿ 25 ರಂದು ಮಧುಗಿರಿ ಸ್ಕೌಟ್ ಗೈಡ್‌ಗಳಿಗೆ ರಸ್ತೆ ಸುರಕ್ಷತೆಯ ಬಗ್ಗೆ ಮಾಹಿತಿಯನ್ನು ಪೊಲೀಸ್ ಇಲಾಖೆಯ ಎಎಸ್‌ಐ ಶ್ರೀ ಸುಬ್ಬರಾಯಪ್ಪ ಮತ್ತು ಶ್ರೀ ಸುದರ್ಶನ್ ಶ್ರೀ ಕೇಶವಮೂರ್ತಿ ಮಾರ್ಗದರ್ಶನ ಮಾಡಿದರು.

* ಜನವರಿ 26 ರಂದು 76ನೇ ಗಣತಂತ್ರ ದಿನದ ಅಂಗವಾಗಿ ವಿದ್ಯಾರ್ಥಿಗಳು ಪಥ ಸಂಚಲನೆಯಲ್ಲಿ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಿ ಉಪ ವಿಭಾಗಾಧಿಕಾರಿಗಳಾದ ಮಾನ್ಯ ಶ್ರೀ ಗೋಟೂರು ಶಿವಪ್ಪ ಇವರಿಂದ ಬಹುಮಾನ ಪಡೆದರು ಕಾರ್ಯಕ್ರಮದಲ್ಲಿ ಗಣ್ಯರೊಂದಿಗೆ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜನವರಿ 30 ರಂದು ಜಿ.ಎಫ್.ಜಿ.ಸಿ. ಕಾಲೇಜ್ ಪಾವಗಡ ರೋವರ್ ರೇಂಜರ್‌ಗಳು ಹುತಾತ್ಮ ದಿನದ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ನಗರದ ತಾಲೂಕು ಪಂಚಾಯತ್ ಆವರಣ ಮತ್ತು ತಹಸಿಲ್ದಾರ್ ಕಚೇರಿ ಆವರಣವನ್ನು ಸ್ವಚ್ಛತೆ ಮಾಡಿದರು.

* ಜನವರಿ 31 ರಂದು ಜಿ.ಎಫ್.ಜಿ.ಸಿ ಕಾಲೇಜ್ ಶಿರಾ ರೋವರ್ ರೇಂಜರ್‌ಗಳು ಉಪನ್ಯಾಸಕರೊಂದಿಗೆ ಅಗ್ನಿಶಾಮಕ ಠಾಣೆಗೆ ಭೇಟಿ ನೀಡಿ ಠಾಣಾ ಮುಖ್ಯಸ್ಥರಾದ ಶ್ರೀ ಪ್ರದೀಪ್ ಮತ್ತು ಇವರ ಸಿಬ್ಬಂದಿ ವರ್ಗದವರಿಂದ ಪ್ರಕೃತಿ ವಿಕೋಪ ಸಂದರ್ಭದಲ್ಲಿ ಬಳಸುವ ಉಪಕರಣ ವಸ್ತುಗಳು ಸಾಮಗ್ರಿಗಳ ಮತ್ತು ಅವುಗಳ ಬಳಕೆ ಮತ್ತು ಅಣುಕು ಪ್ರದರ್ಶನವನ್ನು ವೀಕ್ಷಣೆ ಮಾಡಿದರು ನಂತರ ಕಚೇರಿಯಲ್ಲಿ ಇಡಲಾಗಿರುವ ವಸ್ತುಗಳನ್ನು ಪರಿಚಯಿಸಿ ಮಾಹಿತಿ ನೀಡಿದರು.

* ಫೆಬ್ರವರಿ 01 ರಂದು ಮದುಗಿರಿ ಸ್ಕೌಟ್ಸ್-ಗೈಡ್ಸ್‌ಗಳು ರಸ್ತೆ ಸುರಕ್ಷತೆ ಕುರಿತಾಗಿ ಸೈಕಲ್ ಜಾಥಾ ನಡೆಸಿದರು ಮತ್ತು ರಸ್ತೆ ಸುರಕ್ಷತೆಯ ಬಗ್ಗೆ ಘೋಷಣೆಗಳನ್ನು ಕೂಗುತ್ತಾ ನಗರದ ಮುಖ್ಯ ರಸ್ತೆಗಳಲ್ಲಿ ಸಂಚರಿಸಿದರು ಈ ಕಾರ್ಯಕ್ರಮದಲ್ಲಿ ಚಿರಾಗ್ ಪಬ್ಲಿಕ್ ಶಾಲೆ, ಅದ್ವೈತ ಶಾಲೆ ಮತ್ತು ಎಂಜಿಎಂ ಶಾಲೆ ಶಿಕ್ಷಕರು ಮಕ್ಕಳು ಪಾಲ್ಗೊಂಡಿದ್ದರು.



* ಫೆಬ್ರುವರಿ 05 ರಂದು ರಥಸಪ್ತಮಿಯ ಅಂಗವಾಗಿ ನಗರದ ಶ್ರೀ ವೆಂಕಟರಮಣ ದೇವಸ್ಥಾನ ಆವರಣ ಮತ್ತು ಹರಿಹರೇಶ್ವರ ದೇವಸ್ಥಾನ ಆವರಣವನ್ನು ಸ್ವಚ್ಛತೆಯನ್ನು ಸ್ಕೌಟ್-ಗೈಡ್‌ಗಳು ಮಾಡಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ಮಂಡಳಿಯವರು ಹಾಗೂ ಸಾರ್ವಜನಿಕರು ಮಕ್ಕಳಿಗೆ ಶುಭ ಹಾರೈಸಿದರು.

* ಫೆಬ್ರವರಿ 06 ರಂದು ಮಧುಗಿರಿ ವಿವಿಧ ಶಾಲೆಯ ಸ್ಕೌಟ್ ಗೈಡ್‌ಗಳಿಂದ ಹರಿಹರಪುರಕ್ಕೆ ಹೈಕ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು. 68 ಸ್ಕೌಟ್-ಗೈಡ್‌ಗಳು ಶಿಕ್ಷಕರು ಭಾಗವಹಿಸಿದ್ದರು.

* ಫೆಬ್ರವರಿ 11 ರಂದು ಮಧುಗಿರಿ ತಾಲೂಕು ಮಟ್ಟದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಜಿಲ್ಲಾ ಕಚೇರಿಯಲ್ಲಿ ನಡೆಸಲಾಯಿತು. ಶ್ರೀ ಕೃಷ್ಣಮೂರ್ತಿ, ಡಿ.ಟಿ.ಸಿ. ಮತ್ತು ಶ್ರೀಮತಿ ಸಾಯಿರಾಬಾನು, ಡಿ.ಟಿ.ಸಿ.ಜಿ ಇವರ ನಾಯಕತ್ವದಲ್ಲಿ ನಡೆಸಲಾಯಿತು. 6 ಸ್ಕೌಟ್-ಗೈಡ್ ಶಿಕ್ಷಕರು ಸುಮಾರು 92 ಸ್ಕೌಟ್-ಗೈಡ್‌ಗಳು ಭಾಗವಹಿಸಿದ್ದರು.

## ಶಿವಮೊಗ್ಗ

* ಜನವರಿ 29 ರಂದು ಸಾಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಕಬ್ಸ್, ಬುಲ್‌ಬುಲ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಜಿಲ್ಲಾ ಪುರಸ್ಕಾರ ಪರೀಕ್ಷಾ ಶಿಬಿರವನ್ನು ನಿರ್ಮಲ ಬಾಲಿಕಾ ಪ್ರೌಢಶಾಲೆ ಸಾಗರ ಇಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವು ಸ್ಕೌಟ್-ಗೈಡ್ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸಭೆಗೆ ಶ್ರೀ ನಿಕ್ಸಾನ್ ರವರು ಎಲ್ಲರನ್ನು ಸ್ವಾಗತಿಸಿದರು. ಶ್ರೀ ಕೆ. ರವಿ, ಜಿಲ್ಲಾ ಆಯುಕ್ತರು ರೋವರ್ ವಿಭಾಗ ಇವರು ಕಾರ್ಯಕ್ರಮವನ್ನು ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮವನ್ನು ದೀಪ ಬೆಳಗಿಸುವುದರೊಂದಿಗೆ ಸಾಗರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಪರಶುರಾಮ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸರಸ್ವತಿ ನಾಗರಾಜ್ ಜಿಲ್ಲಾ ಆಯುಕ್ತರು (ವಯಸ್ಕ ಸಂಪನ್ಮೂಲ) ಇವರು ವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀ ಹೆಚ್. ಶಿವಶಂಕರಪ್ಪ, ಜಿಲ್ಲಾ ಆಯುಕ್ತರು (ರೋವರ್) ಶ್ರೀ ಕೆ. ರವಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಚಂದ್ರಶೇಖರಯ್ಯ ಕೆ.ವಿ. ಹಾಗೂ ಶ್ರೀ ಸಿ.ಎಂ. ಪರಮೇಶ್ವರಯ್ಯ ಇವರು ಹಾಜರಾಗಿದ್ದರು. ಈ ಪರೀಕ್ಷಾ ಶಿಬಿರದಲ್ಲಿ ಒಟ್ಟು 274 ವಿದ್ಯಾರ್ಥಿಗಳು ಭಾಗವಹಿಸಿದ್ದು.




## ಉಡುಪಿ

* ಜನವರಿ 13 ರಂದು ಕಟಪಾಡಿ ಗ್ರಾಮ ಪಂಚಾಯಿತಿ ಸಭಾಭವನದಲ್ಲಿ ರಸ್ತೆ ಸುರಕ್ಷತಾ ಸಪ್ತಾಹವನ್ನು ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಅವರು ಉದ್ಘಾಟಿಸುವ ಮೂಲಕ ಚಾಲನೆ ನೀಡಿ. ಶ್ರೀ ತೇಜಸ್ವಿ, ಉಪನಿರೀಕ್ಷಕರು ಕಾಪು ಪೊಲೀಸ್ ಠಾಣೆ ಇವರ ಮಾರ್ಗದರ್ಶನದಲ್ಲಿ ಎ.ಎಸ್.ಐ. ಶ್ರೀ ದಯಾನಂದ್ ಹಾಗೂ ಶ್ರೀ ಹೆಚ್.ಸಿ. ವಿಕ್ರಮ್ ಇವರ ನೇತೃತ್ವದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಸ್ತೆ ಸುರಕ್ಷತಾ ಸಪ್ತಾಹವನ್ನು ಮಾಹಿತಿ ಮತ್ತು ಜಾಗರೂಕತೆಯ ಬಗ್ಗೆ ಪ್ರಾತ್ಯಕ್ಷಿಕವಾಗಿ ಮಾಡಿಸಲಾಯಿತು. ಈ ಸಮಯದಲ್ಲಿ ಜಿಲ್ಲಾ ಮುಖ್ಯ



ಆಯುಕ್ತರಾದ ಇಂದ್ರಾಳಿ ಜಯಕರ್ ಶೆಟ್ಟಿ ಇವರು ರಸ್ತೆ ಸುರಕ್ಷತೆಯ ಬಗ್ಗೆ ಮಾಹಿತಿ ನೀಡಿದರು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಮಕ್ಕಳಿಗೆ ಮಾಹಿತಿ ನೀಡಿ, ಮಕ್ಕಳಿಗೆ ಸ್ಥಳೀಯ ಸಂಸ್ಥೆಯಿಂದ ಸಿಹಿತಿಂಡಿಯನ್ನು ಆರಕ್ಷ ಠಾಣೆಯಿಂದ ಮಕ್ಕಳಿಗೆ ಮಜ್ಜಿಗೆಯನ್ನು ನೀಡಲಾಯಿತು.

* ಜನವರಿ 15 ರಂದು ಪಡುಬಿದ್ರಿ ಪೊಲೀಸ್ ಠಾಣಾ ಸಹಯೋಗದಲ್ಲಿ ರಸ್ತೆ ಸುರಕ್ಷತಾ ಸಪ್ತಾಹವನ್ನು ಶ್ರೀ ಪ್ರಸನ್ನ ಎಂ.ಎಸ್, ಪೋಲಿಸ್ ಉಪ ನಿರೀಕ್ಷಕರು ಪಡುಬಿದ್ರಿ ಇವರ ಮಾರ್ಗದರ್ಶನದಲ್ಲಿ ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್‌ಗಳಿಗೆ ರಸ್ತೆ ಸುರಕ್ಷತಾ ಸಪ್ತಾಹದ ಮಹತ್ವ ಹಾಗೂ ಜಾಗರೂಕತೆಯ ಬಗ್ಗೆ ಮಾಹಿತಿಯನ್ನು ನೀಡಿದರು.

* ಜನವರಿ 16 ರಂದು ಉಡುಪಿ ಸಿಟಿ ಬಸ್ ಸ್ಟ್ಯಾಂಡ್ ಇಲ್ಲಿ ಉಡುಪಿ ಸಂಚಾರ ಪೊಲೀಸ್ ಠಾಣೆಯ ಎಸ್.ಐ. ಶ್ರೀ ಪ್ರಕಾಶ್ ಇವರ ಮಾರ್ಗದರ್ಶನದಲ್ಲಿ ಇಲಾಖೆ ಅಧಿಕಾರಿ ಆಗಿರುವ ಶ್ರೀನಿವಾಸ್ ಪಿ.ಸಿ. ಹಾಗೂ ಶ್ರೀ ಮಾಲತೇಶ್ ಪಿ.ಸಿ. ಇವರ ನೇತೃತ್ವದಲ್ಲಿ ವಿದ್ಯೋದಯ ಆಂಗ್ಲ ಮಾಧ್ಯಮ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಸ್ತೆ ಸುರಕ್ಷತಾ ಸಪ್ತಾಹದ ಮಾಹಿತಿ ಮತ್ತು ಜಾಗರೂಕತೆಯ ಬಗ್ಗೆ ಪ್ರಾತ್ಯಕ್ಷಿಕವಾಗಿ ಮಾಡಿಸಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾಗಿರುವ ಇಂದ್ರಾಳಿ ಜಯಕರ್ ಶೆಟ್ಟಿ ಇವರು ಉಪಸ್ಥಿತರಿದ್ದು ಮಕ್ಕಳಿಗೆ ಮಾರ್ಗದರ್ಶನ ಮತ್ತು ಸಲಹೆ ಸೂಚನೆ ನೀಡಿದರು. ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಬಿ. ಅಡಿಗ ಉಪಸ್ಥಿತರಿದ್ದರು.




## ವಿಜಯನಗರ

* "ಅಪ್ರಾಪ್ತರು ಚಾಲನಾ ಪರವಾನಿಗೆ ಇಲ್ಲದೇ ಚಾಲನೆ ಮಾಡುವುದು, ಹೆಲ್ಮೆಟ್ ಧರಿಸದೆ ಚಾಲನೆ ಮಾಡುವುದು, ಚಾಲನೆ ಸಂದರ್ಭದಲ್ಲಿ ಮೊಬೈಲ್ ಬಳಕೆ ಅಪರಾಧವಾಗಿದ್ದು ಇಂತಹ ಅಪರಾಧಿಗಳಿಗೆ 25.000 ರೂ ದಂಡ ಹಾಗೂ ಮೂರು ತಿಂಗಳು ಜೈಲು ಶಿಕ್ಷೆ ವಿಧಿಸಲಾಗುವುದು ಆದ್ದರಿಂದ ವಿದ್ಯಾರ್ಥಿಗಳು ಇಂತಹ ಮಾಹಿತಿಯನ್ನು ತಿಳಿದುಕೊಂಡು ತಮ್ಮ ಪಾಲಕರಿಗೆ ಹಾಗೂ ನೆರೆಹೊರೆಯವರಿಗೆ ತಿಳಿಸಬೇಕು" ಎಂದು ಮಾನ್ಯ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧಿಕ್ಷಕರು ಶ್ರೀ ಸಲಿಂ ಪಾಷ ತಿಳಿಸಿದರು. ನಗರದ ಪಟ್ಟಣ ಪೊಲೀಸ್ ಠಾಣೆಯಲ್ಲಿ ಜನವರಿ 28 ರಂದು ಜಿಲ್ಲಾ ಸಂಸ್ಥೆ ವಿಜಯನಗರ ಹಾಗೂ ತಾಲ್ಲೂಕು ಸಂಸ್ಥೆ ಹೊಸಪೇಟೆ ಮತ್ತು ಸಂಚಾರಿ ಪೊಲೀಸ್ ಠಾಣೆ ಸಹಯೋಗದೊಂದಿಗೆ ನಡೆದ ರಸ್ತೆ ಸುರಕ್ಷತಾ ಸಪ್ತಾಹ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಶ್ರೀ ಚನ್ನಬಸಪ್ಪ, ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ಮಾತನಾಡಿ, "ವಿದ್ಯಾರ್ಥಿಗಳು ಶಾಲೆಗೆ ಹೋಗುವಾಗ ಬರುವಾಗ ವಹಿಸಬಹುದಾದ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ರಸ್ತೆ ಸುರಕ್ಷತೆ ನಿಯಮಗಳನ್ನು ಪ್ರತಿಯೊಬ್ಬರು ತಿಳಿದುಕೊಂಡು ಪಾಲಿಸಿದ್ದೇ ಆದಲ್ಲಿ ಅಪಘಾತಗಳನ್ನು ತಪ್ಪಿಸಬಹುದು" ಎಂದು ಹೇಳಿದರು. ನಂತರ ನಗರದ ಪಟ್ಟಣ ಪೊಲೀಸ್ ಠಾಣೆಯಿಂದ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ




ಉಪ ಅಧೀಕ್ಷಕರು, ಹೊಸಪೇಟೆ, ಶ್ರೀ ಟಿ. ಮಂಜುನಾಥ, ಶ್ರೀ ಶ್ರೀಕಾಂತ ವಾಲ್ಮೀಕಿ, ಟಿ.ಪಿ.ಓ, ಶ್ರೀ ಎಂ. ರಾಜು, ಇ.ಸಿ.ಓ, ಜಿಲ್ಲಾ ಕಾರ್ಯದರ್ಶಿ, ಶ್ರೀ ಮಂಜುನಾಥಪ್ಪ ಪಿ. ಸೇರಿದಂತೆ ದಳನಾಯಕರು ಹಾಗೂ 500ಕ್ಕೂ ಹೆಚ್ಚು ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು. ಶ್ರೀ ಹುಲುಗಪ್ಪ, ಸಂಚಾರಿ ಪೊಲೀಸ್ ನಿರೀಕ್ಷಕರು ಸ್ವಾಗತಿಸಿದರು. ಸಂಚಾರಿ ಪೊಲೀಸ್ ಪೇದೆ ಶ್ರೀ ಪ್ರಭಾಕರ್, ಸಂಚಾರಿ ನಿಯಮಗಳನ್ನು ಪ್ರಾತ್ಯಾಕ್ಷಿಕವಾಗಿ ನೀಡಿದರು.

* ಜನವರಿ 18 ರಂದು ಸ್ಥಳೀಯ ಸಂಸ್ಥೆ ಹೊಸಪೇಟೆ ಇವರಿಂದ ಒಂದು ದಿನದ ತಾಲೂಕು ಮಟ್ಟದ ಪ್ರಾರಂಭಿಕ ತರಬೇತಿ ಶಿಬಿರವನ್ನು ವಿವೇಕಾನಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಸಪೇಟೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ ಅನ್ನಪೂರ್ಣ ಸದಾಶಿವಮೂರ್ತಿ ಹಾಗೂ ಗಣ್ಯರು ಸಸಿಗೆ ನೀರೆಯುವುದರ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಉದ್ಘಾಟಕರು ತಮ್ಮ ನುಡಿಗಳಲ್ಲಿ "ಈ ಸಂಸ್ಥೆಯು ಉತ್ತಮ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ವಿದ್ಯಾರ್ಥಿಗಳಲ್ಲಿ ದೇಶ ಪ್ರೇಮ, ಸೇವಾ ಮನೋಭಾವ, ಪ್ರಾಮಾಣಿಕತೆ ಇನ್ನಿತರ ಕೌಶಲ್ಯಗಳನ್ನು ಕಲಿಯುತ್ತಾರೆ" ಎಂದು ತಿಳಿಸಿದರು. ಶಿಕ್ಷಣ ಸಂಯೋಜಕರಾದ ಶ್ರೀ ಶಿವರಾಮ್‌ರವರು ಮಾತನಾಡಿ "ಈ ಸಂಸ್ಥೆಯಲ್ಲಿ ರಾಜ್ಯ ಪುರಸ್ಕಾರ ರಾಷ್ಟ್ರಪತಿ ಪುರಸ್ಕಾರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಮಕ್ಕಳಿಗೆ ವೃತ್ತಿಪರ ಕೋರ್ಸ್‌ಗಳಿಗೆ ಮೀಸಲಾತಿ ಇದೆ. ಎಲ್ಲಾ ಶಾಲೆಗಳಲ್ಲಿ ದಳಗಳು ಪ್ರಾರಂಭಿಸಬೇಕು" ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ. ಮಂಜುನಾಥಪ್ಪ ಇವರು ಮಾತನಾಡಿ "ಇದು ಒಂದು ಅಂತರ್ರಾಷ್ಟ್ರೀಯ ಸಂಸ್ಥೆಯಾಗಿದೆ. ಇದರಿಂದ ಮಕ್ಕಳಲ್ಲಿ ಉತ್ತಮ ಭವಿಷ್ಯರೂಪಿಸಲು ಸಹಾಯಕವಾಗುತ್ತದೆ" ಎಂದು ತಿಳಿಸಿದರು. ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀಮತಿ ರೇಣುಕಾ ಡಿಟಿಸಿ ಗೈಡ್ ವಿಭಾಗ, ಶ್ರೀ ಸೈದುಲ ಸಾಹೇಬ್ ಮುಖ್ಯ ಗುರುಗಳು ವಿವೇಕಾನಂದ ಶಾಲೆ ಮತ್ತು ಶ್ರೀ ತಿಪ್ಪೇಸ್ವಾಮಿ ಹಾಜರಾಗಿದ್ದರು ಈ ಕಾರ್ಯಕ್ರಮದ ನಿರೂಪಣೆಯನ್ನು ಸ್ಥಳೀಯ ಸಂಸ್ಥೆಯು ಖಜಾಂಚಿಯಾದ ಶ್ರೀ ಕೆ. ತಿಪ್ಪೇಸ್ವಾಮಿ ನೆರವೇರಿಸಿದರು. ಶ್ರೀ ತಿಪ್ಪೇಸ್ವಾಮಿಯವರು ವಂದನಾರ್ಪಣೆ ನೆರವೇರಿಸಿದರು.




* ಹರಪನಹಳ್ಳಿ ವಿಜಯನಗರ ಜಿಲ್ಲೆ ಹಾಗೂ ಎಸ್.ಯು.ಜೆ.ಎಂ. ಪದವಿಪೂರ್ವ ಕಾಲೇಜು ಹರಪನಹಳ್ಳಿ ವಿಜಯನಗರ ಜಿಲ್ಲೆ ಇವರ ಸಂಯುಕ್ತ ಆಶ್ರಯದಲ್ಲಿ ಎಸ್.ಯು.ಜೆ.ಎಂ. ಪದವಿಪೂರ್ವ ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ದೀಕ್ಷೆ ನೀಡಲಾಯಿತು. ಈ ಸಂದರ್ಭದಲ್ಲಿ ಪ್ರಾಚಾರ್ಯರಾದ ಶ್ರೀ ಗುರುಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ತಾಲ್ಲೂಕು ಸ್ಕೌಟ್ಸ್-ಗೈಡ್ಸ್ ಕಾರ್ಯದರ್ಶಿಯಾದ ಶ್ರೀ ಮೂರ್ತಿ ಖಜಾಂತಿಗಳಾದ ಶ್ರೀ ಉಮೇಶ ಗೌಡ ಹಾಗೂ ಕಾಲೇಜು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ಹೊರಸಂಚಾರಗಳಿಗೆ ಪ್ರಕೃತಿ ಒಡ್ಡುವ ಸವಾಲುಗಳು–5

## ಶುದ್ಧ ನೀರು : ಶಿಬಿರದ ಆದ್ಯತೆ

– ಎಂ.ಎನ್. ಷಡಕ್ಷರಿ
ಜಿಲ್ಲಾ ಮುಖ್ಯ ಆಯುಕ್ತರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಚಿಕ್ಕಮಗಳೂರು



**ಕುಡಿಯಲು ಯೋಗ್ಯ ನೀರು :**

ಯಾವುದಾದರೂ ಪ್ರಾಣಿ ನೀರಿನಲ್ಲಿ ಅಥವಾ ಸಮೀಪದಲ್ಲಿ ಸತ್ತು ಬಿದ್ದಿದ್ದರೆ, ಆ ನೀರು ಕುಡಿಯಲು ಯೋಗ್ಯವಾದುದ್ದಲ್ಲ, ಕಾರಣ ಅತಿಯಾದ ಬಿಸಿಲು ಮತ್ತು ನೀರಿನ ಆವಿಯಾಗುವಿಕೆಯಿಂದ ಖನಿಜಗಳಾದ ರಂಜಕ, ಆರ್ಸೆನಿಕ್, ಕ್ಲೋರಿನ್ ಇವುಗಳ ಪ್ರಮಾಣ ಹೆಚ್ಚಾಗಿ ಈ ನೀರು ಅಪಾಯಕಾರಿಯಾಗಿರುತ್ತದೆ.

– ಪ್ರಾಣಿಗಳು ಮತ್ತು ಪಕ್ಷಿಗಳು ಕುಡಿಯುತ್ತಾವೆಂಬ ಕಾರಣಕ್ಕೆ, ಆ ನೀರು ನಾವು ಸ್ವೀಕರಿಸಲು ಯೋಗ್ಯವೆಂದು ತಿಳಿಯಬಾರದು, ಏಕೆಂದರೆ ನಿಸರ್ಗದಲ್ಲಿ ಬದುಕುವ ಜೀವಿಗಳಿಗೆ ಹೆಚ್ಚಿನ ರೋಗ ನಿರೋದಕ ಶಕ್ತಿಯಿರುತ್ತದೆ.

– ಕುದುರೆ ಎಲ್ಲಿ ನೀರು ಕುಡಿಯುತ್ತದೆಯೋ ಆ ನೀರು ಕುಡಿಯಬಹುದು "ಎನ್ನುವ ನಾಣ್ನುಡಿಯಂತೆ, ಈ ನೀರು ಇತರೆಯದಿಕ್ಕಿಂತ ಉತ್ತಮವಿರಬಹುದು.

**ಸಿದ್ದತೆ :**

– ಶಿಬಿರದ ಸ್ಥಳ ನಿರ್ದರಿಸುವಾಗ ಅತೀ ಮುಖ್ಯವಾದ ಅಂಶ, ಸಾಕಷ್ಟು ನೀರಿನ ಲಭ್ಯತೆಯಿದೆಯೋ ಎನ್ನುವುದು. ಚಾರಣದುದ್ದಕ್ಕೂ ಬೇಕಾಗುವಷ್ಟು ನೀರನ್ನು ಪ್ರತಿಯೊಬ್ಬರೂ ತಮ್ಮ ಬೆನ್ನು ಚೀಲದಲ್ಲಿ ಒಂದು ಬಾಟಲಿಯಲ್ಲಿ ಒಯ್ಯಲೇಬೇಕು. (ಯಾವುದೇ ಕಾರಣಕ್ಕೂ ಮತ್ತೊಬ್ಬರ ಮೇಲೆ ಅವಲಂಬಿತರಾಗಬಾರದು).

[ಧೂಮಪಾನ ದಾಹ ಹೆಚ್ಚಿಸುತ್ತದೆ ಹಾಗೂ "ಮದ್ಯ" ದೇಹದ ನಿರ್ಜಲೀಕರಣ ಮಾಡಿ, ಶಾಖ ತಡೆದುಕೊಳ್ಳುವ ಶಕ್ತಿಯನ್ನು ತಗ್ಗಿಸುತ್ತದೆ. ಹಾಗಾಗಿ ಚಾರಣದಲ್ಲಿ ಇವೆರಡೂ ಕೂಡದು.]



**ಶುದ್ಧೀಕರಣ :**

ಗೊತ್ತಿಲ್ಲದ ಮೂಲದ ನೀರನ್ನು ಹಾಗೆಯೇ ಉಪಯೋಗಿಸುವುದು ಒಳ್ಳೆಯದಲ್ಲ (ಹೆಚ್ಚು ರೋಗಗಳು ಹರಡುವುದೇ ನೀರಿನಿಂದ) ಆದ್ದರಿಂದ ಈ ವಿಷಯದಲ್ಲಿ ಉಡಾಫೆಬೇಡ.

[ಪರ್ವತಾರೋಹಿಗಳು ಎತ್ತರದ ಪರದೇಶದಲ್ಲಿ ಮಂಜು ಅಥವಾ ಹಿಮದ ಗೆಡ್ಡೆಯನ್ನು ಬಿಸಿಮಾಡಿ ಕುಡಿಯವುದು ಸರ್ವೇ ಸಾಮಾನ್ಯ.]

– ನೀರನ್ನು ಕುದಿಸಿ ಉಪಯೋಗಿಸುವುದರಿಂದ ಎಲ್ಲ ರೀತಿಯ ಹಾನಿಕಾರಕ ಜೀವಿಗಳು ನಾಶವಾಗುತ್ತವೆ. ಆದರೆ ಇದಕ್ಕೆ ತುಂಬಾ ಸಮಯ ಹಾಗೂ ಇಂಧನದ ಅವಶ್ಯಕತೆಯಿರುತ್ತದೆ.

– ಕ್ಯಾಂಪಿಂಗ್ ಪರಿಕರಗಳನ್ನು ಮಾರುವ ಅಂಗಡಿಗಳಲ್ಲಿ ಅಯೋಡಿನ್ ಗುಳಿಗೆಗಳು ದೊರೆಯುತ್ತವೆ, ಇವುಗಳನ್ನು ಹಾಕಿ ಕೆಲವು ನಿಮಿಷಗಳು ಬಿಟ್ಟರೆ, ನೀರು ಕುಡಿಯಲು ಯೋಗ್ಯವಾಗುತ್ತದೆ. (ಸ್ವಲ್ಪ ರುಚಿ ವ್ಯತ್ಯಾಸವಾಗಬಹುದು)

– ಸೋಸುವುದರಿಂದ (ಮೂರು ನಾಲ್ಕು ಮಡಿಕೆಯಿರುವ ಬಟ್ಟೆಯಿಂದ) ಸ್ವಲ್ಪ ಮಟ್ಟಿಗೆ ನೀರು ಶುದ್ಧಿಕರಣವಾಗುತ್ತದೆ.

– ಮೂರು ಮಡಿಕೆ ವಿಧಾನ (ಇದರ ಬದಲು ಮೂರು ಸ್ಕಾರ್ಫ್‌ಗಳನ್ನು ಉಪಯೋಗಿಸಬಹುದು)

ಮೊದಲ ಹಂತದಲ್ಲಿ ತೇಲುತ್ತಿರುವ ಅಥವಾ ದಪ್ಪದ ಕಲ್ಮಶಗಳು ಉಳಿಯುತ್ತದೆ.

ಎರಡನೇ ಅಂದರೆ ಮರಳಿನಲ್ಲಿ ಉಳಿದ ಸುಮಾರು ಕಲ್ಮಶಗಳು ಶುದ್ಧೀಕರಣವಾಗುತ್ತದೆ.

– ಮೂರನೇ ಹಂತದಲ್ಲಿ ಇದ್ದಿಲು ಕ್ರಿಮಿಗಳನ್ನು ಕೂಡಾ ಹಿಡಿದಿಡುವುದಲ್ಲದೆ, ನೀರಿನ ವಾಸನೆ ಮತ್ತು ಬಣ್ಣವನ್ನು ಹೀರಿಕೊಂಡು ಶುದ್ಧೀಕರಣ ಮಾಡುತ್ತದೆ.

ದಶಕಗಳ ಹಿಂದಿನ ಮಾತು – ನಮ್ಮೂರಿನ ಸಮೀಪದ ಛತ್ರಿಮರಕ್ಕೆ ಹೈಕ್. ಹತ್ತಿರದಲ್ಲೆಲ್ಲೂ ನೀರಿರಲಿಲ್ಲ. ಸ್ವಲ್ಪ ಗುಡ್ಡದ ಮೇಲೇರಿದಾಗ ಒಂದು ಬಂಡೆಯ ಕುಳಿಯಲ್ಲಿ ಮಳೆನೀರು ಶೇಖರಣೆಯಾಗಿತ್ತು. ಆದರೆ ಕಪ್ಪಾಗಿ ಹುಳುಗಳು ಓಡಾಡುತ್ತಿದ್ದವು! ಬೇರೆ ವಿಧಿಯಲ್ಲ, ಸೋಸಿ, ಕುದಿಸಿ ಅಡಿಗೆಗೆ ಉಪಯೋಗಿಸಿದೆವು.

ಈಗಿನ ಪರಿಸ್ಥಿತಿಯಲ್ಲಿ ಇದನ್ನು ಊಹಿಸಿಕೊಳ್ಳುವುದೂ ಅಸಾಧ್ಯ!

# ಭಾರತ ಮತ್ತು ಅಮೇರಿಕಾದಲ್ಲಿ ಸ್ಕೌಟಿಂಗ್ ಚಟುವಟಿಕೆ – ಒಂದು ತುಲನೆ

ಭಾರತದಲ್ಲಿ ಮತ್ತು ಅಮೇರಿಕಾದಲ್ಲಿ ನಡೆಯುವ ಸ್ಕೌಟಿಂಗ್ ಚಟುವಟಿಕೆಗಳಲ್ಲಿ ಹಲವು ಸಾಮ್ಯತೆಗಳು ಇದ್ದರೂ ಸಹ, ಸಾಕಷ್ಟು ವ್ಯತ್ಯಾಸಗಳಿವೆ. ಅವುಗಳನ್ನು ನಾನು ನೋಡಿದ ಹಾಗೆ, ಹಾಗು ನನ್ನ ಅಲ್ಪಮತಿಗೆ ನಿಲುಕಿದ ಹಾಗೆ ನಿಮ್ಮ ಮುಂದೆ ಇಡುವುದೇ ಈ ಲೇಖನದ ಉದ್ದೇಶ.



ಸ್ಕೌಟಿಂಗ್ ಚಳುವಳಿ ಜನಿಸಿದ್ದು ಲಂಡನ್‌ನಲ್ಲಿ ಸೈನ್ಯಾಧಿಕಾರಿಯಾಗಿದ್ದ ಬೇಡೆನ್ ಪೊವೆಲ್‌ಇದರ ಮೂಲ ಪುರುಷ. ಇವರನ್ನು ಸಂಕ್ಷಿಪ್ತವಾಗಿ B.P ಎಂದು ಕರೆಯುತ್ತಾರೆ. ಇವರು 1907ರಲ್ಲಿ, ಬ್ರೌನ್ ಸೀ ಎಂಬ ದ್ವೀಪದಲ್ಲಿ, 20 ಬಾಲಕರಿಗೆ ಒಂದು ಪ್ರಾಯೋಗಿಕ ಶಿಬಿರ ಮಾಡಿದರು. ಇದು ಸ್ಕೌಟಿಂಗ್ ಚಳುವಳಿಯ ಪ್ರಾರಂಭ ಎನ್ನಬಹುದು.

ಪ್ರಸ್ತುತ ಈ ಚಳುವಳಿಯು ವಿಶ್ವದ ಅನೇಕ ರಾಷ್ಟ್ರಗಳಲ್ಲಿ ವ್ಯಾಪಿಸಿ "ವಿಶ್ವ ಚಳುವಳಿ" ಎನಿಸಿಕೊಂಡಿದೆ. ಭಾರತದಲ್ಲಿಯೂ ಸಹ 1908ರಲ್ಲಿಯೇ ಅಸ್ತಿತ್ವ ಕಂಡುಕೊಂಡು, ನವೆಂಬರ್ 7, 1950ರಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ರೂಪುಗೊಂಡಿತು. ಈ ಸಂಸ್ಥೆಯಡಿಯಲ್ಲಿ ಬಾಲಕರಿಗೆ ಸ್ಕೌಟ್ಸ್ ಮತ್ತು ಬಾಲಕಿಯರಿಗೆ ಗೈಡ್ಸ್ ತರಬೇತಿ ನೀಡಲಾಗುತ್ತದೆ.

1910ರ ಸುಮಾರಿಗೆ ಸ್ಕೌಟಿಂಗ್ ಚಳುವಳಿಯು ಅಮೆರಿಕಾಗೆ ವ್ಯಾಪಿಸಿತು. ಇಲ್ಲಿ Boy Scouts of America ಮತ್ತು Girl Scouts of USA ಎಂಬ ಹೆಸರಿನಿಂದ ಕರೆಯುತ್ತಾರೆ. ಇತ್ತಿಚೆಗೆ Boy Scouts of America ವನ್ನು Scouting America ಎಂದು ಪುರ್ನನಾಮಕರಣ ಮಾಡಲಾಗಿದೆ. ಏಕೆಂದರೆ, ಇದರಲ್ಲಿ ಬಾಲಕಿಯರಿಗೂ ಸಹ ಅವಕಾಶ ಕಲ್ಪಿಸಲಾಗಿದೆ.

ಸ್ಕೌಟಿಂಗ್ ಸ್ವಯಂ ಪ್ರೇರಿತವಾದ, ರಾಜಕೀಯೇತರ ಶೈಕ್ಷಣಿಕ ಚಳಿವಳಿಯಾಗಿದ್ದು, ಯುವ ಜನತೆಯ ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಪ್ರತಿಭೆಗಳನ್ನು ಬೆಳೆಸುವುದೇ ಇದರ ಉದ್ದೇಶವಾಗಿದೆ. ನಮ್ಮಲ್ಲಿ ಸ್ಕೌಟ್ ಬಾಲಕರ ಗುಂಪನ್ನು ಟ್ರೂಪ್ (Troop) ಎಂದು ಕರೆಯುತ್ತಾರೆ. ಪ್ರತಿಟ್ರೂಪ್‌ಗೆ ಒಬ್ಬ ಇತಿಹಾಸ ಪುರುಷ ಅಥವಾ ಮಹಾನ್ ವ್ಯಕ್ತಿಯ ಹೆಸರು ಇರುತ್ತದೆ. ಉದಾ: ಭಗತ್

ಸಿಂಗ್ ಸ್ಕೌಟ್ ಟ್ರೂಪ್, ಭಾಸ್ಕರ ಸ್ಕೌಟ್ ಟ್ರೂಪ್ ಇತ್ಯಾದಿ. ಒಂದು ಟ್ರೂಪ್‌ನಲ್ಲಿ ಗರಿಷ್ಟ 32 ಮಂದಿ ಬಾಲಕರು ಇರುತ್ತಾರೆ. ಅವರನ್ನು 4 ಪೆಟ್ರೋಲ್ (patrol)ಗಳಾಗಿ ವಿಭಾಗಿಸುತ್ತಾರೆ. ಇವುಗಳಿಗೆ ಪ್ರಾಣಿಗಳ ಮತ್ತು ಪಕ್ಷಿಗಳ ಹೆಸರನ್ನಿಡುತ್ತಾರೆ. ಉದಾ: ಸಿಂಹ, ಹುಲಿ, ನವಿಲು, ಗಿಳಿ ಇತ್ಯಾದಿ ಒಂದು ಟ್ರೂಪ್‌ಗೆ ಒಬ್ಬ ವಯಸ್ಕ ನಾಯಕ ಸ್ಕೌಟ್ ಮಾಸ್ಟರ್ ಆಗಿರುತ್ತಾರೆ. ಇವರಿಗೆ ಸಹಾಯಕರಾಗಿ, ಒಂದು ಅಥವಾ ಹೆಚ್ಚು ಅಸಿಸ್ಟೆಂಟ್ ಸ್ಕೌಟ್ ಮಾಸ್ಟರ್‌ಗಳು ಇರುತ್ತಾರೆ. ಸ್ಕೌಟ್ ಮಾಸ್ಟರ್‌ನ ಹುದ್ದೆ ಸಾಶ್ವತ.

ನಮ್ಮಲ್ಲಿ ಹೆಚ್ಚಿನ ಸಂಖ್ಯೆಯ ಟ್ರೂಪ್‌ಗಳು ಶಾಲಾ ಪ್ರಾಯೋಜಿತ ಆಗಿರುತ್ತದೆ. ಇದಲ್ಲದೆ ವಿವಿಧ ಶಾಲೆಗಳ ಬಾಲಕರನ್ನು ಒಂದೆಡೆ ಸೇರಿಸಿ ತರಬೇತಿ ನೀಡುವ ಪದ್ಧತಿಯೂ ಇದೆ. ಇವುಗಳನ್ನು ಮುಕ್ತ ಟ್ರೂಪ್ ಎಂದು ಕರೆಯುತ್ತಾರೆ. ಕನಿಷ್ಟ ವಾರಕ್ಕೆ ಒಮ್ಮೆ ಒಂದು ಗಂಟೆಯ ಕಾಲ ನಡೆಯುವ ಟ್ರೂಪ್ ಮೀಟಿಂಗ್‌ನಲ್ಲಿ ಬಾಲಕರಿಗೆ ವಿವಿಧ ಚಟುವಟಿಕೆಗಳನ್ನು ಮಾಡಿಸಲಾಗುತ್ತದೆ. ಈ ಕಾರ್ಯಕ್ರಮದ ಪ್ರಾರಂಭ ಮತ್ತು ಅಂತ್ಯ ವಿಧ್ಯುಕ್ತವಾಗಿರುತ್ತದೆ. ಪ್ರಾರ್ಥನೆ, ಧ್ವಜಾರೋಹಣ, ಚಟುವಟಿಕೆಗಳು, Scout Master's Yarn, ರಾಷ್ಟ್ರಗೀತೆ ಮತ್ತು ಧ್ವಜಾವರೋಹಣ ಇವುಗಳನ್ನು ಒಳಗೊಂಡಿರುತ್ತದೆ. ಇಲ್ಲಿ Bharat Scout ಮತ್ತು Guidesನ ಧ್ವಜವನ್ನು ಬಳಸಲಾಗುತ್ತದೆ. ಧ್ವಜಾರೋಹಣ ಮತ್ತು ಧ್ವಜಾವರೋಹಣ ಸಂದರ್ಭಗಳಲ್ಲಿ ಕುದುರೆಯ ಲಾಳಾಕೃತಿಯಲ್ಲಿಯೇ ನಿಲ್ಲಬೇಕು. ಈ ಎರಡು ಪ್ರಕ್ರಿಯೆಗಳು ಅತ್ಯಂತ ಶಿಸ್ತು ಬದ್ಧವಾಗಿ ನಡೆಯಬೇಕು. ಚಟುವಟಿಕೆಗಳ ಸಮಯದಲ್ಲಿ ಹಾಡು, ಕಿರು ಆಟ ಇವು ಕಡ್ಡಾಯ.

ಸ್ಕೌಟ್ ಮಾಸ್ಟರ್‌ಗೆ ಸಹಾಯ ಮಾಡಲು ಒಬ್ಬ ಹಿರಿಯ ಬಾಲಕನ್ನು ಟ್ರೂಪ್ ಲೀಡರ್ (TL) ಆಗಿ ನೇಮಕ ಮಾಡಿರುತ್ತಾರೆ. ಹಾಗೆಯೇ ಪ್ರತಿ ಪೆಟ್ರೋಲ್‌ನಲ್ಲಿ ಒಬ್ಬ ಪೆಟ್ರೋಲ್ ಲೀಡರ್ (PL) ಇರುತ್ತಾನೆ. ಕಲಿಕೆ, ಆಟ ಮುಂತಾದ ಚಟುವಟಿಕೆಗಳಲ್ಲಿ ಬಾಲಕರ ಭಾಗವಹಿಸುವಿಕೆ ಹೆಚ್ಚಾಗಿದ್ದರೂ ಸಹ, ವಯಸ್ಕ ನಾಯಕರ ಮೇಲ್ವಿಚಾರಣೆ ಇದ್ದೇ ಇರುತ್ತದೆ. ಬಾಲಕನು ವಿವಿಧ ಪರೀಕ್ಷೆಗಳಿಗೆ ಹಾಜರಾಗಿ ಪ್ರಗತಿಪರ ಪದಕಗಳನ್ನು ಗಳಿಸುತ್ತಾನೆ. ಈ ಪರೀಕ್ಷೆಗಳನ್ನು ದಳಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಡೆಸಲಾಗುತ್ತದೆ. ಭಾರತದಲ್ಲಿ ಒಬ್ಬ ಬಾಲಕ ಪಡೆಯಬಹುದಾದ ಅತ್ಯುನ್ನತ ಪದಕ ಎಂದರೆ ಅದು ರಾಷ್ಟ್ರಪತಿ ಸ್ಕೌಟ್ ಪದಕ. ಈ ಪದಕದೊಂದಿಗೆ ಒಂದು ಪ್ರಮಾಣ ಪತ್ರ ನೀಡಲಾಗುತ್ತದೆ. ಘನತೆವೆತ್ತ ರಾಷ್ಟ್ರಪತಿಗಳು ಇದಕ್ಕೆ ಸಹಿಮಾಡಿರುತ್ತಾರೆ. ಒಂದು ಸೂಕ್ತ ಸಮಾರಂಭದಲ್ಲಿ, ರಾಷ್ಟ್ರಪತಿಗಳು ಅಥವಾ ಹಿರಿಯ ಅಧಿಕಾರಿಗಳು ಈ ಪ್ರಮಾಣ ಪತ್ರ ಮತ್ತು ಪದಕ ನೀಡುತ್ತಾರೆ. ಈ ಪದಕವನ್ನು ಸ್ಕೌಟ್ ವಯಸ್ಸಿನ ನಂತರ ಧರಿಸುವಂತಿಲ್ಲ.




ಒಂದು ಟ್ರೂಪ್‌ಗೆ ಸಂಬಂಧಪಟ್ಟಂತೆ COH (Court of Honor) ಎಂಬ ಉನ್ನತ ಸಭೆ ಇರುತ್ತದೆ. ಈ ಸಭೆಯಲ್ಲಿ ಎಲ್ಲಾ 4PL ಗಳು ಹಾಗೂ ಖಿಐ ಇರುತ್ತಾರೆ. ಟ್ರೂಪ್‌ನ ಶಿಸ್ತಿನ ವಿಷಯ, ಹಣಕಾಸಿನ ವಿಷಯ, ಚಟುವಟಿಕೆಗಳ ವಿಷಯ, ಮುಂತಾದುವುಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ವಿಧ್ಯುಕ್ತ ಸಮಾರಂಭಗಳಲ್ಲಿ ಸಮವಸ್ತ್ರ ಕಡ್ಡಾಯ. ಈ ಸಮವಸ್ತ್ರ ಅಡಿಯಿಂದ ಮುಡಿಯವರೆಗೆ (Top to Toe) ಪೂರ್ಣವಾಗಿರಬೇಕು. ಯಾವುದೇ ಒಂದು ಭಾಗ ಸಮರ್ಪಕವಾಗಿ ಇಲ್ಲದಿದ್ದರೂ ಸಹ ಅದು ಅಪೂರ್ಣವೆನಿಸುತ್ತದೆ. ಆ ರೀತಿ ಧರಿಸುವಂತಿಲ್ಲ. ಒಟ್ಟಾರೆ ಹೇಳುವುದಾದರೆ, ನಮ್ಮಲ್ಲಿ ಇದು ಬಾಲಕರಿಗಾಗಿಯೇ ಇರುವ ಚಳುವಳಿಯಾದರೂ ಸಹ, ವಯಸ್ಕ ನಾಯಕ ಪಾತ್ರತುಸು ಹೆಚ್ಚಾಗಿಯೇ ಇರುತ್ತದೆ.

ಮುಂದುವರೆಯುತ್ತದೆ ....

– ಎನ್. ಶ್ರೀನಿವಾಸನ್, ಎಲ್.ಟಿ.(ಸ್ಕೌ)

ಸಹಾಯಕ ರಾಜ್ಯ ಆಯುಕ್ತರು

## 80th NATIONAL ADVENUTRE PROGRAMME-An Experience

The 80th National Adventure Program was an exhilarating experience for the Scouts and Guides of Delhi Public School Bangalore South held from 5th to 10th January 2025 at Kurseong, Darjeeling, West Bengal. The event provided a unique opportunity for 10 Scouts and 15 Guides to explore nature, develop skills, and foster camaraderie.

**Day 1:** Arrival and Settling In : The team traveled by air to Bagdogra Airport and then by taxi to the campsite. Lunch was enjoyed en route. Upon arrival, essentials like mattresses and buckets were provided by the warden, and we settled into our rooms. After tea and dinner, we rested early, marking the first day as one of acclimatization and getting familiar with the serene campsite. **Day 2:** Registration and Exploration : The day began at 6:30 a.m., followed by breakfast and registration, where 139 participants were registered. Hoodies were distributed as gifts. After lunch, a grand flag ceremony took place. At 3:00 p.m., we embarked on a warm-up hike to Kurseong town, exploring local shops and soaking in the atmosphere. The evening campfire and integration session brought all participants together, setting a lively tone for the days ahead.

**Day 3:** Trekking and Adventure : An early start at 5:30 a.m. saw the team participating in BP six exercises against the backdrop of a stunning sunrise. Post-breakfast, we embarked on a 16-kilometer trek, visiting Kurseong College, Dowhill Eco Park, and the West Bengal Forest School Museum. Lunch was enjoyed in the open field at a BSF repeater station. On the return journey, we paused near a grand Hanuman statue before reaching the campsite. A birthday celebration during the campfire added joy to the evening. **Day 4:** Darjeeling Exploration : The highlight of the program was the visit to Darjeeling. After breakfast, we drove to the Himalayan Mountaineering Institute, where we watched a film on India's mission to Antarctica and engaged in adventure activities like ziplining, tree-top obstacles, and archery. A tour of the institute and shopping at Chowrasta completed the day. Returning to the campsite, we enjoyed hot soup and retired early.

**Day 5:** Skills and Performance : Despite foggy conditions, the day began with exciting activities like archery, rifle shooting, and sky cycling. The backwoodsman cooking session tested our outdoor culinary skills, as we prepared meals using self-made stoves. In the evening, the grand campfire featured captivating performances, with our school presenting two dances. **Day 6:** Closing Ceremony and Farewell : The final day started early with the flag ceremony. After breakfast, the feedback session and closing ceremony marked the end of the program. Certificates were presented by Mr. Vivek Kumar Das, and participants exchanged goodbyes. The remaining team spent the afternoon shopping for scarves and tracksuits, followed by a visit to Eagles Crag for a breathtaking sunset.

**Day 7:** Departure : On the last day, we packed and returned the provided gear before departing for Bagdogra Airport. A final talk and dispersal took place at Bengaluru Airport, concluding the unforgettable adventure.

**Reflections :** The program challenged us to adapt to high altitudes, extreme cold (4°C–12°C), and local cuisine unfamiliar to us. Despite these challenges, the experience enriched our skills, deepened our bonds, and left us with cherished memories. We extend our heartfelt gratitude to our Principal, the Management, and the Head of the Department for their support and encouragement, which made this remarkable journey possible.

Unit Leaders
Delhi Public School Bengaluru South

# ಶ್ರದ್ಧಾಂಜಲಿ



ಶಿವಮೊಗ್ಗ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾಗಿದ್ದ **ಶ್ರೀ ಕೆ.ಪಿ. ಬಿಂದು ಕುಮಾರ್** ರವರು ಫೆಬ್ರವರಿ 21, 2025ರಂದು ನಿಧನರಾದರು.

ಇವರಿಗೆ 67 ವರ್ಷ ವಯಸ್ಸಾಗಿತ್ತು. ಶ್ರೀಯುತರು ಸ್ಕೌಟ್ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದ ತಮ್ಮ ತಂದೆ ಶ್ರೀ ಕೆ.ಪಿ. ಮಹದೇವಪ್ಪ ರವರ ಮಾರ್ಗದರ್ಶನದಲ್ಲಿ ಕಬ್ ಆಗಿ ಚಳುವಳಿ ಸೇರಿಕೊಂಡರು. ನಂತರ ಸ್ಕೌಟಿಂಗ್‌ನಲ್ಲಿ ಮುಂದುವರೆಯುತ್ತಾ ನಾರ್ವೇ ದೇಶದಲ್ಲಿ ನಡೆದ ಅಂತರರಾಷ್ಟ್ರೀಯ ಜಂಬೂರೀಯಲ್ಲಿ ಭಾಗವಹಿಸಿದ್ದರು.

ತಮ್ಮ ವಿದ್ಯಾರ್ಥಿ ಜೀವನದಲ್ಲಿ ಸಹ್ಯಾದ್ರಿ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘಟನೆಯ ಅಧ್ಯಕ್ಷರಾಗಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ತಮ್ಮ ಕಾನೂನು ಪದವಿಯ ನಂತರ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯವಾದಿಗಳಾಗಿ ವೃತ್ತಿ ಜೀವನ ನಡೆಸಿದರು. ತದನಂತರ ಶಿವಮೊಗ್ಗಕ್ಕೆ ಹಿಂದಿರುಗಿ ತಮ್ಮ ವೃತ್ತಿಯನ್ನು ಮುಂದುವರೆಸಿದರು. ಅಂದಿನ ಜಿಲ್ಲಾ ಮುಖ್ಯ ಆಯುಕ್ತರಾಗಿ ಶ್ರೀ ಟಿ.ವಿ. ನಾರಾಯಣ ಶಾಸ್ತ್ರೀ ಇದ್ದ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿ ಹದಿನಾಲ್ಕು ವರ್ಷ ಸೇವೆ ಸಲ್ಲಿಸಿದರು. ನಂತರ ಜಿಲ್ಲಾ ಸ್ಕೌಟ್ ಆಯುಕ್ತರಾಗಿ ಐದು ವರ್ಷ ಸೇವೆ ಸಲ್ಲಿಸಿ 2024 ಏಪ್ರಿಲ್‌ನಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾಗಿ ನಿಯುಕ್ತಿಗೊಂಡರು. ಜಿಲ್ಲಾ ಸಂಸ್ಥೆಯ ವತಿಯಿಂದ ಆಯೋಜಿಸಲಾದ ಸ್ಕೌಟ್ ಶತಮಾನೋತ್ಸವ, ಗೈಡ್ ಶತಮಾನೋತ್ಸವ, ಜಿಲ್ಲಾ ರ್‍ಯಾಲಿಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದರು. ರಾಜ್ಯ ಸಂಸ್ಥೆಯವರು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಯೋಜಿಸುತ್ತಿದ್ದ ಜಾಂಬೂರೇಟ್‌ಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದರು.

ಶ್ರೀಯುತರು ತಮ್ಮ ಧರ್ಮಪತ್ನಿ ಶ್ರೀಮತಿ ಪಂಕಜ, ಮಗ ಶ್ರೀ ಶ್ರವಣ್ ಕುಮಾರ್, ಸೊಸೆ ಮತ್ತು ಅಪಾರ ಬಂಧು – ಬಳಗವನ್ನು ಅಗಲಿದ್ದಾರೆ. ಅವರ ಅಗಲಿಕೆಯು ಸಂಸ್ಥೆಗೆ, ಕುಟುಂಬಕ್ಕೆ ತುಂಬಾ ನಷ್ಟವಾಗಿದೆ.

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ, ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ನೀಡಲೆಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ. ಜಿ. ಆರ್. ಸಿಂಧ್ಯಾ ಮತ್ತು ಎಲ್ಲಾ ಪದಾಧಿಕಾರಿಗಳು ಕೋರಿದ್ದಾರೆ.



**ಶ್ರೀಮತಿ ಶರ್ಫುನ್ನಿಸಾ ಡಿ.,** ಎ.ಎಲ್.ಟಿ.(ಜಿ) ಇವರು ಫೆಬ್ರವರಿ 10 ರಂದು ಚಿತ್ರದುರ್ಗದಲ್ಲಿ ನಿಧನರಾದರು. ಇವರಿಗೆ 87 ವರ್ಷ ವಯಸ್ಸಾಗಿತ್ತು. ಇವರು 24 ಫೆಬ್ರವರಿ 1938ರಲ್ಲಿ ಜನಿಸಿದರು. ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ಚಿತ್ರದುರ್ಗ ಜಿಲ್ಲೆಯಲ್ಲಿ ಸಹಾಯಕ ಜಿಲ್ಲಾ ಗೈಡ್ ಆಯುಕ್ತರಾಗಿ ಸೇವೆ ಸಲ್ಲಿಸಿದರು. ಇವರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, ಅಭಿನಂದನಾ ಪತ್ರಗಳನ್ನು ಸಂದಿವೆ. ಇವರು ಚಿತ್ರದುರ್ಗ ಶಿಕ್ಷಕ ಗುರುಭವನ ನಿರ್ಮಾಣಕ್ಕೆ ಧನ ಸಹಾಯ ಸಹಾಯದನ ನೀಡಿರುತ್ತಾರೆ. ಇವರ ಆತ್ಮಕ್ಕೆ ಶಾಂತಿ ದೊರಕಲಿ ಮತ್ತು ಇವರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಡಬ್ಲ್ಯು.ಇ.ಎಸ್. ಕುಮಾರ್,** ನಿವೃತ್ತ ದೈಹಿಕ ಶಿಕ್ಷಕರು ಹಾಗೂ ಮಾಜಿ ಜಿಲ್ಲಾ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕೋಲಾರ ಇವರು 23 ಫೆಬ್ರವರಿ 2025ರಂದು ಕೋಲಾರ ಜಿಲ್ಲೆ ಹೊನ್ನೆನಹಳ್ಳಿಯಲ್ಲಿ ನಿಧನರಾದರು. ಇವರಿಗೆ 76 ವರ್ಷ ವಯಸ್ಸಾಗಿತ್ತು.



ಕೋಲಾರ ಉತ್ತರ ಜಿಲ್ಲಾ ಸಂಸ್ಥೆಯಲ್ಲಿ 6 ವರ್ಷಗಳ ಕಾಲ ಜಿಲ್ಲಾ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು, ಮೂಲತಃ ಸರ್ಕಾರಿ ದೈಹಿಕ ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದರು, ಇವರ ಕಾರ್ಯದರ್ಶಿ ಅವಧಿಯಲ್ಲಿ ರಾಜ್ಯ ಮಟ್ಟದ 24 ನೇ ಕಬ್ ಮತ್ತು ಬುಲ್ ಬುಲ್ ಉತ್ಸವ ಯಶಸ್ವಿಯಾಗಿ ನಡೆಯಿತು, ಶ್ರೀಯುತರು ಉತ್ತಮ ಬ್ಯಾಂಡ್ ಸೆಟ್ ತರಬೇತಿದಾರರು, ಸಂಗೀತ ರಚನೆಕಾರರು, ಹಾಡುಗಾರರು ,ಇವರ ಸೇವಾ ಅವಧಿಯಲ್ಲಿ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟದ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆದ ಶಿಬಿರಗಳು ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡುತ್ತಿದ್ದರು.

# ಶ್ರದ್ಧಾಂಜಲಿ



ರಾಜ್ಯ ಸಂಸ್ಥೆಯಲ್ಲಿ ರಾಜ್ಯ ಸಂಘಟನಾ ಆಯುಕ್ತರಾಗಿರುವ ಶ್ರೀಮತಿ ಮಂಜುಳ .ಸಿ ಇವರ ಮಾತೃಶ್ರೀಯವರಾದ **ಶೀಮತಿ ಚಂದ್ರಮ್ಮರವರು** ಫೆಬ್ರವರಿ 21, 2025ರ ಶುಕ್ರವಾರದಂದು ದಾವಣಗೆರೆಯಲ್ಲಿ ನಿಧನರಾದರು. ಇವರಿಗೆ 88 ವರ್ಷ ವಯಸ್ಸಾಗಿತ್ತು. ಸಹನಾ ಮೂರ್ತಿಯಾದ ಇವರು ಅನೇಕರಿಗೆ ವಿದ್ಯೆ, ಊಟ, ವಸತಿಯನ್ನು ನೀಡಿ ಆದರ್ಶ ಜೀವನವನ್ನು ನಡೆಸಿದವರು. ಇವರ ಸರಳತೆ ಮತ್ತು ಸಜ್ಜನಿಕೆಯ ಹಿರಿಮೆಯನ್ನು ಇತರರಿಗೆ ತೋರಿಸಿದವರು. ಇರುವಷ್ಟು ದಿನ ಇತರರಿಗೆ ಕೈಲಾದ ಸಹಾಯ ಮಾಡಬೇಕು, ಭಗವಂತನಲ್ಲಿ ನಂಬಿಕೆಯನ್ನು ಇಟ್ಟು ದಿನಚರಿಯನ್ನು ಸಾಗಿಸಬೇಕೆಂದು ತಿಳಿಹೇಳುತ್ತಿದ್ದರು. ದೇವರನಾಮ, ಜೀವನಸಾರ ಮತ್ತು ನೀತಿಮಾರ್ಗಗಳನ್ನು ತತ್ವಪದ ಮತ್ತು ಹಾಡುಗಳ ಮೂಲಕ ಅತ್ಯುತ್ತಮವಾಗಿ ಹಾಡುತ್ತಿದ್ದರು. ಇಬ್ಬರು ಸುಪುತ್ರಿಯರು, ಒಬ್ಬ ಪುತ್ರ, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಮರಿ ಮೊಮ್ಮಕ್ಕಳನ್ನು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.



**ಕು. ಆಕಾಶ್ ರಾಯ್,** ಸ್ಕೌಟ್ಸ್ 9ನೇ ತರಗತಿ ಜೆ.ಸಿ. ಸ್ಕೂಲ್ ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ ಇವರು ಫೆಬ್ರವರಿ 09 ರಂದು ಶೃಂಗೇರಿಯಲ್ಲಿ ನಿಧನ ಹೊಂದಿದನು. ಈತನಿಗೆ 14 ವರ್ಷ ವಯಸ್ಸಾಗಿತ್ತು. ಈತನು ಸ್ಕೌಟ್‌ನಲ್ಲಿ ರಾಜ್ಯ ಪುರಸ್ಕಾರ ಪ್ರಶಸ್ತಿಯನ್ನು ಪಡೆದಿದ್ದು, ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದ ಹಲವಾರು ಶಿಬಿರಗಳಲ್ಲಿ ಭಾಗವಹಿಸಿದ್ದನು.



**ಮಾ. ಶ್ರವಣ್,** ಸ್ಕೌಟ್ 7ನೇ ತರಗತಿ, ಇಂದ್ರಪ್ರಸ್ಥ ವಿದ್ಯಾಲಯ ಉಪ್ಪಿನಂಗಡಿ, ದಕ್ಷಿಣ ಕನ್ನಡ ಜಿಲ್ಲೆ ಈತನು ಫೆಬ್ರವರಿ 18 ರಂದು ನಿಧನ ಹೊಂದಿದನು. ಈತನಿಗೆ 13 ವರ್ಷ ವಯಸ್ಸಾಗಿತ್ತು.



ಡಾ. ರಾಧಾಕೃಷ್ಣ ಶಾಲೆ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆಯಲ್ಲಿ ಎರಡನೇ ತರಗತಿ, ಪ್ರಥಮ ಚರಣ್ ಕಬ್ ಆಗಿದ್ದ **ಕು. ಪ್ರೀತಮ್ ಜಿ.ಎಂ.** ಸೌದತ್ತಿ ಯಲ್ಲಮ್ಮ ದರ್ಶನ ಪಡೆದು ಮನೆಗೆ ವಾಪಸ್ ಕಾರಿನಲ್ಲಿ ಬರುವಾಗ ಅಪಘಾತಕ್ಕೀಡಾಗಿ ಫೆಬ್ರವರಿ 14, 2025 ರಂದು ಮರಣ ಹೊಂದಿದನು.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ




ಫೆಬ್ರವರಿ 06 ರಂದು ಸ್ಕೌಟಿಂಗ್ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೊವೆಲ್‌ರ ಮರಿಮೊಮ್ಮಗನಾದ ಶ್ರೀ ಡೇವಿಡ್ ರಾಬರ್ಟ್ ಬೇಡನ್ ಪಾವೆಲ್ ರವರು ಕರ್ನಾಟಕದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಕೇಂದ್ರ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ರಾಜ್ಯ ಸಂಸ್ಥೆಯಿಂದ ಗೌರವಿಸಲಾಯಿತು. ರಾಜ್ಯ ಪದಾಧಿಕಾರಿಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಶ್ರೀ ಎಂ.ಎ. ಖಾಲೀದ್, ಶ್ರೀಮತಿ ಗೀತಾ ನಟರಾಜ್, ಶ್ರೀ ಸಿ.ಎಸ್. ರೆಡ್ಡಿ, ಶ್ರೀ ಕೆ. ಗಂಗಪ್ಪಗೌಡ, ಶ್ರೀಮತಿ ಆಶಾ ಪ್ರಸನ್ನಕುಮಾರ್ ಶ್ರೀ ಜಿ.ಬಿ. ಮನ್ನಿಕೇರಿ, ಶ್ರೀ ಹೆಚ್.ಎಂ. ಸಿದ್ದರಾಮಸ್ವಾಮಿ, ಶ್ರೀ ಎ.ಎಸ್. ಮಧುಸೂದನ್ ಅವರುಗಳು ಉಪಸ್ಥಿತರಿದ್ದರು.




ಫೆಬ್ರವರಿ 22 ರಂದು ದಯಾನಂದಸಾಗರ ಸಭಾಂಗಣ ಕುಮಾರಸ್ವಾಮಿ ಬಡಾವಣೆ, ಬೆಂಗಳೂರಿನಲ್ಲಿ "ಸಂಸ್ಥಾಪಕರ ಹುಟ್ಟುಹಬ್ಬ ಮತ್ತು ಚಿಂತನಾ ದಿನಾಚರಣೆ, ಸ್ಕೌಟರ್ಸ್ ಮತ್ತು ಗೈಡರ್ಸ್ ಸಮಾವೇಶ, ರಾಜ್ಯಮಟ್ಟದ ಮೆಡಲ್ ಆಫ್ ಮೆರಿಟ್ ಪ್ರಶಸ್ತಿ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ/ ಶಿಕ್ಷಕಿ ಪ್ರಶಸ್ತಿ ಪಡೆದ ಸ್ಕೌಟರ್ಸ್–ಗೈಡರ್ಸ್‌ಗಳಿಗೆ ಅಭಿನಂದನೆ. ಹಿಮಾಲಯ ವೃಕ್ಷಮಣಿ ಧಾರಕರುಗಳಿಗೆ ಪ್ರಮಾಣಪತ್ರ ವಿತರಣಾ ಸಮಾರೋಪ ಸಮಾರಂಭ" ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಮುಖ್ಯ ಅತಿಥಿಗಳಾಗಿ ಮಾಜಿ ಅಡ್ವಕೇಟ್ ಜನರಲ್ ಶ್ರೀ ರವಿವರ್ಮ ಕುಮಾರ್ ರವರು, ಶ್ರೀ ಗಾಳಿಸ್ವಾಮಿರವರು ಕಾರ್ಯದರ್ಶಿಗಳು, ದಯಾನಂದ್‌ಸಾಗರ ಶಿಕ್ಷಣ ಸಂಸ್ಥೆ, ಬೆಂಗಳೂರು ಭಾಗವಹಿಸಿದ್ದರು. ರಾಜ್ಯ ಪದಾಧಿಕಾರಿಗಳಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಶ್ರೀ ಚಿನ್ನಸ್ವಾಮಿ ರೆಡ್ಡಿ, ಶ್ರೀಮತಿ ಗೀತಾ ನಟರಾಜ್, ಶ್ರೀ ಕೆ. ಗಂಗಪ್ಪಗೌಡ, ಶ್ರೀ ಎನ್. ಶ್ರೀನಿವಾಸನ್, ಶ್ರೀ ಬಿ.ಕೆ. ಬಸವರಾಜ ಉಪಸ್ಥಿತರಿದ್ದರು.

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)




If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26